ಸಂಪುಟ: 05 ಸಂಚಿಕೆ: 151 ಪುಟಗಳು: 08 ಬುಧವಾರ 13 ಆಗಸ್ಟ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಶಸ್ಸಿನ ಬಗೆಗಿನ ನನ್ನ ವ್ಯಾಖ್ಯಾನವು ಸಾಕಷ್ಟು ಪ್ರಬಲವಾಗಿದ್ದರೆ ಸೋಲು ನನ್ನನ್ನು ಎಂದಿಗೂ ಹಿಂದಿಕ್ಕುವುದಿಲ್ಲ.

## ಪೌರತ್ವ ದೃಢೀಕರಿಸಲು 'ಆಧಾರ್' ದಾಖಲೆ ಅಲ್ಲ: ಒಪ್ಪಿದ ಸುಪ್ರೀಂ

• ಉದಯವಾಹಿನಿ, ಬೆಂಗಳೂರು

ಪೌರತ್ವವನ್ನು ದೃಢೀಕರಿಸಲು ಆಧಾರ್ ಕಾರ್ಡ್ ಅನ್ನು ನಿರ್ಣಾಯಕ ದಾಖಲೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂಬ ಚುನಾವಣಾ ಆಯೋಗದ ನಿಲುವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಕೊಂಡಿದೆ. ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಹತ್ವದ ನಿಲುವು ತೆಗೆದುಕೊಂಡಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್ಮಲ್ಯ ಬಾಗ್ಚಿ ಅವರು ಅರ್ಜಿಗಳ ವಿಚಾರಣೆ ನಡೆಸುತ್ತಿದ್ದಾರೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಪತ್ರ (ಎಪಿಕ್) ಮತ್ತು ಪಡಿತರ ಚೀಟಿಗಳನ್ನು ಪೌರತ್ವ ದೃಢೀಕರಿಸಲು ನಿರ್ಣಾಯಕ ಪುರಾವೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಇದನ್ನು ಒಪ್ಪಿಕೊಂಡ ಪೀಠ, ಈ ದಾಖಲೆಗಳಿಗೆ ಬೆಂಬಲವಾಗಿ ಇತರೆ ದಾಖಲೆಗಳನ್ನೂ ನೀಡಬೇಕು ಎಂದು ಹೇಳಿತು. ಆಧಾರ್ ಅನ್ನು ಪೌರತ್ವದ ನಿರ್ಣಾಯಕ ಪುರಾವೆಯಾಗಿ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಹೇಳುವುದು ಸರಿಯಾಗಿಯೇ ಇದೆ. ಆಧಾರ್ ಅನ್ನೂ ಪರಿಶೀಲನೆಗೆ ಒಳಪಡಿಸಬೇಕು. ಆಧಾರ್ ಕಾಯ್ದೆಯ ಸೆಕ್ಷನ್ 9 ನಿರ್ದಿಷ್ಟವಾಗಿ ಅದನ್ನೇ ಹೇಳುತ್ತದೆ' ಎಂದು ಪೀಠವು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ತಿಳಿಸಿತು.

## ಎಸ್‌ಎಎಫ್ ಕಾಯಂ ಆಗಿ ಇರಬೇಕೆಂದೇನೂ ಇಲ್ಲ

• ಉದಯವಾಹಿನಿ, ಬೆಂಗಳೂರು

'ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೋಮು ಚಟುವಟಿಕೆಗಳನ್ನು ಹತ್ತಿಕ್ಕಲು ಹೊಸದಾಗಿ ವಿಶೇಷ ಕಾರ್ಯಪಡೆ (ಎಎಫ್) ರಚಿಸಲಾಗಿದ್ದು, ಇದು ಕಾಯಂ ಆಗಿ ಇರಬೇಕೆಂದೇನೂ ಇಲ್ಲ. ಶಾಂತಿ ನೆಲಸುವುದಷ್ಟೇ ಮುಖ್ಯ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. ವಿಧಾನಸಭೆಯಲ್ಲಿ ಬಿಜೆಪಿಯ ವೇದವ್ಯಾಸ ಕಾಮತ್ ಅವರ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸ್ಥಿತಿ ಹದಗೆಟ್ಟಿದ್ದು, ಅಲ್ಲಿನವರು ತಮ್ಮ ಮಕ್ಕಳನ್ನು ವ್ಯಾಸಂಗಕ್ಕಾಗಿ ಇತರೆಡೆ ಕಳುಹಿಸುತ್ತಿದ್ದಾರೆ. ಉದ್ಯಮಿಗಳು ಹೂಡಿಕೆಗೆ ಹಿಂದೇಟು ಹಾಕುತ್ತಿದ್ದಾರೆ ಎಂಬ ಮಾಹಿತಿ ಪಕ್ಷದ ಚುನಾವಣಾ ಪ್ರಣಾಳಿಕೆ ಸಮಿತಿಯ ಮಾಹಿತಿ ಸಂಗ್ರಹದ ವೇಳೆ ಲಭ್ಯವಾಗಿತ್ತು. ಕೋಮುಸೌಹಾರ್ದವೂ ಹಾಳಾಗಿದೆ ಎಂಬ ಆತಂಕವೂ ಆ ಭಾಗದ ಜನಪ್ರತಿನಿಧಿಗಳಲ್ಲಿದೆ' ಎಂದರು.

## 2,400 ನಾಯಿಗಳಿಗೆ ವಿಷ ಹಾಕಿ ಸಾಯಿಸಿದ್ದೆವು

• ಉದಯವಾಹಿನಿ, ಬೆಂಗಳೂರು

ಬೀದಿನಾಯಿಗಳ ಹಾವಳಿಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು. ಚಿಕ್ಕಮಗಳೂರು ಜಿಲ್ಲೆಗೆ ನೀಡಿರುವ ಅನುದಾನದ ಬಗ್ಗೆ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರು ಕೇಳಿದ್ದ ಪ್ರಶ್ನೆಗೆ ಪೌರಾಡಳಿತ ಸಚಿವ ರಹೀಂ ಖಾನ್ ಹತ್ತಾರು ಪುಟಗಳ ಉತ್ತರ ನೀಡಿದ್ದರು. ಉತ್ತರ ಪತ್ರವನ್ನು ತಿರುವುಹಾಕಿದ ಭೋಜೇಗೌಡರು, ಅ ಇಂದ ಉಊವರೆಗೂ ಉತ್ತರ ನೀಡಿದ್ದಾರೆ ಎಂದರು. ನಂತರ ಮಾತನ್ನು ಬೀದಿನಾಯಿಗಳತ್ತ ತಿರುಗಿಸಿದರು. ಮಹಾಸ್ವಾಮಿ, ನಗರ–ಪಟ್ಟಣಗಳಲ್ಲಿ ಬೀದಿ ನಾಯಿಗಳ ಹಾವಳಿ ವಿಪರೀತ ಹೆಚ್ಚಾಗಿದೆ. ಬೀದಿನಾಯಿಗಳಿಗೆ ಏನಾದರೂ ಮಾಡಬೇಕು' ಎಂದರು. ರಹೀಂ ಖಾನ್, 'ಸುಪ್ರೀಂ ಕೋರ್ಟ್ ಆದೇಶವಿದೆ. ಅವುಗಳಿಗೆ ಲಸಿಕೆ ಹಾಕಿಬಿಡಬಹುದು ಅಷ್ಟೇ' ಎಂದು ಉತ್ತರಿಸಿದರು. ನಾಯಿಗಳು ಕಚ್ಚುವುದನ್ನು ತಡೆಯಲು ಆಗುವುದಿಲ್ಲ. ಎಂದು ಸ್ಪಷ್ಟಪಡಿಸಿದರು.

## ರಾಜಕಾರಣಿಗಳಲ್ಲಿ ನಡುಕ ಹುಟ್ಟಿಸಿದ್ದ ರಾಮಚಂದ್ರ ಡಿ.ಹುದ್ದಾರ: ವಿವೇಕ ರೆಡ್ಡಿ

• ಉದಯವಾಹಿನಿ, ಬೆಂಗಳೂರು

ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶರಾಗಿದ್ದ ಸಂದರ್ಭದಲ್ಲಿ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರ ಕಾರ್ಯವೈಖರಿ ವಿಚಾರಣೆಗೆ ಎದುರಾಗುವ ರಾಜಕಾರಣಿಗಳಿಗೆ ನಡುಕ ಹುಟ್ಟಿಸುತ್ತಿತ್ತು. ಇವರೊಬ್ಬ ಅಪ್ಪಟ ಸಾರ್ವಜನಿಕ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ ನ್ಯಾಯಮೂರ್ತಿ' ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ ಬಣ್ಣಿಸಿದರು. ಹೈಕೋರ್ಟ್ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರು ಮಂಗಳವಾರ ನಿವೃತ್ತರಾದರು. ಬೆಂಗಳೂರು ವಕೀಲರ ಸಂಘದ (ಎಎಬಿ) ವತಿಯಿಂದ ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಸನ್ಮಾನಿಸಿ ಅವರನ್ನು ಬೀಳ್ಕೊಡಲಾಯಿತು. ವಿವೇಕ ರೆಡ್ಡಿ, 'ಕಾನೂನು ಎಂಬುದು ತರ್ಕವಲ್ಲ. ಅದೊಂದು ಅನುಭವ ಎಂಬುದನ್ನು ತಮ್ಮ ಮೂರು ದಶಕಗಳಿಗೂ ಹೆಚ್ಚಿನ ಸೇವಾವಧಿಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಮತ್ತು ಹೈಕೋರ್ಟ್ ನ್ಯಾಯಮೂರ್ತಿಯಾಗಿ ರಾಮಚಂದ್ರ ಹುದ್ದಾರ ಅವರು ತೋರಿಸಿಕೊಟ್ಟಿದ್ದಾರೆ. ಇದು ಕಿರಿಯರಿಗೆ ಮಾರ್ಗದರ್ಶಕ' ಎಂದರು.

# ಕಾಲ್ತುಳಿತ ಪ್ರಕರಣ, ರಾಜಣ್ಣ ರಾಜೀನಾಮೆ ಗುದ್ದಾಟ ನಡುವೆ ಬರೋಬ್ಬರಿ 15 ವಿಧೇಯಕ ಮಂಡನೆ



### ರಾಜಣ್ಣ ವಜಾ

**ರಾಜುಗೌಡ ಹೊಸಬಾಂಬ್**

ಕೆ.ಎನ್.ರಾಜಣ್ಣ ಅವರು ಪ್ರಭಾವಿ ನಾಯಕ. ಅವರ ವಜಾ ಹಿಂದೆ ಮಹಾನಾಯಕನ ಪಾತ್ರ ಇದೆ ಎಂದು ಮಾಜಿ ಸಚಿವ ರಾಜುಗೌಡ ಹೊಸ ಬಾಂಬ್ ಸಿಡಿಸಿದ್ದಾರೆ. ಸುರಪುರದಲ್ಲಿ ಮಾತನಾಡಿದ ಅವರು, ರಾಜಣ್ಣನ ಬಳಿಕ ಸತೀಶ್ ಜಾರಕಿಹೊಳಿ ಮುಗಿಸಲು ಪ್ಲಾನ್ ಇದೆ. ನಾಗೇಂದ್ರ, ರಾಜಣ್ಣ ಆಯ್ತು ನೆಕ್ಸ್ಟ್ ಸತೀಶ್ ಜಾರಕಿಹೊಳಿ ಸರದಿ. ಓಪನ್ ಆಗಿಯೇ ಹೇಳ್ತೀನಿ. ನಮ್ಮ ಕಮ್ಯುನಿಟಿಯಲ್ಲಿ ನಾವು ಹುಟ್ಟುತ್ತಲೇ ನಾಯಕರು. ನಮ್ಮಲ್ಲಿ ಒಬ್ಬರೇ ನಾಯಕರಾಗಬೇಕು ಅಂತೇನಿಲ್ಲ. ರಾಜಣ್ಣ ಮಂತ್ರಿ ಸ್ಥಾನದಿಂದ ಇಳಿದರು ಅಂದ್ರೆ ನಮ್ಮಲ್ಲೇ ಒಬ್ಬರಿಗೆ ಸಿಗುತ್ತೆ ಅಂತ ಪ್ಲ್ಯಾನ್ ಹಾಕ್ತೀವಿ. ಮಂತ್ರಿ ಸ್ಥಾನ ಕೊಡುವ ಆಸೆಯನ್ನ ಮೇಲಿನವರು ತೋರಿಸಿಬಿಡ್ತಾರೆ. ನಾನ್ ಮಂತ್ರಿ ಆಗ್ತೀನಿ, ಯಾಕ್ ಇದನ್ನ ಮಾಡೋಣ ಅಂತೀವಿ.

### ಆಶೋಕ್‌ಗೆ ಡಿಸಿಎಂ ತಿರುಗೇಟು

ನೀವು ಕೂಡ ಟ್ವೀಟ್ ಮಾಡಿ, ನೂರಾರು ಕನಸುಗಳನ್ನು ಆರ್‌ಸಿಬಿ ನನಸು ಮಾಡಿದೆ ಎಂದಿದ್ರಿ. ತೆರೆದ ಬಸ್ಸಿನಲ್ಲಿ ಆಟಗಾರರ ವಿಜಯೋತ್ಸವ ನಿರಾಕರಿಸುವ ಅಧ್ಯಕ್ಷ ಹಾಗೂ ಗೃಹ ಸಚಿವ ಅಸಮರ್ಥರಿ ಎಂದು ಅಂದು ಹೇಳಿದ್ರಲ್ಲ ಅದನ್ನ ಈಗ ಹೇಳಿ ಎಂದು ಡಿಕೆಶಿ, ಆರ್ ಅಶೋಕ್‌ಗೆ ತಿರುಗೇಟು ನೀಡಿದ್ರು.

**ಕುತೂಹಲ ಮೂಡಿಸಿದೆ ಮಾಜಿ ಸಚಿವರ ಮುಂದಿನ ನಡೆ**

• ಉದಯವಾಹಿನಿ, ಬೆಂಗಳೂರು

ವಿಧಾನಸಭೆಯಲ್ಲಿ ಕಾಲ್ತುಳಿತ ಪ್ರಕರಣ ಪ್ರತಿಧ್ವನಿಸಿತು. ಆರ್ ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ನಡೆದ 11 ಮಂದಿಯ ಸಾವಿನ ಪ್ರಕರಣದ ಬಗ್ಗೆ ಚರ್ಚೆ ನಡೆಯಿತು. ವಿಧಾನಸಭೆಯ ನಿಯಮ 69ರಡಿಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಈ ವಿಚಾರವನ್ನು ಪ್ರಸ್ತಾಪಿಸಿದ್ರು. ರಾಜ್ಯದಲ್ಲಿ ನಡೆದಿರೋ ಒಂದು ದೊಡ್ಡ ದುರಂತ ಎಂದ್ರು. ಈ ಘಟನೆಯ ಬಗ್ಗೆ ಎಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದ್ರು. ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಅಶೋಕ್ ಹಾಗೂ ಡಿಕೆ ಶಿವಕುಮಾರ್ ನಡುವೆ ಜಟಾಪಟಿ ನಡೆಯಿತು. ಸರ್ಕಾರದ ವೈಫಲ್ಯತೆಯೂ ಕಾರಣ ಇದು ಕೇವಲ ಸಮಾರಂಭದ ಅವ್ಯವಸ್ಥೆ ಮಾತ್ರ ಅಲ್ಲ, ಸರ್ಕಾರದ ವೈಫಲ್ಯತೆಯೂ ಇದೆ ಎಂದು ಆರ್ ಅಶೋಕ್ ಗುಡುಗಿದ್ರು. ಈ ದುರ್ಘಟನೆ ಬಗ್ಗೆ ಗಂಭೀರವಾಗಿ ಚರ್ಚೆಯಾಗಬೇಕು ಎಂದು ಆಗ್ರಹಿಸಿದ್ರು.

ಅಲ್ಲದೇ ಕಾರ್ಯಕ್ರಮದ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸರ್ಕಾರಗಳ ನಡುವೆ ಏನಾದರೂ ತಕರಾರು ಇತ್ತಾ ಎಂಬ ಪ್ರಶ್ನೆ ಮಾಡಿದ್ರು. ಜನಪ್ರತಿನಿಧಿಯೇ ಕಟ್ತಾರೆ ಕೋಟಿ ಕೋಟಿ ಬೆಟ್ಟಿಂಗ್ ಐಪಿಎಲ್ ಬಂದ್ಮೇಲೆ ಸಮಾಜಕ್ಕೆ ಏನು ಒಳ್ಳೆಯದು ಆಗಿದೆ ಹೇಳಿ ಎಂದು ಆರ್ ಅಶೋಕ್ ಪ್ರಶ್ನೆ ಮಾಡಿದ್ರು. ಐಪಿಎಲ್ ನಿಂದ ಸಾವಿರಾರು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಟ್ಟಿಂಗ್ ದಂಧೆ ಹುಟ್ಟಿಕೊಂಡು ಜನರು ಹಾಳಾಗ್ತಿದ್ದಾರೆ. ಅಡುಗೆ ಮನೆಯಲ್ಲಿ ಕಳ್ಳತನ ಮಾಡಿ ಬೆಟ್ಟಿಂಗ್ ಆಟ ಆಡಿದ ಉದಾಹರಣೆ ಕೂಡ ಇದೆ. ಎಲ್ಲಾ ಬಿಡಿ ಜನಪ್ರತಿನಿಧಿಗಳು ಕೋಟಿ ಕೋಟಿ ಬೆಟ್ಟಿಂಗ್ ಕಟ್ಟಿದ್ದಾರೆ. ಅವರು ಯಾರು ಅನ್ನೋದು ನನಗೂ ಗೊತ್ತು ನಿಮಗೂ ಗೊತ್ತು ಎಂದು ಆಶೋಕ್ ಆರೋಪ ಮಾಡಿದ್ರು.

**ಸಿದ್ದರಾಮಯ್ಯಗೆ ಇದೊಂದು ಕಪ್ಪು ಚುಕ್ಕೆ:** ಸರ್ಕಾರದ ಮನಸ್ಸು ಮಾಡಿದ್ರೆ ಹನ್ನೊಂದು ಜನರ ಪ್ರಾಣ ಉಳಿಸಬಹುದಿತ್ತು ಎಂದು ಆರ್ ಅಶೋಕ್ ಹೇಳಿದ್ದು, ಸಿದ್ದರಾಮಯ್ಯ ಅವರಿಗೆ ಇದೊಂದು ಕಪ್ಪು ಚುಕ್ಕೆ. 24 ಗಂಟೆಯಲ್ಲಿ ವಿಜಯೋತ್ಸವ ಆಚರಣೆ ಮಾಡುವ ಅವಶ್ಯಕತೆ ಇತ್ತಾ ಎಂದು ಪ್ರಶ್ನೆ ಮಾಡಿದ್ರು.

**ಡಿಕೆಶಿ ಕಾಲು ಎಳೆದ ಆರ್ ಅಶೋಕ್:** ಆರ್‌ಸಿಬಿ ವಿಜಯೋತ್ಸವದಲ್ಲಿನ ಕಾಲ್ತುಳಿತ ಪ್ರಕರಣಕ್ಕೂ ಮುನ್ನ ಡಿ.ಕೆ. ಶಿವಕುಮಾರ್ ಮಾಧ್ಯಮ ಹೇಳಿಕೆಯ ವಿಷಯವನ್ನು ಆರ್ ಅಶೋಕ್ ಪ್ರಸ್ತಾಪಿಸಿದರು. ವಿಜಯೋತ್ಸವದ ಬಗ್ಗೆ ಪ್ರತಿ ಕ್ಷಣದ ಮಾಹಿತಿಯನ್ನು ಪಡೆಯುವ ಸಾಮರ್ಥ್ಯ ಡಿ.ಕೆ. ಶಿವಕುಮಾರ್ ಅವರಿಗೆ ಇದೆ ಎಂದು ಆರ್ ಅಶೋಕ್, ಡಿಕೆಶಿಯ ಕಾಲು ಎಳೆದಿದ್ದಾರೆ.

ಡಿಸಿಎಂ ಡಿಕೆಶಿ ಕೊಟ್ಟ ಮಾಧ್ಯಮ ಹೇಳಿಕೆ ಬಗ್ಗೆ ಮಾತಾಡಿದ ಆರ್ ಅಶೋಕ್, ಈ ಹೇಳಿಕಯನ್ನೆಲ್ಲಾ ಕೊಟ್ಟಿದ್ದು ಈ ರಾಜ್ಯದ ಉಪ ಮುಖ್ಯಮಂತ್ರಿಗಳು, ಮೋಸ್ಟ್ ಪವರ್ ಫುಲ್ ನಾಯಕ. ವಿಜಯೋತ್ಸವದ ಬಗ್ಗೆ ಪ್ರತಿ ಕ್ಷಣದ ಮಾಹಿತಿ ಪಡೆಯುವ ಕೆಪಾಸಿಟಿ ಡಿಕೆಶಿ ಅವರಿಗಿದೆ.ಸಿದ್ದರಾಮಯ್ಯ ವಿಧಾನಸೌಧದ ಕಾರ್ಯಕ್ರಮ ಅಷ್ಟೇ, ಚಿನ್ನಸ್ವಾಮಿ ಸ್ಟೇಡಿಯಂ ಕಾರ್ಯಕ್ರಮ ಗೊತ್ತಿಲ್ಲ ಅಂದ್ರು. ಡಿಕೆ ಶಿವಕುಮಾರ್ ಮಾತ್ರ, ಚಿನ್ನಸ್ವಾಮಿ ಸ್ಟೇಡಿಯಂದು ಇದೆ ಎಂದಿದ್ರು, ಎಂದು ಆಶೋಕ್ ಸದನಕ್ಕೆ ಮಾಹಿತಿ ನೀಡಿದ್ರು.

**ಆರ್ ಅಶೋಕ್, ಡಿಸಿಎಂ ಡಿಕೆಶಿ ನಡುವೆ ಜಟಾಪಟಿ!**

# ಪ್ರಶ್ನೆಗಳ ಸುರಿಮಳೆ ಸದನ ರಣಕಹಳೆ



**ಪ್ರಹ್ಲಾದ್ ಜೋಶಿ ಗಂಭೀರ ಆರೋಪ**

ಹೊಸದಿಲ್ಲಿಯಲ್ಲಿ ಮಾತನಾಡಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸುವ ಮೂಲಕ, ಕಾಂಗ್ರೆಸ್ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಅವಮಾನ ಮಾಡಿದೆ ಎಂದು ಹರಿಹಾಯ್ದಿದ್ದಾರೆ. ಕೆ.ಎನ್. ರಾಜಣ್ಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತುಂಬಾ ಆಪ್ತರು ಎಂದು ಪರಿಗಣಿಸಲಾಗಿದೆ. ನನಗೆ ತಿಳಿದಿರುವಂತೆ, ನೀವು ರಾಜೀನಾಮೆ ನೀಡಬೇಕು ಎಂದು ಸಿದ್ದರಾಮಯ್ಯ ಅವರು ರಾಜಣ್ಣ ಅವರಿಗೆ ಸೂಚಿಸಿದ್ದರು. ಆದರೆ ರಾಹುಲ್ ಗಾಂಧಿ ಅವರು ರಾಜಣ್ಣ ಅವರನ್ನು ವಜಾಗೊಳಿಸಬೇಕು ಎಂಬ ಸಂದೇಶ ನೀಡಿರುವುದು ಸ್ಪಷ್ಟ. ರಾಹುಲ್ ಗಾಂಧಿ ಹಿಂದುಳಿದ ವರ್ಗದ ಬಗ್ಗೆ ಹೊಂದಿರುವ ಭಾವನೆ ಎಂತದ್ದು ಎಂಬುದಕ್ಕೆ ಇದು ಸಾಕ್ಷಿ ಎಂದು ಪ್ರಹ್ಲಾದ್ ಜೋಶಿ ಕಿಡಿಕಾರಿದ್ದಾರೆ.



ಕರ್ನಾಟಕ ವಿಧಾನಮಂಡಲ ಮುಂಗಾರು ಅಧಿವೇಶನದ ಎರಡನೇ ದಿನದ ಕಲಾಪ ನಡೆಯುತ್ತಿದೆ. ಸಚಿವ ಕೆಎನ್ ರಾಜಣ್ಣ ತಲೆದಂಡ, ಆರ್ ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ಪ್ರಕರಣ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳಾದ ಬಿಜೆಪಿ, ಜೆಡಿಎಸ್ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಮುಗಿಬಿದ್ದಿವೆ. ಇದರ ನಡುವೆ ಮಂಗಳವಾರ ಬರೋಬ್ಬರಿ 15 ವಿಧೇಯಕಗಳು ಮಂಡನೆಯಾಗಿವೆ. ಸಚಿವರದ ಡಾ. ಜಿ ಪರಮೇಶ್ವರ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಸಂತೋಷ್ ಲಾಡ್, ಸುಧಕಾರ್ ಹಾಗೂ ಬೋಸರಾಜ ಪರವಾಗಿ ಕಾನೂನು ಸಚಿವ ಎಚ್ ಕೆ ಪಾಟೀಲ್ ವಿವಿಧ ಇಲಾಖೆಗೆ ಸಂಬಂಧಿಸಿದ 15 ವಿಧೇಯಕಗಳನ್ನ ಮಂಡನೆ ಮಾಡಿದ್ದಾರೆ. ವಿಧಾನಸಭೆ ಅಧಿವೇಶದನ ಎರಡನೇ ದಿನವಾದ ಇಂದು ಒಂದೇ ದಿನ ಬರೋಬ್ಬರಿ 15 ವಿಧೇಯಕಗಳನ್ನು ಮಂಡಿಸಲಾಗಿದೆ. ಗೃಹ ಸಚಿವ ಪರಮೇಶ್ವರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಉನ್ನತ ಶಿಕ್ಷಣ ಸಚಿವ ಸುಧಕಾರ್ ಹಾಗೂ ಬೋಸರಾಜ ಪರವಾಗಿ ಎಲ್ಲಾ 15 ವಿಧೇಯಕಗಳನ್ನ ಕಾನೂನು ಸಚಿವ ಎಚ್ ಕೆ ಪಾಟೀಲ್ ಅವರು ಮಂಡಿಸಿದರು.

**ಕಾಲ್ತುಳಿತ ಪ್ರಕರಣ15 ವಿಧೇಯಕ ಮಂಡನೆ:**





# ಖಾಲಿ ಹುದ್ದೆಯಿಲ್ಲ ಎಂದು ಅನುಕಂಪದ ನೌಕರಿ ನಿರಾಕರಿಸುವಂತಿಲ್ಲ

ಹುದ್ದೆ ಖಾಲಿ ಇಲ್ಲ ಎಂಬ ಕಾರಣ ನೀಡಿ ಅನುಕಂಪದ ಆಧಾರದ ಹುದ್ದೆಗಳಿಗೆ ಸಲ್ಲಿಕೆಯಾಗುವ ಮನವಿಗಳನ್ನು ತಿರಸ್ಕರಿಸಲಾಗದು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ಅನುದಾನಿತ ಶಿಕ್ಷಣ ಸಂಸ್ಥೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದ ಮೃತ ನೌಕರನ ಮಗನಿಗೆ ಅನುಕಂಪದ ಉದ್ಯೋಗ ನಿರಾಕರಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆ ಹೊರಡಿಸಿದ್ದ ಆದೇಶ ರದ್ದುಪಡಿಸಿದೆ. ಅಲ್ಲದೆ, ಮೃತರು ಸೇವೆ ಸಲ್ಲಿಸುತ್ತಿದ್ದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಹುದ್ದೆ ಖಾಲಿ ಇಲ್ಲದಿದ್ದರೆ ಇತರೆ ಅನುದಾನಿತ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗೆ ನೇಮಕ ಮಾಡಬೇಕೆಂದು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

ತನ್ನ ತಂದೆ ಮೃತರಾದ ಬಳಿಕ ಅನುಕಂಪದ ಉದ್ಯೋಗಕ್ಕಾಗಿ ಸಲ್ಲಿಸಿದ್ದ ಮನವಿ ತಿರಸ್ಕರಿಸಿದ್ದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕ್ರಮ ಪ್ರಶ್ನಿಸಿ ಸಂತೋಷ್ ಯಮನಪ್ಪ ವಡಕರ್ ಸಲ್ಲಿಸಿದ್ದ ಅರ್ಜಿ



**ಖಾಲಿ ಹುದ್ದೆ ಹುಡುಕಿ ಆ ಹುದ್ದೆಗೆ ನೇಮಕ**

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ.

''ಮೃತರು ಸೇವೆ ಸಲ್ಲಿಸುತ್ತಿದ್ದ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ರಾಜ್ಯ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ, ಅನುದಾನ-ಸಹಾಯ ಇತ್ಯಾದಿ) (ತಿದ್ದುಪಡಿ) ನಿಯಮಗಳ– 2010ರ ಷರತ್ತು 1(ಎ) ಮತ್ತು (ಬಿ) ಪ್ರಕಾರ, ಶಿಕ್ಷಣ ಇಲಾಖೆಯ ನಿರ್ದೇಶಕರು ಖಾಲಿ ಹುದ್ದೆ ಗುರುತಿಸಬೇಕು. ಒಂದು ವೇಳೆ ಖಾಲಿ ಹುದ್ದೆ ಲಭ್ಯವಾಗದಿದ್ದಲ್ಲಿ ಇಲಾಖೆಯ ಅಧೀನದ ಇತರೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆ ಹುಡುಕಿ ಆ ಹುದ್ದೆಗೆ ನೇಮಕ ಮಾಡಿಕೊಳ್ಳಬೇಕು, ಎಂದು ಆದೇಶಿಸಲಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರರ ತಂದೆ ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ ಯಾವುದೇ ಖಾಲಿ ಹುದ್ದೆ ಇಲ್ಲ ಎಂಬ ಕಾರಣ ನೀಡಿ ಮನವಿ ತಿರಸ್ಕರಿಸಲಾಗಿದೆ. ಇದು 2010ರ ನಿಯಮಗಳ ಷರತ್ತು 1(ಎ) ಮತ್ತು (ಬಿ) ಅಡಿಯಲ್ಲಿನ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ಆದ್ದರಿಂದ ಅನುಕಂಪದ ಆಧಾರ ಪರಿಗಣಿಸುವ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ನಿಯಮ ಪಾಲಿಸಲು ಬದ್ಧರಾಗಿರಬೇಕು. ಆದರೆ, ಹುದ್ದೆ ಖಾಲಿಯಿಲ್ಲವೆಂದು ಅರ್ಜಿ ತಿರಸ್ಕರಿಸಿರುವುದು ನಿಯಮಗಳಿಗೆ ವಿರುದ್ಧವಾಗಿದೆ, ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಅರ್ಜಿದಾರರ ಪರ ವಕೀಲರು, ಅರ್ಜಿದಾರರ ತಂದೆ ಸೇವೆ ಸಲ್ಲಿಸಿದ್ದ ಸಂಸ್ಥೆಯಲ್ಲದೆ, ಜಿಲ್ಲೆಯೊಳಗಿನ ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಹುದ್ದೆಗಳನ್ನು ಪರಿಗಣಿಸಬಹುದು. ಜಿಲ್ಲೆಯಲ್ಲಿ ಖಾಲಿ ಇಲ್ಲವಾದಲ್ಲಿ ರಾಜ್ಯದ ಯಾವುದೇ ಕಾಲೇಜಿನಲ್ಲಿ ಆ ಹುದ್ದೆ ಪರಿಗಣಿಸಬೇಕಾಗುತ್ತದೆ, ಎಂದು ವಿವರಿಸಿದ್ದರು.

**ಪ್ರಕರಣದ ಹಿನ್ನೆಲೆ:** ಅರ್ಜಿದಾರರ ತಂದೆ ಬಾಗಲಕೋಟೆ ಜಿಲ್ಲೆಯ ಬೇವೂರಿನಲ್ಲಿರುವ ಅನುದಾನಿತ ಆದರ್ಶ ವಿದ್ಯಾವರ್ಧಕ ಸಂಘದ ಅಧೀನದ ಆದರ್ಶ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರ ನಿಧನದ ಬಳಿಕ ಅವರ ಮಗ (ಅರ್ಜಿದಾರರು) ಅನುಕಂಪದ ನೇಮಕಾತಿಗಾಗಿ ಮನವಿ ಸಲ್ಲಿಸಿದ್ದರು.

ಈ ಮನವಿಯನ್ನು ಕಾಲೇಜಿನ ಆಡಳಿತ ಮಂಡಳಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ರವಾನಿಸಿತ್ತು. ಅರ್ಜಿ ಪರಿಶೀಲಿಸಿದ್ದ ಪದವಿ ಪೂರ್ವ ಶಿಕ್ಷಣ ಇಲಾಖೆ, ಪ್ರಸ್ತುತ ಅನುಕಂಪದ ಮೇಲೆ ಉದ್ಯೋಗ ನೀಡುವುದಕ್ಕೆ ಖಾಲಿ ಹುದ್ದೆಗಳಿಲ್ಲ' ಎಂದು ತಿಳಿಸಿ ಮನವಿ ತಿರಸ್ಕರಿಸಿತ್ತು.

# ರಾಜ್ಯದಲ್ಲಿ ಆರ್‌ಟಿಐ ಕಾಯ್ದೆ ದುರುಪಯೋಗ: 26 ಅರ್ಜಿದಾರರು ಕಪ್ಪು ಪಟ್ಟಿಗೆ!

**ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗ್ತಿಲ್ಲ | ಲಿಖಿತವಾಗಿ ದೂರು ಸ್ವೀಕಾರ ಆಗಿಲ್ಲ**

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡ ಅನೇಕ ಪ್ರಕರಣಗಳು ನಡೆದಿದ್ದು, ಈ ಆರೋಪದ ಹಿನ್ನೆಲೆಯಲ್ಲಿ 26 ಮಂದಿ ಅರ್ಜಿದಾರರನ್ನು ಕಪ್ಪುಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬೈಲಹೊಂಗಲ ಶಾಸಕ ಮಹಾಂತೇಶ್ ಕೌಜಲಗಿ ಪ್ರಶ್ನೆ ಕೇಳಿದ್ದರು. ಇತ್ತೀಚಿನ ದಿನಗಳಲ್ಲಿ ಕೆಲವು ಜನರು ಮಾಹಿತಿ ಹಕ್ಕು ಕಾಯ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ಯಾ? ಎಂದು ಪ್ರಶ್ನೆ ಮಾಡಿದ್ದರು. ಮೇಲಿಂದ ಮೇಲೆ ಕೆಲವು ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಮಾಹಿತಿ ಕೇಳಿ ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗ್ತಿಲ್ಲ ಎಂದು ಆರೋಪಿಸಿದ್ದರು.



ಇದಕ್ಕೆ ಉತ್ತರ ನೀಡಿದ ಸರ್ಕಾರ, ಕೆಲವೊಂದು ವ್ಯಕ್ತಿಗಳು ಮಾಹಿತಿ ಹಕ್ಕು ಕಾಯ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆ.ಆದರೆ ಯಾವುದೇ ಅಧಿಕಾರಿಗಳಿಂದ ಈ ಬಗ್ಗೆ ಲಿಖಿತವಾಗಿ ದೂರು ಸ್ವೀಕಾರ ಆಗಿಲ್ಲ ಎಂದು ಸ್ಪಷ್ಟನೆ ನೀಡಲಾಗಿದೆ.





**26 ಅರ್ಜಿದಾರರು ಕಪ್ಪು ಪಟ್ಟಿಗೆ:** ಮಾಹಿತಿ ಹಕ್ಕು ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮಾಹಿತಿ ಆಯೋಗದ ವಿವಿಧ ಮೇಲ್ಮನವಿ ಪ್ರಕರಣದಲ್ಲಿ ಈಗಾಗಲೇ 26 ಅರ್ಜಿದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ.

ಇನ್ನು ಈ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಕೆಲವೊಂದು ಬದಲಾವಣೆ ಮಾಡುವ ಅವಶ್ಯಕತೆ ಬಗ್ಗೆ ಸರ್ಕಾರ ಚಿಂತಿಸಿದ್ಯಾ? ಎಂದು ಕೌಜಲಗಿ ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಸರ್ಕಾರ ಉತ್ತರಿಸಿ ಮಾಹಿತಿ ಹಕ್ಕು ಕಾಯ್ದೆಯ ತಿದ್ದುಪಡಿಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ.ನಿಯಮಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರವನ್ನು ಪ್ರಯೋಗ ಮಾಡಿ ಅವಶ್ಯಕತೆ ಕುರಿತಂತೆ ಪರಿಶೀಲನೆ ನಡೆಸಲಾಗುವುದು ಎಂದು ಉತ್ತರಿಸಿದೆ. ''ಬಹುತೇಕ ಎಲ್ಲ ಶಾಸಕರು ಹೊಸ ಮನೆಗಳ ಮಂಜೂರಾತಿ ಕೋರಿ ಮನವಿ ಸಲ್ಲಿಸುತ್ತಿದ್ದಾರೆ.

### ಬಿಲ್ ಬಾಕಿ ಹೊರೆಯಿಂದ ಹೊಸ ಮನೆ ಮಂಜೂರಾತಿ ವಿಳಂಬ

ರಾಜ್ಯದಲ್ಲಿ ಈ ಹಿಂದೆ ಮಂಜೂರಾಗಿದ್ದ 12.50 ಲಕ್ಷ ಮನೆಗಳಿಗೆ ಸಂಬಂಧಪಟ್ಟಂತೆ 9,000 ಕೋಟಿ ರೂ. ಬಿಲ್ ಪಾವತಿ ಬಾಕಿಯಿದ್ದು, ಹೊಸ ಮನೆಗಳ ಮಂಜೂರಾತಿಯಲ್ಲಿವಿಳಂಬವಾಗುತ್ತದೆ. ಆದರೂ, ಹೊಸ ಮನೆಗಳ ಮಂಜೂರಾತಿಗೆ ಹಣಕಾಸು ಇಲಾಖೆ ಜತೆಗೆ ಚರ್ಚಿಸಲಾಗುತ್ತಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು. ವಿಧಾನಸಭೆಯಲ್ಲಿ ಜೆಡಿಎಸ್‌ನ ಸಮೃದ್ಧಿ ಮಂಜುನಾಥ್, ಕರೆಮ್ಮ, ಬಿಜೆಪಿಯ ಸಿಮೆಂಟ್ ಮಂಜು ಅವರು ಪ್ರಸ್ತಾಪಿಸಿದ ಪ್ರಶ್ನೆಗಳಿಗೆ ವಸತಿ ಸಚಿವರ ಪರವಾಗಿ ಉತ್ತರಿಸಿದ ಕೃಷ್ಣ ಬೈರೇಗೌಡ, ''ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ 12.50 ಲಕ್ಷ ಹೊಸ ಮನೆ ಮಂಜೂರು ಮಾಡಿತ್ತು. ಈ ಮನೆಗಳಿಗೆ 9000 ಕೋಟಿ ರೂ. ಬಿಲ್ ಮೊತ್ತ ಬಾಕಿ ಇದೆ. ಎಷ್ಟು ದೊಡ್ಡ ಮೊತ್ತದ ಹೊರೆಯಿರುವ ಕಾರಣಕ್ಕೆ ಹೊಸ ಮನೆಗಳನ್ನು ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ,'' ಎಂದು ತಿಳಿಸಿದರು.

ಈ ಸಂಬಂಧ ಹಣಕಾಸು ಇಲಾಖೆ ಮತ್ತು ವಸತಿ ಇಲಾಖೆ ನಡುವೆ ಚರ್ಚೆ ನಡೆದಿದೆ. ಅಂತಿಮವಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಹೊಸ ಮನೆಗಳ ಮಂಜೂರಾತಿಗೆ ಕ್ರಮ ವಹಿಸಲಾಗುವುದು,'' ಎಂದು ಹೇಳಿದರು.

**ನಿಯಮ ಸಡಿಲಿಕೆವಾಗಿ ಕೇಂದ್ರಕ್ಕೆ ಪತ್ರ:** ''ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ಈ ಹಿಂದೆ ಮಂಜೂರಾದ ಮನೆಗಳ ಪೈಕಿ ಫಲಾನುಭವಿಗಳು ಮನೆ ನಿರ್ಮಿಸಲು ಆಸಕ್ತಿ ತೋರದಿದ್ದರೆ ಆ ಮನೆಗಳನ್ನು ಅಗತ್ಯವಿರುವ ಅರ್ಹರಿಗೆ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ದೂರುಗಳಿವೆ. ಯೋಜನೆಯಡಿ ಹಿರಿತನದ ಆಧಾರದಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆ. ಹಾಗಾಗಿ ಈ ಹಿಂದೆ ಮಂಜೂರಾತಿ ಪಡೆದವರು ಮನೆಗಳನ್ನು ನಿರಾಕರಿಸಿದರೂ ಅದನ್ನು ಅಗ್ಯತವಿದ್ದವರಿಗೆ ವರ್ಗಾಯಿಸಲು ಸಾಧ್ಯವಾಗುತ್ತಿಲ್ಲ. ಆ ಹಿನ್ನೆಲೆಯಲ್ಲಿ ನಿಯಮ ಸಡಿಲಿಕೆ ಕೋರಿ ಕೇಂದ್ರ ಸರಕಾರಕ್ಕೆ ಪತ್ರ ಬರೆಯಲಾಗುವುದು,'' ಎಂದು ಸದನಕ್ಕೆ ತಿಳಿಸಿದರು.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,140/Gram24ct ₹9,295/Gram22ct | ಬೆಳ್ಳಿ: ₹115.00/Gram

# ಸಚಿವ ಖಂಡ್ರೆ ಅವರಿಗೆ ಹೋರಾಟ ಮೂಲಕ ತಕ್ಕ ಪಾಠ ಕಲಿಸುತ್ತೇವೆ: ದಲಿತಪರ ಹೋರಾಟಗಾರರು ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಅರಣ್ಯ ಇಲಾಖೆ ವತಿಯಿಂದ ರೈತ ಮತ್ತು ದಲಿತರ ಉಳುಮೆಯ ಭೂಮಿಯನ್ನು ಕಸಿಯುತ್ತಿರುವ ಸಚಿವ ಈಶ್ವರ ಖಂಡ್ರೆ, ಅವರಿಗೆ ಹೋರಾಟ ಮೂಲಕ ತಕ್ಕ ಪಾಠ ಕಲಿಸುತ್ತೆವೆ ಎಂದು ದಲಿತಪರ ಹೋರಾಟಗಾರರು ಎಚ್ಚರಿಕೆ ನೀಡಿದರು.

ನಗರದ ಫ್ರೀಡಂ ಪಾರ್ಕಿನಲ್ಲಿ ಭೀಮ್ ಪ್ರಜಾ ಸಂಘ ಹಮ್ಮಿಕೊಂಡಿದ ಪ್ರತಿಭಟನೆಯ ನೇತೃತ್ವವಹಿಸಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ವೈಟ್ ಫೀಲ್ಡ್ ಮುರುಗೇಶ್ ಮಾತನಾಡಿ. ದಲಿತ ವಿರೋಧಿ ಸಿದ್ದರಾಮಯ್ಯ ಸರ್ಕಾರಕ್ಕೆ ನಮ್ಮ ಧಿಕಾರ, ರೈತರ ಅರಣ್ಯ ಭೂಮಿಗಳನ್ನು ಮುತ್ತಿಗೆ ಹಾಕಿಕೊಂಡಿರುವ ಈಶ್ವರ್ ಖಂಡ್ರೆ ಅವರಿಗೆ ತಕ್ಕ ಪಾಠ ಕಲಿಸದೆ ಬಿಡುವುದಿಲ್ಲ ಎಂದರು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರದ ಎಸಿಎಸ್ ಪಿ / ಟಿಎಸ್ ಪಿ ಯೋಜನೆಯ ಹಣವನ್ನು 40 ಸಾವಿರ ಕೋಟಿ ರೂಪಾಯಿಗಳು ಕಾಂಗ್ರೆಸ್ ಸರ್ಕಾರ ತನ್ನ ಪ್ರಣಾಳಿಕೆಯ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವದನ್ನು ಹಿಂಪಡೆದು ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ಬಳಸಬೇಕೆಂದರು. 200 ಮೀಟರ್‌ಗಳ ಎತ್ತರದ ಡಾ. ಬಿ.ಆರ್. ಅಂಬೇಡ್ಕರ್ ರವರ ಪುತ್ಥಳಿ ನಿರ್ಮಾಣ ಮಾಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

**ಕರ್ನಾಟಕ ರಾಜ್ಯ ಸರ್ಕಾರಕ್ಕೆ ಒತ್ತಾಯ**



ಉದಯವಾಹಿನಿ ಚಿತ್ರ

ಬಗರ್ ಹುಕುಂ ಸಾಗುವಳಿಯಲ್ಲಿ ಎಸ್ಸಿ/ಎಸ್ಟಿ ಜನಾಂಗದ ಜಮೀನನ್ನು ಅರಣ್ಯ ಇಲಾಖೆಯನ್ನು ಹಿಂಪಡೆಯುತ್ತಿರುವದನ್ನು ನಿಲ್ಲಿಸಿ ಅನ್ಯಾಯ ಒಳಗಾಗಿರತಕ್ಕಂತ ಜನರಿಗೆ ಆ ಜಮೀನನ್ನು ಬಿಟ್ಟುಕೊಡಬೇಕು ಮತ್ತು ಕಂದಾಯ ಇಲಾಖೆಯಿಂದ ಮಂಜೂರು ಮಾಡಿ ಫಾರಂ ನಂಬರ್ 10 ಮಾಡಿಕೊಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ರೈತ ಸಂಘಟನೆ, ದಲಿತ ಸಂಘಟನೆಯ ಅಧ್ಯಕ್ಷರು, ದಲಿತ ಮುಖಂಡರು ಪದಾಧಿಕಾರಿಗಳು ಕಾರ್ಯಕರ್ತರು ಈಶ್ವರ ಖಂಡ್ರೆ ವಿರುದ್ಧ ದಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

## ಪ್ರೇಕ್ಷಕರ ಮನಗೆದ್ದ ಯುವ ಪ್ರತಿಭೆಗಳ ಗಾಯನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಪ್ರಕಾಶನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುರಾಯರ 354ನೇ ಆರಾಧನಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಕುಮಾರಿಯರಾದ ದೀಪ್ತಿ ಶ್ರೀನಿವಾಸನ್, ಅನನ್ಯ ಬೆಳವಾಡಿ, ಮನಸ್ವಿ ಜಿ. ಕಶ್ಯಪ್, ಶ್ರೇಯಾ ರಾವ್ ಮತ್ತು ನಿಶಿತಾ ಪ್ರಸಾದ್ ಇವರುಗಳು ಅಪರೋಕ್ಷ ಜ್ಞಾನಿಗಳಿಂದ ರಚಿಸಲ್ಪಟ್ಟ ಹಲವಾರು ಅಪರೂಪದ ಹರಿದಾಸರ ಪದಗಳನ್ನು ತಾರತಮ್ಯೋಕ್ತವಾಗಿ ಸುಶ್ರಾವ್ಯವಾಗಿ ಹಾಡಿದರು. ಇವರ ಗಾಯನಕ್ಕೆ ಕೀ-ಬೋರ್ಡ್ ವಾದನದಲ್ಲಿ ವಿದ್ವಾನ್ ಟಿ.ಎಸ್. ರಮೇಶ್, ತಬಲಾ ವಾದನದಲ್ಲಿ ವಿದ್ವಾನ್ ಮಧುಸೂದನ್ ಕೊಪ್ಪ ಸಾಥ್ ನೀಡಿದರು. ಕಾರ್ಯಕ್ರಮದಲ್ಲಿ ದಾಸಸಾಹಿತ್ಯಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯುವಪ್ರತಿಭೆಗಳನ್ನು ಪ್ರೋತ್ಸಾಹಿಸಿದರು.

## ಉದ್ಯಾನನಗರಿ ಬೆಂಗಳೂರಿನಲ್ಲಿ ಇನ್ನೊಂದು ಬೃಹತ್ ಕ್ರಿಕೆಟ್ ಸ್ಟೇಡಿಯಂ

• ಉದಯವಾಹಿನಿ, ಬೆಂಗಳೂರು

ಕ್ರಿಕೆಟ್ ಪ್ರೀಯರಿಗೊಂದು ಗುಡ್‌ನ್ಯೂಸ್. ಕ್ರೀಡೆಗೆ ಹೆಚ್ಚಿನ ಒತ್ತು ನೀಡಲು ಉದ್ಯಾನನಗರಿ ಬೆಂಗಳೂರಿನಲ್ಲಿ ಇನ್ನೊಂದು ಬೃಹತ್ ಕ್ರಿಕೆಟ್ ಸ್ಟೇಡಿಯಂ ತಲೆ ಎತ್ತಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಅವಘಡ ಸಂಭವಿಸಿದ ಬೆನ್ನಲ್ಲೇ ಕರ್ನಾಟಕ ಸರ್ಕಾರ ಈ ಮಹತ್ವದ ಹೆಜ್ಜೆ ಇಟ್ಟಿದೆ ಡಿಕೆಶಿ ತಮ್ಮ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿ ಈ ಬಗ್ಗೆ ಅಧಿಕೃತಗೊಳಿಸಿದ್ದಾರೆ. ಬೊಮ್ಮಸಂದ್ರದ ಸೂರ್ಯಸಿಟಿಯಲ್ಲಿ ಬೃಹತ್ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. 1,650 ಕೋಟಿ ರೂಪಾಯಿ ವೆಚ್ಚದಲ್ಲಿ 75 ಎಕರೆಯಲ್ಲಿ 60,000 ಆಸನಗಳ ಸಾಮರ್ಥ್ಯವುಳ್ಳ ಬೃಹತ್ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಆಗಲಿದ್ದು, ಇದು ರಾಜ್ಯದ ಅತಿ ದೊಡ್ಡ ಸ್ಟೇಡಿಯಂ ಅಂತಾ ಕರೆಸಿಕೊಳ್ಳಲಿದೆ. ಈ ಬೃಹತ್ ಕ್ರೀಡಾ ಸಂಕೀರ್ಣದಲ್ಲಿ ಒಳಾಂಗಣ, ಹೊರಾಂಗಣ ಕ್ರೀಡಾಂಗಣಗಳು, ಅತ್ಯಾಧುನಿಕ ಜಿಮ್, ತರಬೇತಿ ಕೌಶಲ್ಯಗಳು, ಒಲಿಂಪಿಕ್ ಗಾತ್ರದ ಈಜು ಕೊಳಗಳು, ಅತಿಥಿ ಗೃಹಗಳು, ಹಾಸ್ಟೆಲ್‌ಗಳು, ಹೋಟೆಲ್‌ಗಳು, ಕನ್ವೆನ್ಷನ್ ಹಾಲ್ ಅನ್ನು ಒಳಗೊಂಡಿರುತ್ತದೆ. ಇತ್ತೀಚೆಗಷ್ಟೇ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಾಲ್ತುಳಿತ ಸಂಭವಿಸಿತ್ತು. 2025ರ ಐಪಿಎಲ್ ಟೂರ್ನಿ ಗೆದ್ದ ರಾಯಲ್ ಚಾಲೆಂಜರ್ಸ್ ತಂಡ ಸಂಭ್ರಮಿಸಲು ಸ್ಟೇಡಿಯಂಗೆ ಬರಲು ಸೂಚಿಸಿತ್ತು. ಈ ಸಂಬಂಧ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭ್ರಮಾಚರಣೆ ಮಾಡುವಾಗ ಕಾಲ್ತುಳಿತ ಸಂಭವಿಸಿತ್ತು. ಈ ಘಟನೆಯಲ್ಲಿ 11 ಜನರು ಜೀವ ಕಳೆದುಕೊಂಡಿದ್ದರು.

ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಅಷ್ಟೊಂದು ಸ್ಥಳ ಇಲ್ಲದ ಕಾರಣ ಜನರು ಹೆಚ್ಚು ಸೇರಿದ್ದರಿಂದ ನೂಕುನುಗ್ಗಲಿನಿಂದ ಕಾಲ್ತುಳಿತ ಸಂಭವಿಸಿತ್ತು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ದೊಡ್ಡ ಮೈದಾನ ನಿರ್ಮಾಣಕ್ಕೆ ಕೈ ಹಾಕಿದೆ

## ಚುನಾವಣೆ ನಡೆಯುವ ತನಕ ಬಿಬಿಎಂಪಿ ಕಾಯ್ದೆಯೇ ಮುಂದುವರಿಯಲಿದೆ

• ಉದಯವಾಹಿನಿ, ಬೆಂಗಳೂರು

ಹೊಸದಾಗಿ ರಚನೆಯಾಗಲಿರುವ 5 ಪಾಲಿಕೆಗಳಿಗೆ ಚುನಾವಣೆ ನಡೆಯುವ ತನಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತವೇ ಮುಂದುವರಿಯಲಿದೆ ಎಂದು ಅಡ್ವಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದ್ದಾರೆ.ಕಟ್ಟಡ ಬೈ-ಲಾ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಸಹಾಯಕ ಕಾರ್ಯಕಾರಿ ಎಂಜಿನಿಯರ್ (ಎಇಇ) ನೀಡಿರುವ ನೋಟಿಸ್ ಪ್ರಶ್ನಿಸಿ ಸಿ.ವಿ.ರಾಮನ್ ನಗರದ ಮುನಿವೆಂಕಟಪ್ಪ ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪಿಠಕ್ಕೆ ಅಡ್ವಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಈ ಕುರಿತಂತೆ ವಿವರಿಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆ ಕುರಿತು ಅಧಿಸೂಚನೆ ಹೊರಡಿಸಲಾಗಿದೆ. ಹಾಗಾಗಿ, ಎಇಇಗೆ ನೋಟಿಸ್ ನೀಡುವ ಅಧಿಕಾರವಿಲ್ಲ. ನೋಟಿಸ್ ಕಾನೂನು ಬಾಹಿರವಾಗಿದ್ದು ರದ್ದುಗೊಳಿಸಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಬಿಬಿಎಂಪಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, ಜಿಬಿಎ ರಚನೆ ಆಗುವ ತನಕ ಬಿಬಿಎಂಪಿ ಕಾಯ್ದೆ -2020 ಜಾರಿಯಲ್ಲಿರುತ್ತದೆ. ಈ ಕುರಿತಂತೆ ಸರ್ಕಾರವೇ 2025ರ ಮೇ 15ರಂದು ಆದೇಶ ಹೊರಡಿಸಿದೆ. ಹಾಗಾಗಿ, ಎಇಇಗೆ ನೋಟಿಸ್ ನೀಡುವ ಎಲ್ಲಾ ಅಧಿಕಾರವಿದೆ ಎಂದು ಸಮರ್ಥಿಸಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಜಿಬಿಎ ರಚನೆಗೆ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಕಾಯ್ದೆ ಜಾರಿಯಲ್ಲಿ ಇಲ್ಲ ಎಂಬ ವಿಚಾರವನ್ನು ಅರ್ಜಿದಾರರು ಎತ್ತಿದ್ದಾರೆ. ಜಿಬಿಎ ಜಾರಿ ಯಾವಾಗ ಎಂಬ ಬಗ್ಗೆ ಸ್ಪಷ್ಟನೆ ನೀಡಿ ಎಂದು ಸರ್ಕಾರಕ್ಕೆ ಸೂಚಿಸಿತು.

# ಬೆಳ್ಳಿಯ ಗಣಪತಿಯ ವಿಗ್ರಹ ಪ್ರಧಾನಿ ಮೋದಿಗೆ ನೀಡಿದ್ದ ಡಿಕೆಶಿ

### ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣದಲ್ಲಿ ಮೂರು ವಂದೇ ಭಾರತ್ ರೈಲಿಗೆ ಚಾಲನೆ

• ಉದಯವಾಹಿನಿ, ಬೆಂಗಳೂರು

ಅರ್ಧ ದಿನದ ಸರ್ಕಾರೀ ಕಾರ್ಯಕ್ರಮಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಬೆಂಗಳೂರಿಗೆ ಆಗಮಿಸಿದ್ದರು. ಆ ವೇಳೆ, ಶಿಷ್ಟಾಚಾರದ ಭಾಗವಾಗಿ, ಪ್ರಧಾನಿಯನ್ನು ಸ್ವಾಗತಿಸಲು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕೂಡಾ ಭಾಗವಹಿಸಿದ್ದರು. ಆ ವೇಳೆ, ಪ್ರಧಾನಿಗೆ ಡಿಕೆಶಿ ಗಿಫ್ಟ್ ಒಂದನ್ನು ನೀಡಿದ್ದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣದಲ್ಲಿ ಮೂರು ವಂದೇ ಭಾರತ್ ರೈಲಿಗೆ ಚಾಲನೆ, ನಮ್ಮ ಮೆಟ್ರೋ ಹಳದಿ ಮಾರ್ಗದ ಲೋಕಾರ್ಪಣೆ ಮತ್ತು ಮೆಟ್ರೋ ಫೇಸ್ 3ಗೆ ಶಂಕುಸ್ಥಾಪನೆ ನೆರವೇರಿಸುವ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗವಹಿಸಿದ್ದರು. ಈ ಎಲ್ಲಾ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಭಾಗವಹಿಸಿದ್ದರು. ಪ್ರಧಾನಿ ಮೋದಿ ಬೆಂಗಳೂರಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ರಾಜಧಾನಿಯ ಬಿಜೆಪಿಯ ಶಾಸಕರೆಲ್ಲರೂ ಅದರಲ್ಲಿ ಭಾಗವಹಿಸಿದ್ದರು.

ಅದರಂತೆಯೇ, ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಕೂಡಾ ಭಾಗವಹಿಸಿದ್ದರು. ಆದರೆ, ಅವರಿಗೆ ವೇದಿಕೆಯ ಮೇಲೆ ಅವಕಾಶವಿರಲಿಲ್ಲ. ಮೋದಿಯವರಿಗೆ ಗಿಫ್ಟ್ ನೀಡಲು, ಬೆಳ್ಳಿಯ ಗಣೇಶನ ವಿಗ್ರಹವನ್ನು ಅವರು ತಂದಿದ್ದರು. ಮೋದಿಯವರ SPG ಸಿಬ್ಬಂದಿಗಳು ಈ ಗಿಫ್ಟ್ ಅನ್ನು ತಪಾಸಣೆ ಮಾಡಿ ಟೇಬಲ್ ಮೇಲೆ ಇಟ್ಟಿದ್ದರು. ಅಲ್ಲಿಗೆ ಬಂದ ಡಿಸಿಎಂ ಡಿಕೆ ಶಿವಕುಮಾರ್, ಆ ವಿಗ್ರಹವನ್ನು ಮೋದಿಯವರಿಗೆ ನೀಡಿದರು ಎಂದು ವರದಿಯಾಗಿತ್ತು. ಇದಕ್ಕೆ ಡಿಸಿಎಂ ಕಚೇರಿ ಸ್ಪಷ್ಟನೆಯನ್ನು ನೀಡಿದೆ.

**ಡಿಕೆಶಿ ಅವರ ಮಾಧ್ಯಮ ಸಲಹೆಗಾರರು ಸ್ಪಷ್ಟನೆ**



ಉದಯವಾಹಿನಿ ಚಿತ್ರ

> **ಎಲ್ಲಕ್ಕಿಂತ ಮಿಗಿಲಾಗಿ ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಎಂ. ಕೃಷ್ಣಪ್ಪ ಅವರೇ ನನಗೆ ದೂರವಾಣಿ ಕರೆ ಮಾಡಿ, ನಾನು ಸ್ಟೇಜ್ ಮೇಲೆ ಹೋಗೋಕೇ ಅವಕಾಶ ಇರಲಿಲ್ಲ. ಇನ್ನು ಪ್ರಧಾನಿಗೆ ಗಣೇಶ ವಿಗ್ರಹ ಹೇಗೆ ಕೊಡಲಿ, ಅಂತ ಹೇಳಿದ್ದಾರೆ. ಸುದ್ದಿ ಸಣ್ಣದು, ಸುಳ್ಳು ದೊಡ್ಡದು, ಪ್ರಭಾವ ಕೆಟ್ಟದ್ದು, ಪತ್ರಿಕೆಯವರಿಗೆ ಸ್ಪಷ್ಟನೆ ನೀಡಬಹುದು. ಆದರೆ ಸಾಮಾಜಿಕ ಜಾಲತಾಣದವರಿಗೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರ ಮಾಧ್ಯಮ ಸಲಹೆಗಾರರು ಸ್ಪಷ್ಟನೆಯನ್ನು ನೀಡಿದ್ದಾರೆ.**

ಇದಕ್ಕೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಮಾಧ್ಯಮ ಸಲಹೆಗಾರರಾದ ತ್ಯಾಗರಾಜ್ ಪುಟ್ಟಪ್ಪ ಸಾಮಾಜಿಕ ಜಾಲತಾಣದ ಮೂಲಕ ಸ್ಪಷ್ಟನೆಯನ್ನು ನೀಡಿದ್ದಾರೆ.

ಈ ಸುದ್ದಿ ಸಂಪೂರ್ಣ ಸುಳ್ಳು. ಆದರೆ ಸಾಮಾಜಿಕ ಜಾಲತಾಣದಲ್ಲಿ ಈ ಸುದ್ದಿ ಟ್ರೋಲ್ ಆಗಿದೆ. ಸತ್ಯ, ಅಸತ್ಯ ನೋಡದೇ, ತಲೆಬುಡ ಸೋಸದೇ ಡಿಸಿಎಂ ಗುರಿಕಾರರು ಈ ಸುದ್ದಿಯನ್ನು ಯದ್ವಾ-ತದ್ವಾ ಹಂಚಿಕೊಂಡಿದ್ದಾರೆ. ಬಾಯಿಗೆ ಬಂದಂತೆ ಟೀಕೆ ಮಾಡಿದ್ದಾರೆ.

> **ಮೋದಿವರ ಜೊತೆಗಿನ ಸಭಾ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು ಪ್ರಧಾನಿಗೆ, ಐದು ಮಾರ್ಗಗಳಲ್ಲಿ ವಂದೇ ಭಾರತ್ ರೈಲಿಗಾಗಿ ಮನವಿಯನ್ನು ಸಲ್ಲಿಸಿದ್ದಾರೆ. ಡಿಕೆ, ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಾ ಎಂದು ಮೋದಿಯವರು, ನನ್ನ ಕಾರ್ಯಶೈಲಿಯನ್ನು ಹೊಗಳಿದ್ದಾರೆ ಎಂದು ಡಿಕೆಶಿ ಹೇಳಿದ್ದರು.**

ಆದರೆ ವಾಸ್ತವವಾಗಿ ಡಿಸಿಎಂ ಅವರೇ ಈ ಬೆಳ್ಳಿ ಗಣಪತಿ ವಿಗ್ರಹವನ್ನು ಅವರ ಮನೆಯಿಂದ ತೆಗೆದುಕೊಂಡು ಬಂದದ್ದು, ಅವರ ಕಚೇರಿ ಸಿಬ್ಬಂದಿಯೇ ಪ್ರಧಾನಿ ಭದ್ರತೆ ಹೊಣೆ ಹೊತ್ತ ಎಸ್ಪಿಜಿಯವರಿಗೆ ಕೊಟ್ಟು ತಪಾಸಣೆ ನಡೆಸಿದ್ದು, ಎಸ್ಪಿಜಿ ಸಿಬ್ಬಂದಿಯೇ ಈ ವಿಗ್ರಹವನ್ನು ಪ್ರಧಾನಿ ಅವರಿಗೆ ಡಿಸಿಎಂ ಅವರು ನೀಡಲು ನೆರವಾದದ್ದು ಡಿಸಿಎಂ ಡಿ ಕೆ ಶಿವಕುಮಾರ್ ಅವರ ಮಾಧ್ಯಮ ಸಲಹೆಗಾರನಾಗಿ ಈ ಎಲ್ಲಕ್ಕೂ ನಾನು ಪ್ರತ್ಯಕ್ಷ ಸಾಕ್ಷಿ.

## ರಾಜ್ಯ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ, ಅನುದಾನ ಕೊರತೆ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆ ನಡೆದಿದ್ದು, ರಾಜ್ಯ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳನ್ನು ಶಿಕ್ಷಕರು ತೊಳೆಯಬೇಕೇ ಎಂದು ಪ್ರಶ್ನಿಸಿದ ಸದಸ್ಯರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೇಲ್ಮನೆ ಸದಸ್ಯರಾದ ರಾಮೋಜಿ ಗೌಡ, ಮಧು ಜಿ. ಮಾದೇಗೌಡ, ವಿವೇಕಾನಂದ ಅವರು ವಿಷಯ ಪ್ರಸ್ತಾಪಿಸಿ, ಕಳವಳ ವ್ಯಕ್ತಪಡಿಸಿದರು.

ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ಶುಚಿತ್ವಕ್ಕೆ ನೀಡಲಾಗುವ ಅನುದಾನವು ನಿಷ್ಪ್ರಯೋಜಕವಾಗಿದೆ. ಅನುದಾನವನ್ನು ಹೆಚ್ಚಿಸಿದರೂ ಸುಧಾರಣೆ ಕಷ್ಟವಾಗಿದೆ ಎಂದು ರಾಮೋಜಿ ಗೌಡ ಅವರು ಹೇಳಿದರು.

ಸರ್ಕಾರಿ ಶಾಲೆಗಳ ಶೌಚಾಯಲಗಳ ಸ್ವಚ್ಛತೆಗೆ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಲದಾಗಿದೆ.





ಉದಯವಾಹಿನಿ ಚಿತ್ರ

ಅನುದಾನ ಹೆಚ್ಚಿಸಿದರೂ ಸುಧಾರಣೆ ಕಷ್ಟಕರ. ಶಾಲಾ ಶೌಚಾಲಯಗಳನ್ನು ಶಿಕ್ಷಕರು ತೊಳಿಬೇಕಾ? ಬೇರೆ ಯಾರಾದರೂ ತೊಳಿಬೇಕಾ ಮಕ್ಕಳು ಶೌಚಾಲಯ ತೊಳೆಯುವಂತಿಲ್ಲ. ಶಿಕ್ಷಕರಿಗೆ ಬೇರೆ ಕೆಲಸಗಳಿವೆ.

ಹೀಗಾಗಿ ಯಾರಾದರೂ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಬೇಕೆಂದರೆ ಮಕ್ಕಳ ಕೈಯಲ್ಲಿ ಪೊರಕೆ ನೀಡಿ ಸೋಷಿಯಲ್ ಮೀಡಿಯಾದಲ್ಲಿ ಫೋಟೋಗಳನ್ನು ವೈರಲ್ ಮಾಡಿದರೆ ಸಾಕು. ಸಂಬಂಧಪಟ್ಟ ಶಿಕ್ಷಕರು ಅಮಾನತುಗೊಳ್ಳುತ್ತಾರೆ. ಇಂತಹ ಕಿರುಕುಳದಿಂದ ಶಿಕ್ಷಕರಿಗೆ ಮುಕ್ತಿ ಕೊಡಿಸಬೇಕು. ಶೌಚಾಲಯ ನಿರ್ವಹಣೆಗೆ ಹೊರಗುತ್ತಿಗೆ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಇನ್ನಿಬ್ಬರು ಸದಸ್ಯರು ಮಾದೇಗೌಡ, ವಿವೇಕಾನಂದ ಅವರು ಧ್ವನಿಗೂಡಿಸಿದರು.

ಇದಕ್ಕೆ ಉತ್ತರಿಸಿದ ಸಚಿವ ಮಧು ಬಂಗಾರಪ್ಪ, ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಸ್ವಚ್ಛತಾಗಾರರ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿಲ್ಲ. ಶೌಚಾಲಯ ಸ್ವಚ್ಛತೆ ನಿರ್ವಹಣೆಗಾಗಿ ಸ್ಥಳೀಯ ಶಾಲಾ ಮೇಲುಸ್ತುವಾರಿ ಸಮಿತಿಯು ಸಿಬ್ಬಂದಿಯನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಶಾಲೆಯ ಅನುದಾನದಲ್ಲಿ ಶೇ.10ರಷ್ಟು ಹಣ ನೀಡಲಾಗುತ್ತಿದೆ. ನಿರ್ವಹಣೆಗೆ ಮೀಸಲಿಟ್ಟಿರುವ ಹಣ ಕಡಿಮೆಯಿದ್ದು ಇಲಾಖಾ ಮಟ್ಟದಲ್ಲಿ ಚರ್ಚೆ ನಡೆಸಿ ಶೇ.20ರಿಂದ 30ರಷ್ಟು ಹಣ ಒದಗಿಸಲಾಗುವುದು ಎಂದರು.

## ರಾಜ್ಯದಲ್ಲಿ ಕೇವಲ 329 ಆಸ್ಪತ್ರೆಗಳಿಂದಷ್ಟೇ ಅಗ್ನಿ ಸುರಕ್ಷತಾ ನಿಯಮಗಳ ಪಾಲನೆ!

• ಉದಯವಾಹಿನಿ, ಬೆಂಗಳೂರು

ರಾಜ್ಯದ ನೋಂದಾಯಿತ ಸರ್ಕಾರಿ, ಖಾಸಗಿ ಆಸ್ಪತ್ರೆಗಳ ಪೈಕಿ ಕೇವಲ 329 ಆಸ್ಪತ್ರೆಗಳು ಮಾತ್ರ ಅಗ್ನಿ ಸುರಕ್ಷತೆ ಮಾನದಂಡಗಳನ್ನು ಪಾಲಿಸುತ್ತಿವೆ. ಉಳಿದ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ನಿಯಮಬದ್ಧವಾಗಿಲ್ಲ ಎಂಬ ಅಘಾತಕಾರಿ ಅಂಶ ಇದೀಗ ಬೆಳಕಿಗೆ ಬಂದಿದೆ. ರಾಜ್ಯದಲ್ಲಿರುವ 2,878 ಸರ್ಕಾರಿ ಆಸ್ಪತ್ರೆಗಳ ಪೈಕಿ 14 ಹಾಗೂ 5,850 ಖಾಸಗಿ ಆಸ್ಪತ್ರೆಗಳ ಪೈಕಿ 315 ಆಸ್ಪತ್ರೆಗಳು ಮಾತ್ರವೇ ಅಗ್ನಿ ಸುರಕ್ಷತೆ ಕ್ರಮಗಳನ್ನು ಅನುಸರಿಸುತ್ತಿವೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ವಿಧಾನಪರಿಷತ್ತಿಗೆ ಮಾಹಿತಿ ನೀಡಿದ್ದಾರೆ, ವಿಧಾನಪರಿಷತ್ ಸದಸ್ಯ ಡಾ.ಧನಂಜಯ್ ಸರ್ಜಿ ಅವರು ಅಗ್ನಿ ಸುರಕ್ಷತೆಯ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ರಾಷ್ಟ್ರೀಯ ಕಟ್ಟಡ ಸಂಹಿತೆಯ ನಿಯಮಗಳ ನ್ಯಾಷನಲ್ ಬಿಲ್ಡಿಂಗ್ ಕೋಡ್ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಒಂದೇ ರೀತಿ ಅಗ್ನಿ ಸುರಕ್ಷತಾ ಕ್ರಮಗಳನ್ನ ಅಳವಡಿಸಿಕೊಳ್ಳಬೇಕೆಂಬ ನಿಯಮವಿದೆ. ಆದರೆ, ಬಹುತೇಕ ಆಸ್ಪತ್ರೆಗಳು ನಿಯಮವನ್ನ ಗಾಳಿಗೆ ತೂರಿವೆ. ಕೇವಲ 14 ಸರ್ಕಾರಿ ಹಾಗೂ 315 ಖಾಸಗಿ ಆಸ್ಪತ್ರೆಗಳು ಅಗ್ನಿ ಸುರಕ್ಷತೆ ಮಾನದಂಡ ಪೂರೈಸಿವೆ ಎಂದು ಹೇಳಿದರು.

## ಬೆಂಗಳೂರಿನ 28ನೇ ಟೆಕ್ ಶೃಂಗಸಭೆ ನ. 18ರಿಂದ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ 28ನೇ ಟೆಕ್ ಶೃಂಗಸಭೆ ನವೆಂಬರ್ 18ರಿಂದ ಮೂರು ದಿನ ನಡೆಯಲಿದೆ. ಮಾಹಿತಿ ತಂತ್ರಜ್ಞಾನ. ಜೈವಿಕ ತಂತ್ರಜ್ಞಾನ ಇಲಾಖೆಯು ಭವಿಷ್ಯದಯ ಎನ್ನುವ ಪರಿಕಲ್ಪನೆಯೊಂದಿಗೆ ಶೃಂಗಸಭೆಯನ್ನು ಮೊದಲ ಬಾರಿಗೆ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಅಯೋಜಿಸಲಿದೆ.ಬೆಂಗಳೂರು ತಂತ್ರಜ್ಞಾನ ವಲಯದಲ್ಲಿ ರೂಪಿಸಿಕೊಂಡಿರುವ ನಾವಿನ್ಯತೆ ಹಾಗೂ ಸಹಭಾಗಿತ್ವಗಳನ್ನು ಜಗತ್ತಿನ ಪ್ರಮುಖ ದೇಶಗಳ ಎದುರು ತೆರೆದಿಡುವ ಹಾಗೂ ಮುಂದಿನ ಹೆಜ್ಜೆಗಳನ್ನು ಗಟ್ಟಿಯಾಗಿ ರೂಪಿಸುವ ಭಾಗವಾಗಿ ಟೆಕ್ ಶೃಂಗಸಭೆ ಆಯೋಜಿಸುತ್ತಾ ಬಂದಿದೆ. ಈ ವರ್ಷವೂ ಹೊಸ ಪರಿಕಲ್ಪನೆಗಳೊಂದಿಗೆ ಸಭೆ ನಡೆಯಲಿದೆ.

20,000ಕ್ಕೂ ಹೆಚ್ಚಿನ ಸ್ಟಾರ್ಟಪ್‌ಗಳ ಸಂಸ್ಥಾಪಕರು, 1000ಕ್ಕೂ ಅಧಿಕ ಹೂಡಿಕೆದಾರರು, 15,000 ಪ್ರತಿನಿಧಿಗಳು, 600 ಭಾಷಣಕಾರರು ಮತ್ತು 1,200 ಪ್ರದರ್ಶಕರು ಸೇರಿದಂತೆ 1,00,000ಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಬಿಟಿಎಸ್ ಹಿನ್ನೆಲೆಯಲ್ಲಿ 200ಕ್ಕೂ ಅಧಿಕ ಐಟಿ ಕಂಪೆನಿಗಳ ಮುಖ್ಯಸ್ಥರು, ಸಿಇಒಗಳೊಂದಿಗೆ ಬೆಂಗಳೂರಿನಲ್ಲಿ ನಡೆದ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬೆಂಗಳೂರು ಟೆಕ್ ಶೃಂಗ ಸಭೆ 1998ರಿಂದ ಅರಮನೆ ಮೈದಾನದಲ್ಲಿ ನಡೆಯುತ್ತಿತ್ತು. ಹೆಚ್ಚುತ್ತಿರುವ ಬೇಡಿಕೆ ಕಾರಣದಿಂದ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರಕ್ಕೆ (ಬಿಐಇಸಿ) ಸ್ಥಳಾಂತರಿಸಲಾಗುತ್ತಿದೆ.

ಇಲ್ಲಿ ವಿಶ್ವ ದರ್ಜೆಯ ಮೂಲಸೌಕರ್ಯ, ವಿಸ್ತಾರವಾದ ಪ್ರದರ್ಶನ ಸಭಾಂಗಣಗಳು, ಅತ್ಯಾಧುನಿಕ ಸಮ್ಮೇಳನ ಸೌಲಭ್ಯಗಳು ಇರಲಿವೆ.





ಉದಯವಾಹಿನಿ ಚಿತ್ರ

> **ಇಲಾಖೆ ಕಾರ್ಯದರ್ಶಿ ಡಾ.ಏಕರೂಪಕೌರ್ ಮಾತನಾಡಿ. ಕಳೆದ ವರ್ಷ ಕರ್ನಾಟಕದ ಐಟಿ- ಬಿಟಿ ವಲಯದ ವಹಿವಾಟು ಪ್ರಮಾಣ ರೂ.4.1 ಲಕ್ಷ ಕೋಟಿ. ಶೇ 64ರಷ್ಟು ವಹಿವಾಟಿನಲ್ಲಿ ಹೆಚ್ಚಳವಾಗಿರುವುದು ವಿಶೇಷ. ಅಮೆರಿಕದಿಂದ ಶೇ 70ರಷ್ಟು ಕಂಪನಿಗಳು ಕರ್ನಾಟಕಕ್ಕೆ ಬಂದಿವೆ. ಶೇ 50ರಷ್ಟು ದೊಡ್ಡ ಕಂಪನಿಗಳು ಕರ್ನಾಟಕದಲ್ಲಿ ಹೂಡಿಕೆ ಮಾಡಿದ್ದು. ಸಾಕಷ್ಟು ಉದ್ಯೋಗವೂ ಲಭಿಸಿದೆ. ಈ ಬಾರಿಯೂ ರಕ್ಷಣೆ ಸೇರಿ ನಾಲ್ಕು ವಲಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.**

55 ದೇಶಗಳ ಪ್ರತಿನಿಧಿಗಳು ಟೆಕ್ ಶೃಂಗಸಭೆಗೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.

## ಕಬ್ಬನ್ ನಂತಹ ಮತ್ತಷ್ಟು ಪಾರ್ಕ್‌ಗಳ ಅಗತ್ಯವಿದೆ

• ಉದಯವಾಹಿನಿ, ಬೆಂಗಳೂರು

ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ನಿರ್ಮಾಣವಾಗಿ ಶತಮಾನಗಳೇ ಕಳೆದಿದ್ದು, ಬೆಂಗಳೂರಿಗೆ ಇನ್ನೂ ಹೆಚ್ಚಿನ ಅಂತಹ ಉದ್ಯಾನವನಗಳ ಅಗತ್ಯವಿದೆ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಬಿ ಖಂಡ್ರೆ ಹೇಳಿದ್ದಾರೆ.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಅರಣ್ಯ, ವನ್ಯಜೀವಿ. ಹವಾಮಾನ ಬದಲಾವಣೆ ಕುರಿತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, 150 ವರ್ಷಗಳ ನಂತರವೂ ಬೆಂಗಳೂರಿನಲ್ಲಿ ಲಾಲ್ ಬಾಗ್ ಅಥವಾ ಕಬ್ಬನ್ ಪಾರ್ಕ್ ನಂತಹ ಪ್ರಮುಖ ಉದ್ಯಾನವನಗಳು ಇಲ್ಲ ಎಂದರು.



ಹವಾಮಾನ ಬದಲಾವಣೆ. ಜಾಗತಿಕ ತಾಪಮಾನ ಪ್ರಕೃತಿಯ ಮೇಲೆ ಬೀರುವ ಪರಿಣಾಮ ಕುರಿತು ಮಾತನಾಡಿದ ಖಂಡ್ರೆ, ಮರ ಗಿಡ ಬೆಳೆಸುವುದು ನಮ್ಮ ಮುಂದಿರುವ ಏಕೈಕ ಪರಿಹಾರವಾಗಿದೆ.

ಈ ಕುರಿತು ಕುರಿತು ಅಧ್ಯಯನ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಒಬ್ಬ ವ್ಯಕ್ತಿ ಆರಾಮವಾಗಿ ಬದುಕಲು ಏಳು ಮರಗಳು ಬೇಕಾಗಿದ್ದರೆ, ಬೆಂಗಳೂರಿನಲ್ಲಿ ಏಳು ಮಂದಿಗೆ ಒಂದೇ ಮರ ಎಂಬಂತಾಗಿದೆ. ರಾಜಧಾನಿಯ ಜನಸಂಖ್ಯೆ 1.5 ಕೋಟಿಗೆ ಸಮೀಪಿಸಿರುವುದರಿಂದ ಸೂಕ್ತ ಕ್ರಮಗಳಿಗೆ ಇದು ಸಕಾಲವಾಗಿದೆ. ನಗರದ ಹಸಿರನ್ನು ಹೆಚ್ಚಿಸಲು ಕಾರ್ಪೊರೇಟ್ ಸಂಸ್ಥೆಗಳು ಮುಂದೆ ಬರಬೇಕು ಎಂದರು.

> **1960ರ ದಶಕದಲ್ಲಿ ಎಚ್‌ಎಂಟಿಗೆ ಕೈಗಾರಿಕೆ ಸ್ಥಾಪಿಸಲು ನೀಡಿದ್ದ ಜಾಗದಲ್ಲಿ ಉದ್ಯಾನವನವನ್ನು ಸ್ಥಾಪಿಸಲಾಗುತ್ತಿದೆ. ಈಗ ಕೈಗಾರಿಕೆ ಸ್ಥಗಿತಗೊಂಡಿರುವುದರಿಂದ ಎಚ್ ಎಂಟಿಯ ವಶದಲ್ಲಿರುವ ಭೂಮಿಯನ್ನು ಬೇರೆ ಉದ್ದೇಶಕ್ಕೆ ಪರಿವರ್ತಿಸಲಾಗದ ಕಾರಣ ಅರಣ್ಯವಾಗಿಯೇ ಉಳಿದಿದೆ. ಇದನ್ನು ಮತ್ತೊಂದು ಪ್ರಮುಖ ಉದ್ಯಾನವಾಗಿ ಮಾಡಲು ಸರ್ಕಾರ ಬದ್ಧವಾಗಿದ್ದು, ಈ ನಿಟ್ಟಿನಲ್ಲಿ ಕಾನೂನು ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು.**

**ಯಲಹಂಕ ಸಮೀಪದ ಮಾದಪ್ಪನಹಳ್ಳಿಯಲ್ಲಿ ಖಾಸಗಿ- ಸಾರ್ವಜನಿಕ ಸಹಭಾಗಿತ್ವದಲ್ಲಿ 153 ಎಕರೆ ಪ್ರದೇಶದಲ್ಲಿ ಯೋಜಸಿರುವ ಜೈವ ವೈವಿಧ್ಯ ಉದ್ಯಾನವನ ಪಾರ್ಕ್ ನಂತಹ ಯೋಜನೆಗಳಿಂದ ಬಹಳ ಉಪಯೋಗವಿದೆ. ಇದರ ಅಂದಾಜು ವೆಚ್ಚ ಸುಮಾರು ರೂ. 250 ಕೋಟಿ ಆಗಿದ್ದು, ಇದು ರಾಜ್ಯದ ಸಂಪನ್ಮೂಲಗಳನ್ನು ವಿಸ್ತರಿಸುತ್ತದೆ. ಆದ್ದರಿಂದ, ಕಾರ್ಪೊರೇಟ್ ಸಂಸ್ಥೆಗಳು ಮುಂದೆ ಬಂದು ಸರ್ಕಾರದೊಂದಿಗೆ ಕೈ ಜೋಡಿಸಬೇಕು ಎಂದು ಹೇಳಿದರು.**

# ಮೂಲಸೌಲಭ್ಯ ಕಲ್ಪಿಸುವುದು ಬಿಲ್ಡರ್‌ಗಳು, ಭೂಮಾಲೀಕರ ಹೊಣೆ

### ಕಾವೇರಿ ನೀರು, ಒಳಚರಂಡಿ ಸಂಪರ್ಕ ಒದಗಿಸಲು ವಿಫಲವಾದ ಹಿನ್ನೆಲೆಯಲ್ಲಿ ದೂರು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ವಸತಿ ಯೋಜನೆಗಳಲ್ಲಿ ನೀರು, ಒಳಚರಂಡಿ ಸಂಪರ್ಕ ಕಲ್ಪಿಸುವುದು ಬಿಲ್ಡರ್‌ಗಳು, ಭೂಮಾಲೀಕರ ಹೊಣೆಯಾಗಿದೆ ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ(ಕೆ-ರೇರಾ) ಮಹತ್ವದ ಆದೇಶ ನೀಡಿದೆ.

'ಮನೆ ಖರೀದಿದಾರರಿಗೆ ನೀರು ಮತ್ತು ಒಳಚರಂಡಿ ಸಂಪರ್ಕಗಳಂತಹ ಅಗತ್ಯ ನಾಗರಿಕ ಸೇವೆಗಳನ್ನು ಒದಗಿಸುವುದು ಸೇರಿ ಶಾಸನಬದ್ಧ ನಿಯಮಗಳ ಪಾಲನೆಗೆ ವಸತಿ ಯೋಜನೆ ನಿರ್ಮಾಣಕ್ಕೆ ಜಂಟಿ ಒಪ್ಪಂದ ಮಾಡಿಕೊಂಡಿರುವ ಅವರಿಬ್ಬರೂ ಬಾಧ್ಯಸ್ಥರು' ಎಂದು ಆದೇಶಿಸಿದೆ. ಇದು ಜಂಟಿ ಅಭಿವೃದ್ಧಿ ವಸತಿ ಯೋಜನೆಗಳ ಮೇಲೆ ದೂರಗಾಮಿ ಪರಿಣಾಮ ಬೀರಲಿದೆ. ಆದಿ ಡೆವಲಪರ್ಸ್ ವಿರುದ್ಧ ಎಲ್. ಅರುಣ್ ಸೇರಿ 30 ನಿವಾಸಿಗಳು ಸಲ್ಲಿಸಿದ್ದ ದೂರನ್ನು ಆಲಿಸಿದ ಕೆ-ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್.ರೆಡ್ಡಿ ಅವರಿದ್ದ ಪೀಠ ಜು.30ರಂದು ಈ ಆದೇಶವನ್ನು ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ಪೀಠ, ಜಂಟಿ ಅಭಿವೃದ್ಧಿ ಪಾಲುದಾರಿಕೆಗಳಲ್ಲಿ, ಮೂಲಭೂತ ಸೌಕರ್ಯವನ್ನು ಖಾತ್ರಿಪಡಿಸಿಕೊಳ್ಳುವ ಜವಾಬ್ದಾರಿ ಡೆವಲಪರ್‌ಗೆ ಮಾತ್ರ ಸೀಮಿತವಾಗಿರಬಾರದು. ಮನೆ ಖರೀದಿದಾರರ ಮೂಲಭೂತ ಸೇವೆಗಳ ಲಭ್ಯತೆ ಮೇಲೆ ನೇರ ಪರಿಣಾಮ ಬೀರುವ ಜವಾಬ್ದಾರಿಗಳನ್ನು ಪೂರೈಸಲು ಭೂಮಾಲೀಕರು ಸಹ ಸಮಾನ ಜವಾಬ್ದಾರರಾಗಿರುತ್ತಾರೆ ಎಂದು ಸ್ಪಷ್ಟಪಡಿಸಿದೆ. ಡೆವಲಪರ್, ಭೂಮಾಲೀಕರು ಮತ್ತು ಗೃಹ ಖರೀದಿದಾರರ ಸಂಘವು ಬೆಂಗಳೂರು ಜಲಮಂಡಳಿ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಯೋಜನೆಗೆ ಅಂತಿಮ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಪಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಅಲ್ಲದೆ, ಡೆವಲಪರ್, ಭೂಮಾಲೀಕರು ಹಕ್ಕು ಪತ್ರಗಳು, ಜಂಟಿ ಅಭಿವೃದ್ಧಿ ಒಪ್ಪಂದ, ಅನುಮೋದಿತ ಯೋಜನೆಗಳು, ಸ್ವಾಧೀನಾನುಭವ ಪ್ರಮಾಣಪತ್ರ ಮತ್ತು ಶಾಸನಬದ್ಧ ಅನುಮೋದನೆಗಳು ಸೇರಿದಂತೆ ಎಲ್ಲಾ ಮೂಲ ಯೋಜನಾ ದಾಖಲೆಗಳನ್ನು ಸರಿಯಾಗಿ ಗೃಹ ಖರೀದಿದಾರರ ಕಲ್ಯಾಣ ಸಂಘಕ್ಕೆ ಹಸ್ತಾಂತರಿಸಬೇಕು ಎಂದು ಕೆ-ರೇರಾ ತಿಳಿಸಿದೆ.





ಉದಯವಾಹಿನಿ ಚಿತ್ರ

**ಪ್ರಕರಣದ ಹಿನ್ನೆಲೆ:** ಆದಿ ಡೆವಲಪರ್ಸ್ ಬೆಂಗಳೂರು ಉತ್ತರ ತಾಲೂಕಿನ ಅಗ್ರಹಾರ ಗ್ರಾಮದ ಸರ್ವೇ ನಂಬರ್ 1/2, 18/2 ನಲ್ಲಿ ಆದಿ ನಾರ್ತ್ ಲೇಕ್ ಅನ್ನು ಅಭಿವೃದ್ಧಿಪಡಿಸಲು ಮುಂದಾಗಿ, ಆ ಸಂಬಂಧ ಭೂ ಮಾಲೀಕ ಬಿ.ಎ.ರಾಜಗೋಪಾಲ್ ರೊಂದಿಗೆ ಜಂಟಿ ಅಭಿವೃದ್ಧಿ ಒಪ್ಪಂದ(ಜೆಡಿಎ)ಮಾಡಿಕೊಂಡಿತ್ತು. ಅಭಿವೃದ್ಧಿ ಕಾರ್ಯವನ್ನೂ ಸಹ ಕೈಗೊಂಡಿತ್ತು. ಅಲ್ಲಿ ದೂರುದಾರ ಅರುಣ್ ಸೇರಿ 30ಕ್ಕೂ ಅಧಿಕ ಮಂದಿ ಹಣ ಹೂಡಿ ಫ್ಲ್ಯಾಟ್‌ಗಳನ್ನು ಖರೀದಿಸಿದ್ದರು. ಡೆವಲಪರ್, ಭೂ ಮಾಲೀಕರ ನಡುವೆ ಕ್ರಮವಾಗಿ ಶೇ.58 ಮತ್ತು ಶೇ.42ರಷ್ಟು ಹೂಡಿಕೆಗೆ ಒಪ್ಪಂದವಾಗಿತ್ತು. ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಂಡಿತ್ತು. ಬಹುತೇಕ ಮಂದಿಗೆ ಫ್ಲ್ಯಾಟ್‌ಗಳನ್ನು ಹಸ್ತಾಂತರ ಮಾಡಲಾಗಿತ್ತು. ಆದರೆ ಹಲವು ಬಾರಿ ಮನವಿ ಮಾಡಿದರೂ ಜಲಮಂಡಳಿಯಿಂದ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸಿರಲಿಲ್ಲ. ಜಲಮಂಡಳಿಯು ಹಲವು ಬಾರಿ ನೋಟಿಸ್ ನೀಡಿ, ಎಸ್‌ಟಿಪಿ ಸಂಪರ್ಕವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿತ್ತು. ಜತೆಗೆ ಕಾವೇರಿ ನೀರಿನ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿ ಅದನ್ನು ಪಡೆಯುವ ಜತೆಗೆ ಒಳಚರಂಡಿ ಸಂಪರ್ಕ ಪಡೆದುಕೊಳ್ಳುವಂತೆ ಸೂಚನೆ ನೀಡಿತ್ತು. ಆದರೂ ಡೆವಲಪರ್ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಜತೆಗೆ ನೀರು ಮತ್ತು ಒಳಚರಂಡಿ ಸಂಬಂಧ ಬಾಕಿ ಕಾಮಗಾರಿಗಳನ್ನೂ ಪೂರ್ಣಗೊಳಿಸಿರಲಿಲ್ಲ. ಹಾಗಾಗಿ ಕೆ-ರೇರಾ ಮೊರೆ ಹೋಗಿದ್ದ ದೂರುದಾರರು, ಆದಿ ಡೆವಲಪರ್ಸ್ ಮತ್ತು ಖಾಸಗಿ ಭೂಮಾಲೀಕರ ನಡುವಿನ ಜಂಟಿ ಅಭಿವೃದ್ಧಿ ಒಪ್ಪಂದದಡಿಯಲ್ಲಿಅಭಿವೃದ್ಧಿಪಡಿಸಲಾದ ವಸತಿ ಯೋಜನೆಯಲ್ಲಿಗೃಹ ಖರೀದಿದಾರರಿಂದ ಶುಲ್ಕ ಸಂಗ್ರಹಿಸುತ್ತಿದ್ದರೂ ಜಲಮಂಡಳಿಯಿಂದ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆಯಲು ಬಿಲ್ಡರ್ ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದರು.

**ಯೋಜನೆ ಹಸ್ತಾಂತರಕ್ಕೆ ನಿರ್ದೇಶನ**

**ಕೆ-ರೇರಾ, ರಿಯಲ್ ಎಸ್ಟೇಟ್ ಮತ್ತು ನಿಯಂತ್ರಣ ಕಾಯಿದೆಯ ಸೆಕ್ಷನ್ 11(4)(ಇ) ಅಡಿಯಲ್ಲಿ ಅಗತ್ಯ ವಿರುವಂತೆ ಡೆವಲಪರ್, ಇಡೀ ವಸತಿ ಯೋಜನೆಯನ್ನು ಗೃಹ ಖರೀದಿದಾರರ ಕಲ್ಯಾಣ ಸಂಘಕ್ಕೆ ಹಸ್ತಾಂತರ ಮಾಡಬೇಕೆಂದು ಆದೇಶಿಸಿದೆ. ವಸತಿ ಯೋಜನೆಯ ಕಾನೂನು ದಾಖಲೆಗಳು, ಕಾರ್ಯಾಚರಣೆಯ ದಾಖಲೆಗಳು ಅಥವಾ ಸಾಮಾನ್ಯ ಪ್ರದೇಶದ ಆಡಳಿತವನ್ನು ಹಸ್ತಾಂತರಿಸಿಲ್ಲ ಎಂದು ಮನೆ ಮಾಲೀಕರು ದೂರಿದ್ದಾರೆ. ಹಾಗಾಗಿ, ದಾಖಲೆಗಳನ್ನು ಹಸ್ತಾಂತರ ಮಾಡದಿರುವುದು ಆದೇಶಗಳ ಪಾಲನೆಗೆ ಕಷ್ಟಕರವಾಗಿದೆ. ಆದ್ದರಿಂದ ಬಿಲ್ಡರ್ ಎಲ್ಲಾ ಅಗತ್ಯ ದಾಖಲೆಗಳು ಮತ್ತು ಆಡಳಿತ ಜವಾಬ್ದಾರಿಗಳನ್ನು ಸಂಘಕ್ಕೆ ವರ್ಗಾಯಿಸಬೇಕು ಎಂದು ಪ್ರಾಧಿಕಾರವು ನಿರ್ದೇಶಿಸಿದೆ.**

> **ಅಲ್ಲದೆ, 2021ರ ಜೂನ್‌ನಲ್ಲಿ ಜಲಮಂಡಳಿ 91.36 ಲಕ್ಷಕ್ಕೆ ಡಿಮ್ಯಾಂಡ್ ನೋಟಿಸ್ ನೀಡಿತ್ತು. ಆದರೆ ಹಣ ಪಾವತಿಸದ ಕಾರಣ ಚಲನ್ ಅವಧಿ ಮೀರಿತ್ತು. 30 ಲಕ್ಷ ರೂ. ಪಾವತಿಸಲಾಗಿತ್ತು. ಆದರೆ ಭೂಮಾಲೀಕರು ತಮ್ಮ ಪಾಲಿನ 38.37 ಲಕ್ಷ ರೂ. ನೀಡಲು ವಿಫಲರಾಗಿದ್ದಾರೆ ಎಂದು ಹೇಳಿದ್ದರು.**

ಉದಯ ವಾಹಿನಿ

ಪ್ರಾದೇಶಿಕ

ಬುಧವಾರ 13 ಆಗಸ್ಟ್ 2025



# ಮೊಟ್ಟೆ ಕೊಟ್ಟು ಧಾರ್ಮಿಕ ಭಾವನೆಗೆ ಧಕ್ಕೆ

## ಸರ್ಕಾರಿ ಶಾಲೆ ತೊರೆದ ಮಂಡ್ಯದ 70 ವಿದ್ಯಾರ್ಥಿಗಳು, ಮೊಟ್ಟೆ ಮಕ್ಕಳಿಗೆ ಕೊಡಿ, ಬೇಯಿಸಬೇಡಿ

• ಉದಯವಾಹಿನಿ, ಮಂಡ್ಯ

ಬೆಳೆಯುತ್ತಿರುವ ಮಕ್ಕಳಲ್ಲಿ ಪೌಷ್ಠಿಕ ಆಹಾರ ವೃದ್ಧಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ, ಶಾಲಾ ಮಕ್ಕಳಿಗೆ ಮೊಟ್ಟೆ ಮತ್ತು ಚಿಕ್ಕಿ ನೀಡುತ್ತಿದ್ದಾರೆ. ಆದರೆ, ಮಂಡ್ಯ ತಾಲ್ಲೂಕಿನ ಆಲಕೆರೆ ಗ್ರಾಮದಲ್ಲಿ ಮೊಟ್ಟೆ ವಿತರಣೆ ವಿರೋಧಿಸಿ 70 ವಿದ್ಯಾರ್ಥಿಗಳು ಶಾಲೆ ತೊರೆದಿದ್ದಾರೆ. ಹೌದು, ಮಂಡ್ಯ ತಾಲ್ಲೂಕಿನ ಆಲಕೆರೆ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಈ ಹಿಂದೆಯೇ ಶಾಲೆಯಲ್ಲಿ ಮೊಟ್ಟೆ ಬೇಯಿಸುವ ವಿಚಾರವಾಗಿ ವಿರೋಧ ವ್ಯಕ್ತವಾಗಿತ್ತು. ಶಾಲೆ ಬಳಿ ದೇವಸ್ಥಾನದ ಇದೆ. ಇಲ್ಲಿ ಮೊಟ್ಟೆ ಬೇಯಿಸುವುದು ಧಾರ್ಮಿಕ ನಂಬಿಕೆ ಮಸಿಬಳಿದಂತೆ ಹೀಗಾಗಿ, ಮೊಟ್ಟೆ ಕೊಡಬೇಡಿ. ಇಷ್ಟಾಗ್ಗಿಯೂ ವಿತರಣೆ ಆರಂಭಿಸಿದರೆ, ನಾವು ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತೇವೆ. ವರ್ಗಾವಣೆ ಪತ್ರ ಕೊಡಿ ಎಂದು ಕೇಳಿದ್ದರು. ಅಧಿಕಾರಿಗಳು ನಿಯಮದಂತೆ ಮೊಟ್ಟೆ ವಿತರಣೆ ಆರಂಭಿಸಿದ್ದರಿಂದ ವಿದ್ಯಾರ್ಥಿಗಳು ಶಾಲೆ ತೊರೆದಿದ್ದಾರೆ. ಶಾಲೆಯಲ್ಲಿ ಮೊಟ್ಟೆ ವಿತರಣೆ ವಿಚಾರವಾಗಿ ಮಂಡ್ಯ ತಾಲ್ಲೂಕಿನ ಆಲಕೆರೆ ಗ್ರಾಮದಲ್ಲಿ ಭಿನ್ನಾಭಿಪ್ರಾಯಗಳು ಮೂಡಿವೆ. ಒಟ್ಟು 124 ವಿದ್ಯಾರ್ಥಿಗಳಲ್ಲಿ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಬಿಟ್ಟಿದ್ದಾರೆ. ನಮ್ಮ ಧಾರ್ಮಿಕ ಭಾವನೆಗೆ ಬೆಲೆ ಸಿಗದ ಜಾಗದಲ್ಲಿ ಇರುವುದು ಬೇಡ, ಓದುವುದು ಬೇಡ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.


ಉದಯವಾಹಿನಿ ಚಿತ್ರ

**ಪೌಷ್ಠಿಕ ಆಹಾರ ವೃದ್ಧಿಸುವ ಉದ್ದೇಶ**

**ಪೋಷಕರ ಬಿನ್ನಹೇನು?:** ಕಳೆದ ತಿಂಗಳು ಆಲಕೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮೊಟ್ಟೆ ನೀಡುವ ವಿಚಾರವಾಗಿ ಕಿಡಿ ಹೊತ್ತಿತ್ತು. ಹಸಿ ಮೊಟ್ಟೆಯನ್ನು ಮಕ್ಕಳ ಮನೆಗೆ ಕೊಟ್ಟು ಕಳುಹಿಸಿ ಇದಕ್ಕೆ ಅಭ್ಯಂತರವಿಲ್ಲ. ಆದರೆ, ಮೊಟ್ಟೆಯನ್ನು ಶಾಲೆಯಲ್ಲಿ ಬೇಯಿಸೋದು ಬೇಡ. ಇಲ್ಲಿ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಇದೆ. ಹೀಗಾಗಿ ಮೊಟ್ಟೆ ವಿತರಣೆ ಮಾಡಬಾರದು ಎಂದು ಕೆಲವರು ವಾದಿಸಿದ್ದರು. ದೇವಸ್ಥಾನದ ಸುತ್ತಮುತ್ತ ಮಾಂಸಾಹಾರ, ಮೊಟ್ಟೆಯನ್ನು ನಿಷೇಧಿಸಲಾಗಿದೆ. ಆದ್ದರಿಂದ ಶಾಲೆಯಲ್ಲಿಯೂ ಮೊಟ್ಟೆ ವಿತರಿಸಬಾರದು ಎಂದು ಪೋಷಕರು ಆಗ್ರಹಿಸಿದ್ದರು.

ಈ ಕಾರಣಕ್ಕೆ ಶಾಲೆಯಲ್ಲಿ ಮೊಟ್ಟೆ ವಿತರಣೆಯನ್ನು ಶಾಲಾ ಅಭಿವೃದ್ಧಿ, ಮೇಲ್ವಿಚಾರಣಾ ಸಮಿತಿ ನಿಲ್ಲಿಸಿತ್ತು. ಮೊಟ್ಟೆ ಬದಲಿಗೆ ಬಾಳೆಹಣ್ಣು ಮಿಠಾಯಿ ವಿತರಣೆ ಮಾಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಮತ್ತೆ ಮೊಟ್ಟೆ ವಿತರಣೆ ಮಾಡಲು ಮುಂದಾಗಿದ್ದರಿಂದ ಪೋಷಕರು ವಿರೋಧ ವ್ಯಕ್ತಪಡಿಸಿದರು.

**ಮೊಟ್ಟೆ ಕೊಡಿ ಬೇಯಿಸಬೇಡಿ:** ಮೊಟ್ಟೆ ತಿನ್ನುವ ಬಗ್ಗೆ ನಮ್ಮ ಆಕ್ಷೇಪ ಇಲ್ಲ. ಆದರೆ, ದೇವಸ್ಥಾನ ಇರುವ ಸ್ಥಳದಲ್ಲಿ ಮೊಟ್ಟೆ ಬೇಯಿಸುವುದು ನಮ್ಮ ಭಾವನೆಗೆ ಧಕ್ಕೆ ಮಾಡುವಂತಾಗಿದೆ. ಮೊಟ್ಟೆ ತಿನ್ನುವ ವಿದ್ಯಾರ್ಥಿಗಳ ಮನೆಗೇ ಅದನ್ನು ತಲುಪಿಸಿಬಿಡಿ. ನಮ್ಮ ಧಾರ್ಮಿಕ ಭಾವನೆಗೆ ಬೆಲೆ ನೀಡಬೇಕು. ಇಲ್ಲವಾದಲ್ಲಿ ವರ್ಗಾವಣೆ ಕೊಟ್ಟುಬಿಡಿ ನಮ್ಮ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸುತ್ತೇವೆ ಎಂದು ಪೋಷಕರು ಆಗ್ರಹಿಸಿದ್ದರು.

**ಮೊಟ್ಟೆ ದರ ಏರಿಕೆ**

**ಮೊಟ್ಟೆ ದರದಲ್ಲಿ ನಿಧಾನವಾಗಿ ಏರಿಳಿತ ಶುರುವಾಗಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಹಕ್ಕಿಜ್ವರದಿಂದಾಗಿ ಫಾರ್ಮ್‌ಗಳಿಗೆ ಬೀಗ ಬೀಳುತ್ತಿರುವ ಪರಿಣಾಮ ಕರ್ನಾಟಕದಲ್ಲಿ ಮೊಟ್ಟೆ ದರ ವಾರದಿಂದ ವಾರಕ್ಕೆ ಏರುತ್ತಿದೆ. ತಮಿಳುನಾಡಿನ ನಾಮಕಲ್ ಭಾಗದಿಂದ ಪ್ರತಿನಿತ್ಯ 80ರಿಂದ 90 ಲಕ್ಷ ಮೊಟ್ಟೆಗಳು ಮಧ್ಯಪ್ರಾಚ್ಯ ಸೇರಿದಂತೆ ಯುರೋಪ್ ರಾಷ್ಟ್ರಗಳಿಗೆ ಕಳೆದೊಂದು ತಿಂಗಳಿನಿಂದ ರಫ್ತು ಮಾಡಲಾಗುತ್ತಿದೆ. ತಮಿಳುನಾಡಿನಿಂದ ಕರ್ನಾಟಕಕ್ಕೆ ಬರುವ ಮೊಟ್ಟೆ ಪ್ರಮಾಣದಲ್ಲಿ ಇಳಿಕೆಯಾಗಿದೆ.**

## ಅವಿಶ್ವಾಸ ನಿರ್ಣಯದಲ್ಲಿ ಸೋಲು: ಮಳೂರು ಗ್ರಾ.ಪಂ. ಅಧ್ಯಕ್ಷ ಪದಚ್ಯುತಿ

• ಉದಯವಾಹಿನಿ, ಚನ್ನಪಟ್ಟಣ

ತೀವ್ರ ಕುತೂಹಲ ಕೆರಳಿಸಿದ್ದ ತಾಲ್ಲೂಕಿನ ಮಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ವಿರುದ್ಧ ಅವಿಶ್ವಾಸ ನಿರ್ಣಯದಲ್ಲಿ ಅಧ್ಯಕ್ಷ ಚೇತನ್ ಕುಮಾರ್ ಸೋಲುಂಡು ಪದಚ್ಯುತಿಗೊಂಡಿದ್ದಾರೆ ಗ್ರಾ.ಪಂ. ಕಚೇರಿಯಲ್ಲಿ ಉಪ ವಿಭಾಗಾಧಿಕಾರಿ ಪಿ.ಕೆ.ಬಿನೋಯ್ ಅಧ್ಯಕ್ಷತೆಯಲ್ಲಿ ನಡೆದ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಹಾಜರಿದ್ದ ಎಲ್ಲಾ 11 ಮಂದಿ ಸದಸ್ಯರು ಅಧ್ಯಕ್ಷರ ವಿರುದ್ಧ ಮತ ಚಲಾಯಿಸಿದರು. 16 ಮಂದಿ ಸದಸ್ಯ ಬಲದ ಗ್ರಾ.ಪಂ.ನಲ್ಲಿ ಹಾಲಿ ಅಧ್ಯಕ್ಷ ಚೇತನ್ ಕುಮಾರ್ ಸೇರಿ ಉಳಿದ 5 ಮಂದಿ ಗೈರು ಹಾಜರಾಗಿದ್ದರು.

ಕಳೆದ ಎರಡು ವರ್ಷಗಳ ಹಿಂದೆ ಅಧ್ಯಕ್ಷನಾದಿಗೇರಿದ್ದ ಕಾಂಗ್ರೆಸ್ ಬೆಂಬಲಿತ ಚೇತನ್ ಕುಮಾರ್ ಅವರಿಗೆ ಇನ್ನೂ ಆರು ತಿಂಗಳ ಅಧಿಕಾರವಾಧಿ ಇತ್ತು. ಆದರೆ, ಅವರ ಅಧಿಕಾರದಲ್ಲಿ ಕೆಲಸ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಕೆಲ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿದೆ. ಮತ್ತಿತರ ಆರೋಪದ ಮೇಲೆ 11 ಮಂದಿ ಸದಸ್ಯರು ಅವಿಶ್ವಾಸ ನಿರ್ಣಯ ತಂದಿದ್ದರು. ಈ ಹಿನ್ನೆಲೆಯಲ್ಲಿ ಸೋಮವಾರ ಸಭೆ ನಡೆಯಿತು.

**ಚಾಕು ಇರಿತಕ್ಕೊಳಗಾಗಿದ್ದ ಸದಸ್ಯ ಹಾಜರು:** ಅವಿಶ್ವಾಸ ನಿರ್ಣಯ ಸಭೆ ನಿಗದಿ ಹಿನ್ನೆಲೆಯಲ್ಲಿ ಕಳೆದ ಸೋಮವಾರ (ಆ.4) ದುಷ್ಕರ್ಮಿಗಳಿಂದ ಚಾಕು ಇರಿತಕ್ಕೆ ಒಳಗಾಗಿದ್ದ ಗ್ರಾ.ಪಂ.ಸದಸ್ಯ ವೆಂಕಟೇಶ್ ಅವರು ಇಂದಿನ ಅವಿಶ್ವಾಸ ನಿರ್ಣಯ ಸಭೆಗೆ ಹಾಜರಾಗಿ ಅಧ್ಯಕ್ಷರ ವಿರುದ್ಧ ಮತ ಚಲಾಯಿಸಿದರು. ಅಧ್ಯಕ್ಷರ ಅವಿಶ್ವಾಸ ನಿರ್ಣಯದ ಹಿನ್ನೆಲೆಯಲ್ಲಿ ತಾಲ್ಲೂಕಿನ ಕೋಟಮಾರನಹಳ್ಳಿ ವೆಂಕಟೇಶ್ (52) ಅವರನ್ನು ಅಪಹರಣ ಮಾಡಲು ಯತ್ನಿಸಿ, ಅದು ವಿಫಲವಾದಾಗ ಅವರಿಗೆ ಚಾಕುವಿನಿಂದ ಇರಿದು ಕೆಲ ದುಷ್ಕರ್ಮಿಗಳು ಪರಾರಿಯಾಗಿದ್ದರು. ಮಕ್ಕಳನ್ನು ಅಂದು ಬೆಳಿಗ್ಗೆ ಬೈರಾಪಟ್ಟಣ ಶಾಲೆಗೆ ಬಿಟ್ಟು ವಾಪಸ್ ಮನೆಗೆ ಬರುತ್ತಿದ್ದ ವೇಳೆ ಮಳೂರು ಕೆರೆ ಏರಿ ಮೇಲೆ ಕಾರಿನಲ್ಲಿ ಬಂದ ಐವರು ದುಷ್ಕರ್ಮಿಗಳು ಅವರನ್ನು ಅಡ್ಡಗಟ್ಟಿ ಅಪಹರಣ ಮಾಡಲು ಯತ್ನಿಸಿದ್ದರು. ಅವರು ಕೂಗಿಕೊಂಡಾಗ ಕೆರೆ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ಸ್ಥಳಕ್ಕೆ ಧಾವಿಸಿದ್ದರು.

ಆಗ ಹೆದರಿದ್ದ ದುಷ್ಕರ್ಮಿಗಳು ವೆಂಕಟೇಶ್ ಅವರಿಗೆ ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ಗಾಯಗೊಂಡಿದ್ದ ವೆಂಕಟೇಶ್ ಅವರನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ವೆಂಕಟೇಶ್ ಅವರ ಹೊಟ್ಟೆಗೆ, ಕಾಲಿಗೆ ಗಾಯಗಳಾಗಿತ್ತು. ನಂತರ ಚಿಕಿತ್ಸೆಯಿಂದ ಚೇತರಿಸಿಕೊಂಡಿದ್ದರು. ಗ್ರಾ.ಪಂ.ಅಧ್ಯಕ್ಷ ವಿರುದ್ಧ ತಂದಿರುವ ಅವಿಶ್ವಾಸ ನಿರ್ಣಯದ ಹಿನ್ನೆಲೆಯಲ್ಲಿ ಅಪಹರಣ ಯತ್ನ ನಡೆದಿದೆ. ಈ ಅಪಹರಣದ ಹಿಂದೆ ಹಾಲಿ ಅಧ್ಯಕ್ಷ ಚೇತನ್ ಕುಮಾರ್, ಗ್ರಾ.ಪಂ.ಸದಸ್ಯ ರಾಜೇಶ್ ಮೇಲೆ ಅನುಮಾನ ಇದೆ ಎಂದು ವೆಂಕಟೇಶ್ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದರು.



ಉದಯವಾಹಿನಿ ಚಿತ್ರ

**ತಲೆಮರೆಸಿಕೊಂಡಿರುವ ಅಧ್ಯಕ್ಷ**

**ಸದಸ್ಯ ತಾಲ್ಲೂಕಿನ ಕೋಟಮಾರನಹಳ್ಳಿ ಗ್ರಾ.ಪಂ.ಸದಸ್ಯ ವೆಂಕಟೇಶ್ ಅವರನ್ನು ಅಪಹರಣ ಮಾಡಲು ಯತ್ನಿಸಿ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುವ ಅಧ್ಯಕ್ಷ ಚೇತನ್ ಕುಮಾರ್ ಹಾಗೂ ಸದಸ್ಯ ರಾಜೇಶ್ ಅವರು ತಲೆಮರೆಸಿಕೊಂಡಿದ್ದಾರೆ ಎಂದು ಗ್ರಾಮಾಂತರ ಪೊಲೀಸರು ತಿಳಿಸಿದ್ದಾರೆ. ಜೊತೆಗೆ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನೂ ಮೂವರು ಸಹ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.**

## ಮಿಷನರಿಗಳಿಂದ ಧರ್ಮಸ್ಥಳದ ವಿರುದ್ಧ ಅಪಪ್ರಚಾರ

• ಉದಯವಾಹಿನಿ, ಕೋಲಾರ

ಹಿಂದೂ ವಿರೋಧಿ ಮಿಷನರಿಗಳು ಒಟ್ಟಾಗಿ ಸೇರಿಕೊಂಡು ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿವೆ ಎಂದು ಮಾಜಿ ಸಂಸದ ಎಸ್.ಮುನಿಸ್ವಾಮಿ ಆರೋಪಿಸಿದರು. ಜಿಲ್ಲಾಡಳಿತದ ಭವನದ ಮುಂದೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೂ ದೇಗುಲಗಳು, ಮಠಗಳನ್ನು ಗುರಿಯಾಗಿಸಿ ಷಡ್ಯಂತ್ರ ನಡೆಯುತ್ತಿದೆ. ಹಿಂದೂ ವಿರೋಧಿ ಕೃತ್ಯಗಳಿಗೆ ಫಂಡಿಂಗ್ ಬರುತ್ತಿದೆ ಎಂದರು.

ಈ ಬಗ್ಗೆ ಕೂಡಲೇ ತನಿಖೆ ಮಾಡಬೇಕು. ಮಹೇಶ್ ತಿಮ್ಮರೋಡಿ ಎಂಬಾತನನ್ನು ಕೂಡಲೇ ಬಂಧಿಸಬೇಕು. ಆತನ ಬ್ಯಾಂಕ್ ಖಾತೆಯನ್ನು ಪರಿಶೀಲಿಸಬೇಕು ಎಂದು ಒತ್ತಾಯಿಸಿದರು. ಕಾಂಗ್ರೆಸ್ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ ಅವರ ಜೊತೆ ಸೇರಿಕೊಂಡು ಪಿತೂರಿ ನಡೆಸುತ್ತಿದೆ ಎಂಬ ಅನುಮಾನ ಬರುತ್ತಿದೆ ಎಂದು ಹೇಳಿದರು. ಧರ್ಮಸ್ಥಳದಲ್ಲಿ ನೂರಾರು ಶವ ಹೂತಿಟ್ಟಿರುವುದಾಗಿ ಮುಸುಕುಧಾರಿ ವ್ಯಕ್ತಿ ನೀಡಿದ ಹೇಳಿಕೆಯಲ್ಲಿ ಸತ್ಯವಿಲ್ಲ. ಈವರೆಗೆ ಒಂದೆರಡು ಕಡೆ ಬಿಟ್ಟರೆ ಬೇರೆಲ್ಲೂ ಕಳೆಬರಹ ಸಿಕ್ಕಿಲ್ಲ. ಸೌಜನ್ಯ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದರೂ ಶಿಕ್ಷೆಯಾಗಬೇಕೆಂದು ಮೊದಲಿನಿಂದಲೂ ನಾವು ಒತ್ತಾಯ ಮಾಡುತ್ತಿದ್ದೇವೆ. ನಾವು ಸೌಜನ್ಯ ಪರವಾಗಿದ್ದೇವೆ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಮೇಲೆ ದೊಡ್ಡ ಷಡ್ಯಂತ್ರ ನಡೆಯುತ್ತಿದೆ, ಅನಾಥ ಶವಗಳನ್ನು ಧರ್ಮಸ್ಥಳದ ಅವರಣದಲ್ಲಿ ಹೂತಿಟ್ಟು, ಧರ್ಮಸ್ಥಳದ ಮೇಲೆ ಅಪ್ರಪಚಾರ ಮಾಡಲಾಗುತ್ತಿದೆ. ಇದಕ್ಕೆ ಎಸ್‌ಐಟಿ ಬಿಟ್ಟು ಪ್ರಕರಣವನ್ನು ದಾರಿ ತಪ್ಪಿಸುವ ಕೆಲಸ ಮಾಡಿದರೆ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಮುಸುಕುಧಾರಿಯನ್ನು ಕಳುಹಿಸಿದ್ದು ಯಾರು? ಯೂಟ್ಯೂಬರ್‌ನ ಅಲ್ಲಿಗೆ ಕಳುಹಿಸಿದ್ದು ಯಾರು? ಇವರ ಹಿಂದೆ ಯಾರು ಇದ್ದಾರೆ ಎಂಬುದು ಗೊತ್ತಾಗಬೇಕು ಎಂದು ಆಗ್ರಹಿಸಿದರು. ಮತಗಳ್ಳತನ ಕುರಿತು ರಾಹುಲ್ ಗಾಂಧಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿ, ಮತಗಳ್ಳತನ ಮಾಡಿ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದ್ದು ಯಾರಾದರೂ ಇದ್ದರೆ ಅದು ಪ್ರಧಾನಿ ಹುದ್ದೆ ಕಳೆದುಕೊಂಡ ಇಂದಿರಾ ಗಾಂಧಿ ಮಾತ್ರ. ರಾಹುಲ್ ಅವರಿಗೆ ಲೋಕಜ್ಞಾನ ಇಲ್ಲ. ಅವರ ಹೋರಾಟಕ್ಕೆ ಕಾವಡೆ ಕಾಸಿನ ಕಿಮ್ಮತ್ತಿಲ್ಲ ಎಂದರು. ಮತದಾನ ನಡೆದಾಗ ರಾಜ್ಯದಲ್ಲಿ ಸರ್ಕಾರ ಯಾವುದು ಇತ್ತು ಚುನಾವಣಾಧಿಕಾರಿಗಳು ಯಾರು ಇದ್ದರು ಆಕ್ಷೇಪಣೆ ಸಲ್ಲಿಸಲು ಸಮಯವಿದ್ದಾಗ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.


ಉದಯವಾಹಿನಿ ಚಿತ್ರ

## ಗ್ರಾ.ಪಂ ನಕಲಿ ಬಿಲ್ಲು ಅವ್ಯವಹಾರ-ಪ್ರತಿಭಟನೆ

• ಉದಯವಾಹಿನಿ, ತಿಪಟೂರು

ಕಾಂಗ್ರೆಸ್ ಆಡಳಿತದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ನಡೆಯುತ್ತಿರುವ ನಕಲಿ ಬಿಲ್ಲುಗಳ ಅವ್ಯವಹಾರ ವಿರುದ್ಧ ತಿಪಟೂರು ತಾಲ್ಲೂಕು ಬಿಜೆಪಿ ಘಟಕದಿಂದ ಮಾಜಿ ಸಚಿವ ಬಿ.ಸಿ.ನಾಗೇಶ್ ನೇತೃತ್ವದಲ್ಲಿ ತಾಲ್ಲೂಕು ಪಂಚಾಯಿತಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ಕುಪ್ಪಾಳು ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಲಕ್ಷಾಂತರ ರೂಪಾಯಿ ಅವ್ಯವಹಾರ ಹಾಗೂ ಅರಳಗುಪ್ಪೆ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ನಡೆಯುತ್ತಿರುವ ಅವ್ಯವಹಾರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಾಯಿತು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಂಗರಾಜು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಒಂದಾಗಿನಿಂದ ಹಲವಾರು ಹಗರಣಗಳಲ್ಲಿ ಭಾಗಿಯಾಗಿದೆ.

ತಾಲ್ಲೂಕಿನಲ್ಲೂ ಭ್ರಷ್ಟಾಚಾರ ಮುಂದುವರೆದಿದೆ. ಕುಪ್ಪಾಳು ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಆರೋಪಿಸಿರುವಂತೆ ಕಾಮಗಾರಿ ನಡೆಸದೆಯೇ ಬಿಲ್ ಪಡೆಯಲಾಗಿದೆ. ತಂತಿ ಬೇಲಿ ನಿರ್ಮಾಣ ಮಾಡಲಾಗಿದೆ ಎಂದು, ಕೊಡ್ಲಿಘಟ್ಟ ಗ್ರಾಮದಲ್ಲಿ ಬಸಿಕಾಲುವೆ ನಿರ್ಮಾಣ ಮಾಡಲಾಗಿದೆ ಎಂದು ನಕಲಿ ದಾಖಲೆ ಸೃಷ್ಟಿಸಿ ಬಿಲ್ ಪಡೆಯಲಾಗಿದೆ ಎಂದರು. ಅರಳಗುಪ್ಪೆ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸರಿಯಾಗಿ ಊಟ ನೀಡುತ್ತಿಲ್ಲ. ಕಳಪೆ ಗುಣಮಟ್ಟದ ಆಹಾರ ಸೇವನೆ ಮಾಡಿ 6 ಮಕ್ಕಳು ಅಸ್ವಸ್ಥರಾಗಿದ್ದಾರೆ. ತಾ.ಪಂ ಇಒ ಸಮಗ್ರವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದರು. ಜಿಲ್ಲಾ ಉಪಾಧ್ಯಕ್ಷ ಹರೀಸಮುದ್ರ ಗಂಗಾಧರ್ ಮಾತನಾಡಿ, ತಾಲ್ಲೂಕಿನಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಶಾಸಕರು, ಮಾಜಿ ಸಚಿವರ ಕಾಲಾವಧಿಯಲ್ಲಿ ಮಂಜೂರಾದ ಕಾಮಗಾರಿಗೆ ಭೂಮಿಪೂಜೆ ಮಾಡುವ ಕೆಲಸದಲ್ಲಿ ಕಾಲ ಕಳೆಯುತ್ತಿದ್ದಾರೆ. ಜಲಜೀವನ ಮಿಷನ್ ಯೋಜನೆ ಗುತ್ತಿಗೆಯಲ್ಲಿ ಪಕ್ಷಪಾತ ಮಾಡುತ್ತಿದ್ದು ಕಾಮಗಾರಿ ಮಾಡಲು ಗುತ್ತಿಗೆ ಪಡೆದ ಬಿಜೆಪಿ ಮುಖಂಡರಿಗೆ ತೊಂದರೆ ನೀಡಲಾಗುತ್ತಿದೆ. ದ್ವೇಷ ರಾಜಕಾರಣ ಮುಂದುವರೆದರೆ ಹೋರಾಟ ನಡೆಸಬೇಕಾಗುತ್ತದೆ ಎಂದರು.

ತಾಲ್ಲೂಕು ಪಂಚಾಯಿತಿ ಇಒಗೆ ಮನವಿ ಸಲ್ಲಿಸಿ, ಗ್ರಾಮ ಪಂಚಾಯಿತಿಗಳ ನಕಲಿ ಬಿಲ್ಲುಗಳ ತನಿಖೆ ನಡೆಸಿ ಹೊಣೆಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಯಿತು.



ಉದಯವಾಹಿನಿ ಚಿತ್ರ

## ಸುನ್ನಿ ಯುವಜನ ಸಂಘದ ವತಿಯಿಂದ 15ರಂದು ರಾಷ್ಟ್ರರಕ್ಷಾ ಸಂಗಮ

• ಉದಯವಾಹಿನಿ, ಮಡಿಕೇರಿ

ಸುನ್ನಿ ಯುವಜನ ಸಂಘದ ವತಿಯಿಂದ ಆ. 15ರಂದು ಸಂಜೆ 4 ಗಂಟೆಗೆ ಕೊಡ್ಲಿಪೇಟೆಯ ನೂರ್‌ಮಹಲ್ ಸಭಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಜಾತ್ಯತೀತತೆ ಭಾರತದ ಧರ್ಮ ಎಂಬ ಶೀರ್ಷಿಕೆಯಡಿ ರಾಷ್ಟ್ರ ರಕ್ಷಾ ಸಂಗಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಸಿ.ಎಂ.ಅಬ್ದುಲ್ ಹಮೀದ್ ಮೌಲವಿ ತಿಳಿಸಿದರು.



ಕಿರಿ ಕೊಡ್ಲಿಮಠದ ಮಠಾಧೀಶರಾದ ಸದಾಶಿವ ಸ್ವಾಮೀಜಿ, ಕೊಡ್ಲಿಪೇಟೆ ಚರ್ಚ್‌ನ ಪ್ರೆಡ್ಡಿ, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್. ಪೊನ್ನಣ್ಣ ಭಾಗವಹಿಸಲಿದ್ದಾರೆ ಎಂದು ಅವರು ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಮುಖಂಡರಾದ ಕೆ.ಎ. ಯಾಕೂಬ್ ಮಾತನಾಡಿ, ಹಲವಾರು ವರ್ಷಗಳಿಂದ ಕೊಡಗು ಜಿಲ್ಲೆಯ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಎಸ್‌ವೈಎಸ್ ನಡೆಸುತ್ತಾ ಬಂದಿದೆ. ನಮ್ಮ ಧರ್ಮ, ಜಾತಿ, ಪಕ್ಷ, ಪಂಗಡ, ಆಹಾರ ಪದ್ಧತಿ, ವಸ್ತ್ರಧಾರಣೆ, ಸಂಸ್ಕೃತಿ ಇವೆಲ್ಲವೂ ಬೇರೆ, ಬೇರೆಯಾಗಿರಬಹುದು.

ಆದರೆ, ನಾವೆಲ್ಲರೂ ಭಾರತೀಯರು. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರ ಭಾರತ ನಮ್ಮೆಲ್ಲರ ಗುರಿ ಎಂದು ಹೇಳಿದರು. ಮುಖಂಡರಾದ ಉಸ್ಮಾನ್ ಫೈಜಿ, ರಫೀಕ್ ಹಾಜಿ, ಮೊಹಮ್ಮದ್ ಶರೀಫ್, ಇಬ್ರಾಹಿಂ ಭಾಗವಹಿಸಿದ್ದರು.

**ನೂರಾರು ವರ್ಷಗಳ ಕಾಲ ಭಾರತವನ್ನು ಆಳಿ ಭಾರತೀಯರನ್ನು ಗುಲಾಮಗಿರಿಯಲ್ಲಿಟ್ಟು ಭಾರತದ ಸಂಪತ್ತನ್ನು ಲೂಟಿ ಮಾಡಿ ತಮ್ಮ ರಾಷ್ಟ್ರಕ್ಕೆ ಕೊಂಡೊಯ್ಯುತ್ತಿದ್ದ ಆಂಗ್ಲರನ್ನು ಬಗ್ಗುಬಡಿದು ಅವರ ಕಪಿಮುಷ್ಠಿಯಿಂದ ಭಾರತವನ್ನು ಸ್ವಾತಂತ್ರಗೊಳಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದು, ನಮ್ಮ ಪೂರ್ವಿಕರ ಒಗ್ಗಟ್ಟಿನಿಂದ, ಅಹಿಂಸಾ ಹೋರಾಟದಿಂದ ಎಂದು ಹೇಳಿದ ಅವರು, ಹಿಂಸೆ, ದ್ವೇಷ, ಕಲಹದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ' ಎಂದರು.**

## 25 ಸಾವಿರ ಟನ್ ರಸಗೊಬ್ಬರ ದಾಸ್ತಾನು: ಡಿಸಿ ಕುಮಾರ

• ಉದಯವಾಹಿನಿ, ಮಂಡ್ಯ

ಜಿಲ್ಲೆಯಲ್ಲಿ 25 ಸಾವಿರಕ್ಕೂ ಹೆಚ್ಚು ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ. ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ ಇಲ್ಲ, ರೈತರು ನಿರಾತಂಕವಾಗಿ ಕೃಷಿ ಕೆಲಸಗಳನ್ನು ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೃಷಿ ಇಲಾಖೆ ವತಿಯಿಂದ ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 4,200 ಮೆಟ್ರಿಕ್ ಟನ್ ಯೂರಿಯಾ ಲಭ್ಯವಿದ್ದು, ಎಂದು ತಿಳಿಸಿದರು. ಈಗಾಗಲೇ ಮಂಡ್ಯ, ಶ್ರೀರಂಗಪಟ್ಟಣ, ನಾಗಮಂಗಲಗಳಲ್ಲಿ ನಾಟಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಭಾಗದಲ್ಲೂ ನಾಟಿ ಕೆಲಸ ಶುರುವಾಗುವ ಹಿನ್ನೆಲೆಯಲ್ಲಿ ಅಧಿಕಾರಿಗಳು ರೈತರಿಗೆ ನಾಟಿ ಸಂದರ್ಭದಲ್ಲಿ ಯೂರಿಯಾ ಬದಲು ಎನ್.ಪಿ.ಕೆ ಕಾಂಪ್ಲೆಕ್ಸ್ ಅನ್ನು ಬಳಸುವಂತೆ ಜಾಗೃತಿ ಮೂಡಿಸಿ ಎಂದರು.

**ನ್ಯಾನೊ ಯೂರಿಯಾ ಬಳಸಿ:** ಮೇವು ವೇಗವಾಗಿ ಬೆಳೆಯಲು ರೈತರು ಹೆಚ್ಚು ಯೂರಿಯಾ ಬಳಸುತ್ತಾರೆ. ಮೇವು ವೇಗವಾಗಿ ಬೆಳೆದರೂ ಪೌಷ್ಟಿಕಾಂಶಗಳ ಕೊರತೆ ಇರುತ್ತದೆ. ಅದರಿಂದ ಹಾಲಿನ ಗುಣಮಟ್ಟದ ಪ್ರಮಾಣ ಕಡಿಮೆಯಾಗುತ್ತದೆ. ಇದರ ಕುರಿತಾಗಿ ರೈತರಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಇದರಿಂದಾಗಿ ಯೂರಿಯಾ ಬದಲು ನ್ಯಾನೊ ಯೂರಿಯಾ ಬಳಸಬೇಕು ಎಂದರು.

ರೈತರು ನಾಟಿ ಸಂದರ್ಭದಲ್ಲಿ ಹೆಚ್ಚಾಗಿ ಯೂರಿಯಾ ಬಳಕೆ ಮಾಡುವುದರಿಂದ ಬೆಳೆಯ ಗುಣಮಟ್ಟ ಕುಂದುತ್ತದೆ. ಆದ್ದರಿಂದ ನಾಟಿ ಸಂದರ್ಭದಲ್ಲಿ ಕಾಂಪ್ಲೆಕ್ಸ್, ಹಸಿರೆಲೆ ಗೊಬ್ಬರ ಮತ್ತು ಸಾವಯವ ಗೊಬ್ಬರವನ್ನು ಬಳಕೆ ಮಾಡಬೇಕು ಎಂದರು.

ಜಿಲ್ಲೆಗೆ 6 ಸಾವಿರಕ್ಕೂ ಹೆಚ್ಚು ಮೆಟ್ರಿಕ್ ಟನ್ ಬಿತ್ತನೆ ಬೀಜದ ಅಗತ್ಯವಿದೆ, ಪ್ರಸ್ತುತ ಜಿಲ್ಲೆಗೆ ಬಿತ್ತನೆ ಬೀಜದ ದಾಸ್ತಾನು ಇದ್ದು, ಯಾವುದೇ ಕೊರತೆ ಇಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಜಿಲ್ಲೆಯಲ್ಲಿ ಪ್ರಸ್ತುತ ಅಗತ್ಯಕ್ಕಿಂತ ಹೆಚ್ಚಾಗಿ ಯೂರಿಯಾವನ್ನು ರೈತರು ಬಳಕೆ ಮಾಡುತ್ತಿದ್ದಾರೆ. ಇದರಿಂದ ಬೆಳೆಗಳ ಗುಣಮಟ್ಟ ಕಮ್ಮಿಯಾಗುತ್ತದೆ. ಯೂರಿಯಾ ಬದಲು ಕಾಂಪ್ಲೆಕ್ಸ್ ಬಳಸಿ.**

**- ಅಶೋಕ್ ವಿ.ಎಸ್., ಜಂಟಿ ಕೃಷಿ ನಿರ್ದೇಶಕ ಮಂಡ್ಯ**

**ಕೃತಕ ಅಭಾವ**

**ಸೃಷ್ಟಿಯಾಗದಂತೆ ಕ್ರಮವಹಿಸಿ ಪಿ.ಒ.ಎಸ್ ಆನ್‌ಲೈನ್‌ನಲ್ಲಿ ಭರ್ತಿ ಮಾಡುವ, ಲಭ್ಯವಿರುವ ಭೌತಿಕ ದಾಸ್ತಾನಿಗೂ ತಾಳೆ ಇರಬೇಕು ಸಂಬಂಧಪಟ್ಟ ಅಧಿಕಾರಿಗಳು ಆಗಾಗ ಪರಿಶೀಲನೆ ನಡೆಸಬೇಕು. ಜಿಲ್ಲೆಯಲ್ಲಿ ರಸಗೊಬ್ಬರ ಕೃತಕ ಅಭಾವ ಸೃಷ್ಟಿಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು. ರಸಗೊಬ್ಬರವನ್ನು ಅನಧಿಕೃತವಾಗಿ ಮಾರಾಟ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಪರವಾನಗಿ ರದ್ದುಪಡಿಸಬೇಕು ಎಂದು ತಾಕೀತು ಮಾಡಿದರು.**

# ಒಳ ಮೀಸಲಾತಿ ಸಮೀಕ್ಷೆ: ಜಿಲ್ಲೆಯಲ್ಲಿ 2.96 ಲಕ್ಷ ಪರಿಶಿಷ್ಟರು

## ಸಮೀಕ್ಷೆ ಪ್ರಕಾರ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ 74,044 ಕುಟುಂಬಗಳಿದ್ದು, ಒಟ್ಟು 2,96,656 ಸದಸ್ಯರು ಇದ್ದಾರೆ. ಪರಿಶಿಷ್ಟರಿಗೆ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ರಾಜ್ಯ ಸರ್ಕಾರ ನಿಯೋಜಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ನೇತೃತ್ವದ ಆಯೋಗ ನಡೆಸಿರುವ ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆಯಿಂದ ಈ ಅಂಶ ತಿಳಿದುಬಂದಿದೆ. ಆಯೋಗವು ಮೇ 5ರಿಂದ ಜೂನ್ 30ರವರೆಗೆ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಯವರ ಸಮೀಕ್ಷೆ ಕೈಗೊಂಡಿತ್ತು. ಶಾಲಾ ಶಿಕ್ಷಕರಿಂದ ಮನೆ ಭೇಟಿ ಮೂಲಕ, ನಾಗರಿಕ ಸೇವಾ ಕೇಂದ್ರಗಳಾದ ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳು, ಬಾಪೂಜಿ ಸೇವಾ ಕೇಂದ್ರ, ಆನ್‌ಲೈನ್‌ನಲ್ಲಿ ಸ್ವಯಂ ಘೋಷಣೆ ಮೂಲಕವೂ ನಡೆದಿದೆ.

ಸಮೀಕ್ಷೆಯಲ್ಲಿ ಜಿಲ್ಲೆಯ ಶೇ 94.91ರಷ್ಟು ಪರಿಶಿಷ್ಟರು ಭಾಗಿ ಆಗಿದ್ದಾರೆ. ಸಮೀಕ್ಷೆ ಪ್ರಕಾರ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ನಾಗಮೋಹನ್ ದಾಸ್ ಆಯೋಗದ ಸಮೀಕ್ಷೆಯಲ್ಲಿ ಜಿಲ್ಲೆಯ ಪರಿಶಿಷ್ಟರಿಗೆ ಸಂಬಂಧಿಸಿದ ನಾನಾ ವಿಚಾರಗಳು ಅಡಕವಾಗಿವೆ. ಜಿಲ್ಲೆಯಲ್ಲಿ ಆಯೋಗವು 80,095 ಮನೆಗಳನ್ನು 2025ರ ಸಮೀಕ್ಷೆಗೆ ಒಳಪಡಿಸಿದೆ. ಒಟ್ಟಾರೆಯಾಗಿ ಶೇ 108.17ರಷ್ಟು ಕುಟುಂಬಗಳ ಸಮೀಕ್ಷೆ ನಡೆದಿದೆ. ಇದರಲ್ಲಿ ಶೇ 94.91ರಷ್ಟು ಪರಿಶಿಷ್ಟರು ಭಾಗಿ ಆಗಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಗ್ರಾಮೀಣ ಭಾಗಗಳಲ್ಲಿ 80,807 ಪುರುಷರು, 81,826 ಮಹಿಳೆಯರು 38 ಮಂದಿ ಲಿಂಗತ್ವ ಅಲ್ಪಸಂಖ್ಯಾತರಯ ಸೇರಿ ಪರಿಶಿಷ್ಟ ಸಮುದಾಯದ 1,62,671 ಮಂದಿ ಇದ್ದಾರೆ. ನಗರ ಪ್ರದೇಶದಲ್ಲಿ 66,301 ಮಂದಿ ಪುರುಷರು, 67,279 ಮಹಿಳೆಯರು, 30 ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಸೇರಿ 1,33,610 ಮಂದಿ ಪರಿಶಿಷ್ಟರು ವಾಸಿಸುತ್ತಿದ್ದಾರೆ. ಗ್ರಾಮೀಣ, ನಗರ ಪ್ರದೇಶ ಸೇರಿ ಜಿಲ್ಲೆಯಲ್ಲಿ 1,47,108 ಮಂದಿ ಪುರುಷರು, 1,49,,105 ಮಹಿಳೆಯರು 68 ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಇದ್ದಾರೆ. ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳು ಗ್ರಾಮೀಣ ಪ್ರದೇಶದ ಕುಟುಂಬಗಳಿಗಿಂತ ಆರ್ಥಿಕವಾಗಿ ಮುಂದುವರಿದಿವೆ ಎಂದು ಆಯೋಗ ತಿಳಿಸಿದೆ.

**ಹೆಚ್ಚಿದ ಬೇಡ, ಬುಡ್ಗ ಜಂಗಮ:** ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಬೇಡ, ಬುಡ್ಗ ಜಂಗಮ ಸಮುದಾಯವು ಹೆಚ್ಚಿದೆ. ಬೇಡ ಜಂಗಮ ಜಾತಿ ಪ್ರಮಾಣ ಪತ್ರದ ವಿಚಾರದಲ್ಲಿ ತೀವ್ರ ವಿವಾದಗಳು ಸಹ ತಲೆದೂರಿದ್ದವು. ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರ.ಸಂ 19ರಲ್ಲಿ ಬೇಡ ಜಂಗಮ, ಬುಡ್ಗ ಜಂಗಮ ಎಂದು ನಮೂದಿಸಲಾಗಿದೆ. 2011ರ ಜನಗಣತಿ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2,728 ಮಂದಿ ಈ ಸಮುದಾಯದವರು ಇದ್ದರು. ಪರಿಶಿಷ್ಟರ ಜಾತಿ ಗಣತಿಯಲ್ಲಿ ಬೇಡ ಜಂಗಮ ಮತ್ತು ಬುಡ್ಗ ಜಂಗಮ ಸಮುದಾಯವು ಜಿಲ್ಲೆಯಲ್ಲಿ 3,354 ಮಂದಿ ಇದ್ದಾರೆ ಎಂದು ಅಂದಾಜಿಸಲಾಗಿತ್ತು. ಈಗ ನಡೆದಿರುವ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ 2025ರ ಪ್ರಕಾರ ಬುಡ್ಗ ಜಂಗಮ ಮತ್ತು ಬೇಡ ಜಂಗಮ ಸಮುದಾಯದ ಜನಸಂಖ್ಯೆ ಜಿಲ್ಲೆಯಲ್ಲಿ 2900 ಇದೆ. ಜಿಲ್ಲೆಯಲ್ಲಿ ಬೇಡ ಜಂಗಮ ಜಾತಿ ಪ್ರಮಾಣ ಪತ್ರ ಕೋರಿ 55 ಮಂದಿ ಅರ್ಜಿ ಸಲ್ಲಿಸಿದ್ದು, ಇದರಲ್ಲಿ 20 ಅರ್ಜಿಗಳನ್ನು ಅನುಮೋದಿಸಲಾಗಿದೆ. 35 ಅರ್ಜಿಗಳು ತಿರಸ್ಕೃತವಾಗಿವೆ. ಬುಡ್ಗ ಜಂಗಮ ಜಾತಿ ಪ್ರಮಾಣ ಪತ್ರ ಕೋರಿ 3,968 ಮಂದಿ ಅರ್ಜಿ ಸಲ್ಲಿಸಿದ್ದು 2,937 ಅರ್ಜಿಗಳನ್ನು ಅನುಮೋದಿಸಲಾಗಿದೆ. 1,030 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.


ಉದಯವಾಹಿನಿ ಚಿತ್ರ

**ಜಿಲ್ಲೆಯ ಶೇ. 94ರಷ್ಟು ಪರಿಶಿಷ್ಟರು ಭಾಗಿ**

**ಸಂಖ್ಯಾಬಲದ ಲೆಕ್ಕಾಚಾರ**

**ಸಮೀಕ್ಷೆ ಬೆನ್ನಲ್ಲೇ ಜಿಲ್ಲೆಯಲ್ಲಿ ಎಡ (ಮಾದಿಗ ಸಂಬಂಧಿತ ಜಾತಿಗಳು), ಬಲ (ಹೊಲೆಯ ಸಂಬಂಧಿತ ಜಾತಿಗಳು) ಸಮುದಾಯಗಳಲ್ಲಿ ಯಾರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂಬ ಸಂಖ್ಯಾಬಲದ ಚರ್ಚೆ ಶುರು. ಜಿಲ್ಲೆಯಲ್ಲಿ ಮಾದಿಗ ಸಮುದಾಯದ ಜನಸಂಖ್ಯೆ ಹೆಚ್ಚಿದೆ ಎನ್ನುವ ಮಾತುಗಳು ಸಹ ಕೇಳಿ ಬರುತ್ತಿವೆ.**

**ನಗರ ಪ್ರದೇಶದಲ್ಲಿಯೇ ಹೆಚ್ಚು**

**ಜಿಲ್ಲೆಯ ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಹೆಚ್ಚಿದೆ. ಜಿಲ್ಲೆಯಲ್ಲಿ ಶೇ 45.10ರಷ್ಟು ಪರಿಶಿಷ್ಟ ಜಾತಿ ಜನರು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಶೇ 44.79ರಷ್ಟು ಪರಿಶಿಷ್ಟ ಕುಟುಂಬಗಳು ನಗರದಲ್ಲಿವೆ. ಈ ಮೂಲಕ ರಾಜ್ಯದಲ್ಲಿ ನಾಲ್ಕನೇ ಸ್ಥಾನವನ್ನು ಚಿಕ್ಕಬಳ್ಳಾಪುರ ಹೊಂದಿದೆ. ರಾಮನಗರ, ಧಾರವಾಡ ಮತ್ತು ತುಮಕೂರು ಕ್ರಮವಾಗಿ ಮೊದಲ ಎರಡನೇ ಮತ್ತು ಮೂರನೇ ಸ್ಥಾನವನ್ನು ಹೊಂದಿದೆ. ನಗರ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.30ಕ್ಕಿಂತ ಹೆಚ್ಚು ಪರಿಶಿಷ್ಟರ ಜನಸಂಖ್ಯೆಯನ್ನು ಈ ಜಿಲ್ಲೆಗಳು ಹೊಂದಿವೆ.**

## ಮಿನಿ ನ್ಯೂಸ್

### ಹುಡುಗಿಯನ್ನು ಚುಡಾಯಿಸಿದಕ್ಕೆ ಧಮ್ಕಿ ಹಾಕಿದ್ದವನ ಕೊಲೆ ಕೇಸ್ ಐವರು ಅರೆಸ್ಟ್

• ಉದಯವಾಹಿನಿ, ಕೋಲಾರ

2 ವರ್ಷದ ಹಿಂದೆ ಹುಡುಗಿಯನ್ನು ಚುಡಾಯಿಸಿದಕ್ಕೆ ಧಮ್ಕಿಹಾಕಿದ್ದವನ ಯುವಕನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ ಆರೋಪಿಗಳನ್ನ ಬಂಧಿಸುವಲ್ಲಿ ಕೋಲಾರದ ಮಾಸ್ತಿ ಪೊಲೀಸರು ಯಶಸ್ವಿಯಾಗಿದ್ದಾರೆ. ಗೋವಿಂದರಾಜು, ಆತನ ನಾಲ್ವರು ಸಹಚರರು ಬಂಧಿತ ಆರೋಪಿಗಳು. ಮಾಲೂರು ತಾಲ್ಲೂಕು ಕೊಮ್ಮನಹಳ್ಳಿಯ ಬಾರ್ ಬಳಿ ಕಬಾಬ್ ವಿಚಾರವಾಗಿ ಆರೋಪಿಗಳು ಟೇಕಲ್ ಮೂಲದ ರಾಕೇಶ್, ಕಾರ್ತಿಕ್ ಜೊತೆ ಗಲಾಟೆ ಮಾಡಿದ್ದರು.

ಕುಡಿದ ಮತ್ತಿನಲ್ಲಿ ಗಲಾಟೆ ತೆಗೆದಿದ್ದ ಆರೋಪಿಗಳು ರಾಕೇಶ್‌ನನ್ನು ಕೊಲೆ ಮಾಡಿ, ಕಾರ್ತಿಕ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಮಾಡಿ ಪರಾರಿಯಾಗಿದ್ದರು. ಇದೀಗ ಹಳೆ ವೈಷಮ್ಯದ ಹಿನ್ನೆಲೆ ಕೊಲೆಮಾಡಿದ್ದ ಐವರು ಆರೋಪಿಗಳನ್ನು ಮಾಸ್ತಿ ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇನ್ನೂ ರಾಕೇಶ್, ಕಾರ್ತಿಕ್ ನನ್ನ ಅಟ್ಟಾಡಿಸಿ ಕೊಲೆ ಮಾಡುವ ದೃಶ್ಯಗಳು ಹೊಟೇಲ್‌ನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

### ಮಾಲೂರು ಪುರಸಭೆ ನಗರಸಭೆಯನ್ನಾಗಿ ಘೋಷಣೆ

• ಉದಯವಾಹಿನಿ, ಮಾಲೂರು

ಮಾಲೂರು ನಗರಸಭೆಯ ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡದೆ ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದು ಶಾಸಕ ಕೆವೈ.ನಂಜೇಗೌಡ ತಿಳಿಸಿದರು. ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಘೋಷಣೆ ಮಾಡಿದ್ದು, ಪುರಸಭೆ ಕಚೇರಿ ಮುಂಭಾಗದಲ್ಲಿ ನಗರಸಭೆ ನಾಮಫಲಕ ಹಾಕುವ, ಪುರಸಭೆ ಮಾಜಿ ಅಧ್ಯಕ್ಷರಿಗೆ ಅಭಿನಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಲ್ಲಿನ ಪುರಸಭೆ 1935ರಲ್ಲಿ ಆರಂಭವಾಗಿದ್ದು, ಇಲ್ಲಿಯವರೆಗೆ ಸುಮಾರು 42 ಮಂದಿ ಪುರಸಭೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಹಕಾರದಿಂದ ಮಾಲೂರು ಪುರಸಭೆಯನ್ನು ನಗರಸಭೆಯನ್ನಾಗಿ ಸರ್ಕಾರ ಘೋಷಣೆ ಮಾಡಲು ಅನುಕೂಲವಾಯಿತು ಎಂದು ತಿಳಿಸಿದರು.

ಮಾಲೂರು ನಗರವನ್ನು ವೈಜ್ಞಾನಿಕವಾಗಿ ಉತ್ತಮ ನಗರವನ್ನಾಗಿ ಮಾಡಲು ಡಿಪಿಆರ್ ಮಾಡಿಸಲಾಗುವುದು. ಈಗಾಗಲೇ ಕುಡಿಯುವ ನೀರು ಸರಬರಾಜು ಮಾಡಲು ಡಿಪಿಆರ್ ಮಾಡಿಸಲಾಗಿದೆ.

ಇದರಂದ ಪೈಪ್‌ಲೈನ್ ಮೂಲಕ ಪ್ರತಿ ಮನೆಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು. ಅದೇ ರೀತಿ ಯುಜಿಡಿ ನಿರ್ಮಾಣ ಮಾಡಲು ಡಿಪಿಆರ್ ಸಿದ್ಧಗೊಳಿಸಲು ಸೂಚಿಸಲಾಗಿದೆ. ಪಟ್ಟಣದಲ್ಲಿ ಎಲ್ಲಾ ವಾರ್ಡ್‌ಗಳ 24 ಕಿ.ಮೀ. ರಸ್ತೆ ಅಭಿವೃದ್ಧಿಗೊಳಿಸಲು ತಿರ್ಮಾನಿಸಲಾಗಿದೆ.

### ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ

• ಉದಯವಾಹಿನಿ, ನಂಜನಗೂಡು

ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸ್ಥಾನ ನೀಡಬೇಕು ಎಂದು ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಕರಳಪುರ ನಾಗರಾಜು ಒತ್ತಾಯಿಸಿದ್ದಾರೆ. ರಾಜ್ಯ ಸಚಿವ ಸಂಪುಟದಲ್ಲಿ ಎರಡು ಸ್ಥಾನಗಳು ಖಾಲಿ ಇದ್ದು, ಇದೀಗ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು ಎಂದು ಕೋರಿದ್ದಾರೆ.

ಪುಟ್ಟರಂಗಶೆಟ್ಟಿ ಓರ್ವ ನಿಷ್ಠಾವಂತ ರಾಜಕಾರಣಿ. ಸತತವಾಗಿ 4ನೇ ಬಾರಿ ಚುನಾಯಿತರಾಗಿದ್ದಾರೆ. ಈ ಹಿಂದೆ ಮಹಾದೇವ ಪ್ರಸಾದ್ ಹೊರತುಪಡಿಸಿದರೆ, ಚಾಮರಾಜಗರ ಜಿಲ್ಲೆಯ ಯಾರಿಗೂ ಮಂತ್ರಿ ಸ್ಥಾನ ಲಭಿಸಿಲ್ಲ ಎಂದು ತಿಳಿಸಿದ್ದಾರೆ.

### ಜಾಥಕ್ಕೆ ಅನುಮತಿ ನಿರಾಕರಣೆ ಎಬಿವಿಪಿ ಕಾರ್ಯಕರ್ತರ ಆಕ್ರೋಶ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ನಗರದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಡ್ರಗ್ಸ್ ವಿರುದ್ಧ ಮಂಗಳವಾರ ಗನ್ ಹೌಸ್ ವೃತ್ತದಲ್ಲಿ ಆಯೋಜಿಸಿದ್ದ ಜಾಗೃತಿ ಜಾಥಾಕ್ಕೆ ಅವಕಾಶ ನೀಡದ ಪೊಲೀಸರ ಕ್ರಮವನ್ನು ಖಂಡಿಸಿ ಪ್ರತಿಭಟಿಸಿದರು. ಸಂಘಟನೆಯು ಆಯೋಜಿಸಿದ್ದ ಜಾಗೃತಿ ಜಾಥಾಕ್ಕೆ ಮಂಗಳೂರು, ಪುತ್ತೂರು, ಮಡಿಕೇರಿ, ಹಾಸನ ಭಾಗದ ಕಾರ್ಯಕರ್ತರೂ ಆಗಮಿಸಿದ್ದರು. ಜಾಥಾಕ್ಕರ ಅವಕಾಶ ಸಿಗದಿದ್ದಾಗ ಗನ್ ಹೌಸ್ ವೃತ್ತದ ಬಸವಣ್ಣ ಪ್ರತಿಮೆ ಬಳಿ ರಸ್ತೆಯಲ್ಲಿ ಪ್ರತಿಭಟನೆಗೆ ಅವಕಾಶ ನೀಡಿದ್ದರು. ಪ್ರತಿಭಟನಾಕಾರರು ಮಾತನಾಡುತ್ತಿದ್ದ ಸಮಯದಲ್ಲಿ ಮತ್ತೊಂದು ರಸ್ತೆಯಿಂದಾಗಿ ಬಂದ ಎಬಿವಿಪಿ ಕಾರ್ಯಕರ್ತರ ಗುಂಪು ಜಾಥಾ ನಡೆಸಲು ಮುಂದಾಯಿತು. ಪೊಲೀಸರು ತಡೆದಾಗ ಮಾತಿನ ಚಕಮಕಿ ನಡೆಯಿತು. ಪೊಲೀಸರ ಕ್ರಮವನ್ನು ಖಂಡಿಸಿ, ಗೃಹಮಂತ್ರಿ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಘೋಷಣೆ ಕೂಗಿದರು.

### ಎರಡು ಹುಲಿ ಮರಿಗಳು ಸಾವು, ಪ್ರಾಣಿ ಪ್ರಿಯರಲ್ಲಿ ಆಘಾತ

• ಉದಯವಾಹಿನಿ, ಹನೂರು



ತಾಲ್ಲೂಕಿನ ಕಾವೇರಿ ವನ್ಯಧಾಮದ ಶಾಗ್ಯ ಗಸ್ತಿನ ಹೊಳೆ ವ್ಯಾಪ್ತಿಯ ಮುರದಟ್ಟಿಯ ಕಿರುಬನಕಲ್ಲು ಗುಡ್ಡದಲ್ಲಿ ಎರಡು ಹುಲಿ ಮರಿಗಳು ಮೃತಪಟ್ಟಿವೆ. ಸಿಬ್ಬಂದಿ ಗಸ್ತು ತಿರುಗುವಾಗ ಗಂಡು ಹುಲಿಮರಿ ಕಳೇಬರ ಸಿಕ್ಕಿದೆ. ಮಂಗಳವಾರ ಬೆಳಿಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು, ಪಶು ವೈದ್ಯಾಧಿಕಾರಿಗಳ ತಂಡ ಹುಲಿಮರಿ ಮೃತಪಟ್ಟ ಜಾಗದ ಆಸುಪಾಸಿನಲ್ಲಿ ಕೂಂಬಿಂಗ್ ನಡೆಸಿದಾಗ 50 ಮೀಟರ್ ದೂರದ ಗುಹೆಯೊಂದರ ಬಳಿ ಮತ್ತೊಂದು ಹೆಣ್ಣು ಹುಲಿ ಮರಿಯ ಕಳೇಬರ ದೊರೆತಿದೆ.

ಮರಿಗಳು ಜನಿಸಿ 15 ದಿನಗಳಾಗಿದ್ದು, ತಾಯಿ ಹುಲಿಯಿಂದ ಬೇರ್ಪಟ್ಟ ಬಳಿಕ ಹಸಿವಿನಿಂದ ಬಳಲಿ ಮೃತಪಟ್ಟಿರುವುದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿದು ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೂನ್ 26ರಂದು ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವನ್ಯಜೀವಿ ವಲಯದ ಮೀಣ್ಯಂ ಬಳಿ ಐದು ಹುಲಿಗಳು ವಿಷಪ್ರಾಷನದಿಂದ ಮೃತಪಟ್ಟಿದ್ದವು. ಇದೀಗ ಮತ್ತೆರಡು ಹುಲಿ ಮರಿಗಳು ಸಾವನ್ನಪ್ಪಿದ್ದು ಪ್ರಾಣಿಪ್ರಿಯರು ಆಘಾತ ವ್ಯಕ್ತಪಡಿಸಿದ್ದಾರೆ.

ಅಂತರಾಳದಿಂದ..
EDITORIAL

# ನಮ್ಮ ಮೆಟ್ರೊಗೆ ಹಳದಿ ಬಲ: ಪ್ರಯಾಣಿಕರ ಹಿತಚಿಂತನೆ ಅಗತ್ಯ

ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಹಸಿರು, ನೇರಳೆ ಮಾರ್ಗಗಳೊಂದಿಗೆ ಹಳದಿ ಮಾರ್ಗದ ಸೇರ್ಪಡೆಯೊಂದಿಗೆ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಆಶಾಕಿರಣದಂತಿರುವ ನಮ್ಮ ಮೆಟ್ರೊ ಮತ್ತಷ್ಟು ಬಲಗೊಂಡಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಹೃದಯ ಭಾಗವಾಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. 2017ರಲ್ಲಿ ಆರಂಭವಾದ ಈ ಮಾರ್ಗದ ನಿರ್ಮಾಣ 2021ರಲ್ಲಿಯೇ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಭೂಸ್ವಾಧೀನಕ್ಕೆ ಸಂಬಂಧಿಸಿದ ಸಮಸ್ಯೆಗಳು, ಕೊರೋನಾ ಸಾಂಕ್ರಾಮಿಕ ಸೇರಿದಂತೆ ವಿವಿಧ ಕಾರಣಗಳಿಂದಾಗಿ ನಿರ್ಮಾಣ ಕಾರ್ಯ ಸಾಕಷ್ಟು ವಿಳಂಬವಾಯಿತು. ಕೊನೆಗೂ, ಸ್ವಾತಂತ್ರ್ಯ ದಿನಾಚರಣೆಯ ತಿಂಗಳಲ್ಲಿ ಹಳದಿ ಮಾರ್ಗಕ್ಕೂ ಸ್ವಾತಂತ್ರ್ಯ ದೊರೆತಿದೆ. 19.15 ಕಿ.ಮೀ. ಉದ್ದದ ಹಳದಿ ಮಾರ್ಗದ ಕಾರ್ಯಾಚರಣೆ ತಡವಾಗಿಯಾದರೂ ಆರಂಭವಾಗಿರುವುದು, ಸಾವಿರಾರು ಪ್ರಯಾಣಿಕರ ದೈನಿಕವನ್ನು ಸ್ವಲ್ಪ ಮಟ್ಟಿಗಾದರೂ ಸಹನೀಯಗೊಳಿಸಲಿದೆ. ಇದರೊಂದಿಗೆ, ಇದುವರೆಗೆ 76.97 ಕಿ.ಮೀ. ಇದ್ದ ನಮ್ಮ ಮೆಟ್ರೊ ಜಾಲ, 96 ಕಿ.ಮೀ.ಗೆ ವಿಸ್ತರಣೆಗೊಂಡಂತಾಗಿದೆ. ಹಳದಿ ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರ ಆರಂಭಗೊಂಡಿದ್ದರೂ, ಪೂರ್ಣ ಪ್ರಮಾಣದ ಕಾರ್ಯಾಚರಣೆಗಾಗಿ 2026ರ ಮಾರ್ಚ್‌ವರೆಗೂ ಕಾಯಬೇಕಾಗಿದೆ. ಹೊಸ ಮಾರ್ಗದಲ್ಲಿ ಸಂಚಾರಕ್ಕಾಗಿ 15 ರೈಲುಗಳು ಬೇಕಾಗಿದ್ದು, ಸದ್ಯಕ್ಕೆ 3 ರೈಲುಗಳಷ್ಟೇ ಲಭ್ಯವಿವೆ. ಪ್ರಸ್ತುತ, ಪ್ರತಿ ದಿನ 25ರಿಂದ 40 ಸಾವಿರ ಪ್ರಯಾಣಿಕರು ಸಂಚರಿಸುವ ನಿರೀಕ್ಷೆಯಿದ್ದು, ಪೂರ್ಣ ಪ್ರಮಾಣದ ಕಾರ್ಯಾಚರಣೆ ಶುರುವಾದ ನಂತರ ಲಕ್ಷಾಂತರ ನಾಗರಿಕರು ಹಳದಿ ಮಾರ್ಗದ ಪ್ರಯೋಜನ ಪಡೆಯುವ ಸಾಧ್ಯತೆಯಿದೆ. ತಂತ್ರಜ್ಞಾನದ ದೃಷ್ಟಿಯಿಂದಲೂ ಹಳದಿ ಮಾರ್ಗ ವಿಶಿಷ್ಟವಾದುದು. ಪ್ರಸ್ತುತ ಪೂರ್ಣ ಪ್ರಮಾಣದ ಕಾರ್ಯಾಚರಣೆ ನಡೆಸುತ್ತಿರುವ ಹಸಿರು ಮತ್ತು ನೇರಳೆ ಮಾರ್ಗಗಳಲ್ಲಿ ಚಾಲಕಸಹಿತ ರೈಲುಗಳು ಸಂಚರಿಸುತ್ತಿವೆ. ಹಳದಿ ಮಾರ್ಗದಲ್ಲಿ ಚಾಲಕರಹಿತ ರೈಲು ಸಂಚರಿಸುವ, ಸಂವಹನ ಆಧಾರಿತ ರೈಲು ನಿಯಂತ್ರಣ ತಂತ್ರಜ್ಞಾನ ಲಭ್ಯವಿದೆ. ಆರಂಭದಲ್ಲಿ ಚಾಲಕ ಸಹಿತ ರೈಲುಗಳು ಸಂಚರಿಸಲಿದ್ದು, ಮುಂದಿನ ದಿನಗಳಲ್ಲಿ ಚಾಲಕರಹಿತ ರೈಲುಗಳು ಹಳದಿ ಮಾರ್ಗದಲ್ಲಿ ಸಂಚರಿಸಲಿವೆ. ಮುಖ್ಯಮಂತ್ರಿ ಅವರ ಮಾತಿನಂತೆ ಮೆಟ್ರೊ ಯೋಜನೆಯ ಯಶಸ್ಸಿನ ಕೀರ್ತಿಯ ಅಗ್ರಪಾಲು ರಾಜ್ಯ ಸರ್ಕಾರಕ್ಕೆ ನ್ಯಾಯಯುತವಾಗಿ ಸಲ್ಲುವುದೆಂದು ಒಪ್ಪಿಕೊಳ್ಳುತ್ತಲೇ, ಮೆಟ್ರೊ ಸೇವೆಗಳನ್ನು ಜನರಿಗೆ ಒದಗಿಸುವ ನಿಟ್ಟಿನಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನೂ ನೆನಪಿಸಬೇಕಾಗಿದೆ.



**ಹಳದಿ ಮಾರ್ಗದ ಉದ್ಘಾಟನೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಟ್ರೊ ಯೋಜನೆಯಲ್ಲಿ ರಾಜ್ಯದ ಹಕ್ಕಿನ ಪ್ರಸ್ತಾಪ ಮಾಡಿದ್ದಾರೆ; ಆ ಪ್ರಸ್ತಾಪ ಸರಿಯಾಗಿಯೂ ಇದೆ. ನಮ್ಮ ಮೆಟ್ರೊದ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಈವರೆಗೆ ರೂ.25,379 ಕೋಟಿ ಭರಿಸಿದ್ದರೆ, ಕೇಂದ್ರ ಸರ್ಕಾರ ವೆಚ್ಚ ಮಾಡಿರುವುದು ರೂ.7,468.86 ಕೋಟಿ ಮಾತ್ರ. ಹಾಗಾಗಿ, ಸಹಜವಾಗಿಯೇ ನಮ್ಮ ಮೆಟ್ರೊದ ಯಶಸ್ಸಿನ ಮುಖ್ಯ ಪಾಲು ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಆದರೆ, ಈವರೆಗೆ ಮೆಟ್ರೊ ಯೋಜನೆಗಳ ಅನುಷ್ಠಾನದಲ್ಲಿ ತಮ್ಮ ಪಾತ್ರವೇ ಮುಖ್ಯವಾದುದೆಂದು ಸಾಬೀತುಪಡಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಆಗಾಗ ಸ್ಪರ್ಧೆ ನಡೆದಿದೆ. ಈಗ ಪ್ರಧಾನಿ ಅವರ ಸಮ್ಮುಖದಲ್ಲೇ ಮೆಟ್ರೊ ಯೋಜನೆ ಸಾಕಾರಗೊಳ್ಳುವಲ್ಲಿ ರಾಜ್ಯದ ಪಾಲು ಮಹತ್ವದ್ದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.**

ಕಳೆದ ಫೆಬ್ರುವರಿಯಲ್ಲಿ ಮೆಟ್ರೊ ಪ್ರಯಾಣ ದರ ಒಮ್ಮಿಂದೊಮ್ಮೆಗೇ ದುಬಾರಿಯಾದಾಗ, ಸಾರ್ವಜನಿಕ ಪ್ರತಿರೋಧ ದೊಡ್ಡ ಮಟ್ಟದಲ್ಲಿ ಎದುರಾಗಿತ್ತು. ಪ್ರಯಾಣ ದರ ಏರಿಕೆಯ ಜವಾಬ್ದಾರಿಯನ್ನು ರಾಜ್ಯ ಕೇಂದ್ರ ಸರ್ಕಾರಗಳು ಪರಸ್ಪರ ವರ್ಗಾಯಿಸುವ ಮೂಲಕ ಪ್ರಯಾಣಿಕರ ಹಿತ ನಿರ್ಲಕ್ಷ್ಯಕ್ಕೊಳಗಾಗಿತ್ತು. ಪ್ರಯಾಣಿಕರ ಹಿತಾಸಕ್ತಿ ಕಾಪಾಡುವ ಹೊಣೆಗಾರಿಕೆಯ ಬಗ್ಗೆ ಜಾಣತನ ಪ್ರದರ್ಶಿಸಿದ್ದ ರಾಜ್ಯ ಸರ್ಕಾರ, ಈಗ ಹಕ್ಕಿನ ಬಗ್ಗೆ ಮಾತನಾಡುತ್ತಿದೆ. ಮೆಟ್ರೊದ ಹೊಸ ಮಾರ್ಗಗಳನ್ನು ಆರಂಭಿಸಿದ ಮಾತ್ರಕ್ಕೆ ಜನಪರ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ಮೆಟ್ರೊ ಪ್ರಯಾಣ ದರ ಜನಸಾಮಾನ್ಯರಿಗೆ ಭಾರವೆನ್ನಿಸದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಪ್ರಯಾಣ ದರ ದುಬಾರಿಯೆನ್ನಿಸಿ, ದೊಡ್ಡ ಸಂಖ್ಯೆಯ ಪ್ರಯಾಣಿಕರು ಮೆಟ್ರೊದಿಂದ ದೂರವೇ ಉಳಿಯುವಂತಾದರೆ, ಸಾರ್ವಜನಿಕ ಸಾರಿಗೆಯ ಉದ್ದೇಶವೇ ಹಾಳಾಗುತ್ತದೆ. ಮೆಟ್ರೊ ಯೋಜನೆಗಳನ್ನು ಲಾಭದ ದೃಷ್ಟಿಯಿಂದ ನೋಡದೆ, ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಸರ್ಕಾರ ನೋಡಬೇಕಾಗಿದೆ.

---

☛ ವಿಶ್ವಾಸ್.ಡಿ.ಗೌಡ




# ಶ್ರದ್ಧೆ, ಭಕ್ತಿಯಿಂದ ಅರಿವಿನ ಬೆಳಕು

ಒಬ್ಬ ಗುರು ತನ್ನ ಬಳಿಗೆ ವಿದ್ಯಾಭ್ಯಾಸ ಮಾಡಲು ಬರುವ ಶಿಷ್ಯರನ್ನು ಒಂದು ವರ್ಷಕ್ಕಿಂತ ಹೆಚ್ಚು ಕಾಲ ತನ್ನ ಆಶ್ರಮದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ತನ್ನ ಬಳಿ ಇದ್ದ ಹತ್ತು ಜನ ಶಿಷ್ಯರಲ್ಲಿ ಕುಶ ಎನ್ನುವವನಿಗೆ ಹೆಚ್ಚು ಕಾಲ ಪಾಠಗಳನ್ನು ಬೋಧಿಸುತ್ತಿದ್ದರು. ಇದರಿಂದ ಆ ವರ್ಷ ವಿದ್ಯಾಭ್ಯಾಸ ಮಾಡಲು ಬಂದ ಉಳಿದ ಶಿಷ್ಯರಿಗೆ ಕುಶನ ಬಗ್ಗೆ ಹೊಟ್ಟೆ ಕಿಚ್ಚುಂಟಾಯಿತು.

ವರ್ಷವು ಮುಗಿಯುತ್ತಿದ್ದಂತೆ ಕಡೆಯ ದಿವಸ ಹತ್ತೂ ಜನರನ್ನು ಕರೆದು ಅವರ ಮುಂದೆ ಹತ್ತು ಬೀಜಗಳನ್ನು ಇರಿಸಿ ತಲಾ ಒಂದೊಂದು ಬೀಜಗಳನ್ನು ತೆಗೆದುಕೊಳ್ಳುವಂತೆ ಆ ಗುರು ತನ್ನ ಶಿಷ್ಯರಿಗೆ ಹೇಳಿದರು. ಆಮೇಲೆ ನೀವೆಲ್ಲರೂ ನಿಮ್ಮ ನಿಮ್ಮ ಮನೆಗಳಿಗೆ ಹಿಂದಿರುಗಿ ಈ ಬೀಜಗಳನ್ನು ನಾಟಿ ಮಾಡಿ. ಒಂದು ಬೀಜದಿಂದ ಮಾತ್ರವೇ ನೀಲಿ ಬಣ್ಣದ ಹೂವು ಬಿಡುತ್ತದೆ, ಯಾರ ಮನೆಯಲ್ಲಿ ಆ ನೀಲಿ ಬಣ್ಣದ ಹೂವು ಬಿಡುತ್ತದೆಯೋ ಅವರು ಆ ಹೂವನ್ನು ತಂದು ನನಗೆ ಗುರುದಕ್ಷಿಣೆಯಾಗಿ ಕೊಡಬೇಕು. ಅಂತಹವರಿಗೆ ನಾನು ಹೇಳಿಕೊಟ್ಟ ವಿದ್ಯೆ ಚಿರಕಾಲ ನೆನಪಿರುತ್ತದೆ ಎಂದು ಹೇಳಿದರು. ಉಳಿದವರು ನಿರಂತರವಾಗಿ ಅಧ್ಯಯನ ಮಾಡುತ್ತಿದ್ದರಷ್ಟೇ ನಾನು ಹೇಳಿದ ವಿಷಯಗಳು ಜ್ಞಾಪಕದಲ್ಲಿರುತ್ತವೆ ಎಂದು ಹೇಳಿದರು.

ಹೀಗೆ ಹೂವೊಂದನ್ನು ಗುರುದಕ್ಷಿಣೆಯಾಗಿ ತೆಗೆದುಕೊಳ್ಳುವುದು ವಿಚಿತ್ರವಾಗಿದೆ, ಅದೇಕೆ ಹಾಗೆ ಗುರುಗಳೇ ಎಂದು ಶಿಷ್ಯನೊಬ್ಬ ಪ್ರಶ್ನಿಸಿದ. ಅದಕ್ಕೆ ಗುರುಗಳು, ಆ ಹೂವನ್ನು ಜಗಿದು ತಿಂದರೆ ಮಳೆಗಳು ಯಾವಾಗ ಬೀಳುತ್ತವೆ ಎಂದು ಒಂದು ತಿಂಗಳ ಮುಂಚೆಯೇ ಗೊತ್ತಾಗುವ ಜ್ಞಾನವು ಉಂಟಾಗುತ್ತದೆ ಎಂದು ಹೇಳಿದರು.

ಎಲ್ಲಾ ಶಿಷ್ಯರೂ ಗುರುಗಳಿಂದ ಬೀಳ್ಕೊಂಡು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು.



ಗಣನಾಥನೆನ್ನುವ ಶಿಷ್ಯನ ಹಿತ್ತಲಿನಲ್ಲಿ ನಾಟಿ ಮಾಡಿದ ಬೀಜವು ಮೊಳಕೆಯೊಡೆದು ಅದರಿಂದ ಹೊರಟ ಬಳ್ಳಿಯಿಂದ ನೀಲಿ ಬಣ್ಣದ ಹೂವು ಬಿಟ್ಟಿತು. ಅವನು ಸಂತೋಷದಿಂದ ಅದನ್ನು ಕೊಯ್ದನು.

ಅದನ್ನು ಗುರುದಕ್ಷಿಣೆಯಾಗಿ ಗುರುಗಳಿಗೆ ಸಮರ್ಪಿಸಬೇಕು. ಆದರೆ ತನ್ನ ಗುರುಗಳು ಕುಶನ ವಿಷಯದಲ್ಲಿ ಬೇಧಭಾವ ತೋರಿಸಿ ಅವನಿಗೆ ಹೆಚ್ಚಿನ ವಿದ್ಯೆಯನ್ನು ಕಲಿಸಿಕೊಟ್ಟರು ಎಂದು ಗುರುಗಳ ಮೇಲಿನ ಕೋಪದಿಂದ ತಾನೇ ಅದನ್ನು ಜಗಿದು ತಿಂದನು.

ತಕ್ಷಣವೇ ಗಣನಾಥನಿಗೆ ಮಳೆಗಳ ಕುರಿತಾದ ಜ್ಞಾನವು ಉಂಟಾಯಿತು. ಇದರಿಂದ ಅವನು ತನ್ನ ಗ್ರಾಮದಲ್ಲಷ್ಟೇ ಅಲ್ಲ ಪಕ್ಕದ ಗ್ರಾಮದಲ್ಲಿಯೂ ಸಹ ಮಳೆಗಳು ಯಾವಾಗ ಬೀಳುತ್ತವೆ ಎನ್ನುವುದನ್ನು ಹೇಳತೊಡಗಿದ. ಹೀಗಿರುವಾಗ ಮುಂದಿನ ವರ್ಷ ಆ ಪ್ರಾಂತದಲ್ಲಿ ಬರಗಾಲ ಬಂದಿತು. ಎರಡು ವರ್ಷಗಳ ಕಾಲ ಮಳೆಗಳೇ ಬೀಳುವುದಿಲ್ಲ ಎಂದು ಗಣನಾಥನು ಹೇಳಿದ. ಅದೇ ಸಮಯದಲ್ಲಿ ಪಕ್ಕದೂರಿನವನೊಬ್ಬನು ಗಣನಾಥನಿದ್ದ ಊರಿಗೆ ಬಂದು, ನಮ್ಮ ಊರಿಗೆ ಮಹಾತ್ಮನೊಬ್ಬ ಬಂದು ಎರಡು ದಿನಗಳಲ್ಲಿ ಮಳೆಯಾಗುತ್ತದೆ ಎಂದು ಹೇಳಿದ ನಂತರ ಅದೇ ವಿಧವಾಗಿ ಮಳೆಯಾಯಿತು. ಆದ್ದರಿಂದ ನೀವೂ ಸಹ ಅವನನ್ನು ನಿಮ್ಮೂರಿಗೆ ಆಹ್ವಾನಿಸಿ ಕರೆತಂದಲ್ಲಿ ನಿಮ್ಮ ಊರಿನಲ್ಲೂ ಮಳೆಯಾಗುತ್ತದೆ ಎಂದು ಹೇಳಿದ.

ಪಕ್ಕದೂರಿನವನ ಮಾತಿನಂತೆ ಆ ಊರಿನ ಗ್ರಾಮಾಧಿಕಾರಿ ಆ ಮಹಾತ್ಮನನ್ನು ತಮ್ಮ ಊರಿಗೆ ಬರಮಾಡಿಕೊಂಡ. ಅವನು ಬಂದು ನಾಡಿದ್ದು ಮಳೆಯಾಗುತ್ತದೆ ಎಂದು ಹೇಳಿದ ನಂತರ ಅದರ ಪ್ರಕಾರವೇ ಈ ಊರಿನಲ್ಲಿಯೂ ಮಳೆಯಾಯಿತು. ಹಾಗೆ ಬಂದ ಮಹಾತ್ಮ ಯಾರೆಂದು ನೋಡಿದರೆ ಅವನೇ ಕುಶ. ಅವನನ್ನು ಭೇಟಿಯಾದ ಗಣನಾಥನು ಗುರುಗಳು ಏನೋ ತಂತ್ರ ಹೂಡಿದ್ದಾರೆಂದು ಅವನಿಗೆ ಹೇಳಿದನು. ಅದಕ್ಕೆ ಕುಶನು, ಇದರಲ್ಲಿ ಗುರುಗಳ ತಪ್ಪೇನೂ ಇಲ್ಲ. ಅವರು ಪ್ರತಿಯೊಬ್ಬರಿಗೂ ನೀಲಿ ಬಣ್ಣದ ಹೂವು ಬಿಡುವ ಬೀಜಗಳನ್ನೇ ಕೊಟ್ಟಿದ್ದರು. ಆದರೆ ನನ್ನ ಹೊರತು ನೀವಾರೂ ಗುರುಗಳಿಗೆ ಹೂವು ತೆಗೆದುಕೊಂಡು ಗುರುದಕ್ಷಿಣೆಯನ್ನು ಕೊಡಲು ಹಿಂದಿರುಗಿ ಹೋಗಲಿಲ್ಲ. ನಾನು ಹೂವನ್ನು ಅವರಿಗೆ ಅರ್ಪಿಸಲು ಹೋದಾಗ ಅವರು ಅಕಾಲ ಮಳೆಯನ್ನು ಸುರಿಸುವ ಶಕ್ತಿಯನ್ನು ನನಗೆ ಹೆಚ್ಚುವರಿಯಾಗಿ ಪ್ರಸಾದಿಸಿದರು ಎಂದು ಹೇಳಿದ. ಅದನ್ನು ಕೇಳಿದ ಗಣನಾಥನಿಗೆ ಭಕ್ತಿ ಮತ್ತು ಅರ್ಹತೆಗಳನ್ನು ಅವಲಂಬಿಸಿ ಜ್ಞಾನವು ಲಭಿಸುತ್ತದೆ ಎನ್ನುವ ಸತ್ಯವು ತಿಳಿಯಿತು.

---

# ಕರ್ನಾಟಕ ರಾಜ್ಯ ಶಿಕ್ಷಣ ನೀತಿಯಲ್ಲಿ ಮುಸ್ಲಿಮರ ಓಲೈಕೆ

■ ಶ್ರೀ. ಮೋಹನ ಗೌಡ

ಕರ್ನಾಟಕ ಸರ್ಕಾರವು ಇತ್ತೀಚೆಗೆ ಘೋಷಿಸಿರುವ ರಾಜ್ಯ ಶಿಕ್ಷಣ ನೀತಿಯಲ್ಲಿ ಕಡಿಮೆ ಆದಾಯ ಬರುವ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಆರ್ಥಿಕ ಬೆಂಬಲ ನೀಡುವುದು, ಗ್ರಾಮೀಣ ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ನೀಡುವ ಕುರಿತು ಉಲ್ಲೇಖ ಮಾಡಿರುವುದು ಹಿಂದೂ ಸಮಾಜದ ದೃಷ್ಟಿಯಿಂದ ಗಂಭೀರ ವಿಷಯವಾಗಿದೆ. ಸಮಾಜದಲ್ಲಿ ಬಡವರು ಕೇವಲ ಮುಸ್ಲಿಂ ಸಮುದಾಯದಲ್ಲೇ ಇರುವುದಿಲ್ಲ. ಹಿಂದೂ ಸಮಾಜದಲ್ಲಿಯೂ ಅನೇಕ ಬಡ ಕುಟುಂಬಗಳು, ಹಿಂದುಳಿದ ವರ್ಗಗಳು, ಗ್ರಾಮೀಣ ಬಡ ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಹೋರಾಡುತ್ತಿದ್ದಾರೆ. ಆದರೆ ಇವರಿಗೆ ಸಮಾನ ಆರ್ಥಿಕ ಬೆಂಬಲ ನೀಡದೇ ಕೇವಲ ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾತ್ರ ಆದ್ಯತೆ ನೀಡುವುದು ಸ್ಪಷ್ಟವಾದ ಧರ್ಮಪರ ಓಲೈಕೆ ಹಾಗೂ ಮತಬ್ಯಾಂಕ್ ರಾಜಕಾರಣವಾಗಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರರಾದ ಶ್ರೀ. ಮೋಹನ ಗೌಡ ಟೀಕಿಸಿದ್ದಾರೆ.



ಶ್ರೀ. ಮೋಹನ ಗೌಡ ಮುಂದುವರೆಸಿ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ನಿರ್ಲಕ್ಷಿಸಿ, ತನ್ನದೇ ಪ್ರತ್ಯೇಕ ರಾಜ್ಯ ಶಿಕ್ಷಣ ನೀತಿ ರೂಪಿಸುವ ಮೂಲಕ ಮುಸ್ಲಿಂ ಸಮುದಾಯಕ್ಕೆ ಮಾತ್ರ ವಿಶೇಷ ಸೌಲಭ್ಯ ನೀಡುವಂತಾಗಿದೆ. ಇದು ಸಂವಿಧಾನದ ಸಮಾನತೆಯ ಹಕ್ಕು ತತ್ವವನ್ನು ಉಲ್ಲಂಘಿಸುವಂತಿದೆ.

ಹಿಂದೂ ಜನಜಾಗೃತಿ ಸಮಿತಿ ಈ ಭೇದಭಾವ ನೀತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದು, ರಾಜ್ಯ ಸರ್ಕಾರವು ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಧರ್ಮ, ಜಾತಿ, ಪಂಥದ ಭೇದವಿಲ್ಲದೆ ಸಮಾನ ಆರ್ಥಿಕ ಬೆಂಬಲ ನೀಡಬೇಕು, ಒಂದೇ ಸಮುದಾಯದ ಓಲೈಕೆ ಮಾಡುವ ರಾಜ್ಯ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು ಮತ್ತು ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಬೇಕೆಂದು ಆಗ್ರಹಿಸುತ್ತದೆ ಎಂದರು. ಇಲ್ಲದಿದ್ದಲ್ಲಿ ಹಿಂದೂ ಸಮಾಜವು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿ ಈ ಅನ್ಯಾಯದ ವಿರುದ್ಧ ಬೃಹತ್ ಹೋರಾಟ ಹಮ್ಮಿಕೊಳ್ಳಲಿದೆ.

---

# ಶ್ರೀ ರಾಘವೇಂದ್ರ ಸ್ವಾಮಿಗಳ ಮಧ್ಯಾರಾಧನಾ

• ಉದಯವಾಹಿನಿ, ಬೆಂಗಳೂರು

ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಸಂಕಲ್ಪದಂತೆ ಭಕ್ತಾದಿಗಳ ಅಪೇಕ್ಷೆ ಸಹಕಾರದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಧ್ಯಾರಾಧನಾ ಪ್ರಯುಕ್ತ ವಿಶೇಷ ಪಾದಪೂಜೆ, ಕನಕಾಭಿಷೇಕದೊಂದಿಗೆ ಫಲ ಸಮರ್ಪಿಸಿ ಹಾಗೂ ವಿಶೇಷವಾಗಿ ಶ್ರೀ ಗುರು ರಾಯರಿಗೆ ಬಂಗಾರದಿಂದ ನಿರ್ಮಿತವಾದ ನವರತ್ನದ ಶ್ರೀ ಗುರು



ರಾಯರ ವಿಗ್ರಹವನ್ನು ಭಕ್ತಾದಿಗಳ ಅಪೇಕ್ಷೆಯ ಮೇರೆಗೆ ಹಾಗೂ ಸಹಕಾರದಿಂದ ಗುರು ರಾಯರಿಗೆ ಆರ್ ಕೆ ವಾದಿಂದ್ರ ಆಚಾರ್ಯರು ಸಮರ್ಪಿಸಿದರು ತದನಂತರ ನವರತ್ನ ಕವಚದ ಅಲಂಕಾರವನ್ನು ಸಹರಾಯರ ಅರ್ಚಕರು ಬೃಂದಾವನಕ್ಕೆ ವಿಶೇಷವಾಗಿ ಅಲಂಕರಿಸಿದರು ಎಂದು ಶ್ರೀ ನಂದ ಕಿಶೋರಾಚಾರ್ಯರು ತಿಳಿಸಿದರು. ಈ ಸಂದರ್ಭದಲ್ಲಿ ಗುರು ರಾಯರ ದರ್ಶನ ಪಡೆದ 45 ಸಾವಿರಕ್ಕೂ ಹೆಚ್ಚಿನ ಭಕ್ತರು ಅನ್ನ ಸಂತರ್ಪಣೆಯ ಪ್ರಸಾದವನ್ನು ಬೆಳಗ್ಗೆ 11:00 ಗಂಟೆಯಿಂದ ಸಂಜೆ 5:00 ವರೆಗೂ ಪ್ರಸಾದವನ್ನು ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು, ಇದೇ ಸಂದರ್ಭದಲ್ಲಿ ವಿಶೇಷವಾಗಿ ರಾತ್ರಿ 9:00 ಯಿಂದ 10.30 ರವರೆಗೆ ಪಲ್ಲಕ್ಕಿ ಉತ್ಸವ ಗಜವಾಹನೋತ್ಸವ ರಥೋತ್ಸವ ಚಂಡೆ ವಾದನ ದಾಸರ ಹರಿ ಭಜನೆ ಚಿಕ್ಕ ಮಕ್ಕಳಿಂದ ಕೂಡಿಕೊಂಡು ವಯೋ ವೃದ್ಧರವರೆಗೂ ವಯಸ್ಸು ಅಂತರವಿಲ್ಲದೆ ರಾಯರಲ್ಲಿ ಭಕ್ತಿ ಭಾವ ಪರವಶರಾಗಿ ನೃತ್ಯವನ್ನು ಗುರು ರಾಯರಿಗೆ ಸಮರ್ಪಿಸಿ ಮಹಾಮಂಗಳಾರತಿ ಸ್ವೀಕರಿಸಿದರು

---

# ನೀಲಿ ಮಾರ್ಗದ ಮೊದಲ ಹಂತದ ಕಾಮಗಾರಿ ಪೂರ್ಣ

• ಉದಯವಾಹಿನಿ, ಬೆಂಗಳೂರು

ಕೇಂದ್ರ ರೇಷ್ಮೆ ಮಂಡಳಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದ ಮೊದಲ ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರವರೆಗೆ 2026ರ ಸೆ.ಒಳಗೆ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಅತಿ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ದೇಶದ ವಿಮಾನ ನಿಲ್ದಾಣಗಳಲ್ಲಿ ಮೂರನೇ ಸ್ಥಾನದಲ್ಲಿದೆ. 2021–22ರಲ್ಲಿ ಈ ವಿಮಾನ ನಿಲ್ದಾಣದ ಮೂಲಕ 1.63 ಕೋಟಿ ಜನರು ಪ್ರಯಾಣಿಸಿದ್ದರು. ಮೂರೇ ವರ್ಷದಲ್ಲಿ ವಿಮಾನದಲ್ಲಿ ಸಂಚರಿಸುವವರ ಸಂಖ್ಯೆ ಎರಡೂವರೆ ಪಟ್ಟು ಹೆಚ್ಚಾಗಿದೆ. 2024–25ರಲ್ಲಿ 4.2 ಕೋಟಿ ಜನರು ಪ್ರಯಾಣಿಸಿದ್ದಾರೆ. ನಮ್ಮ ಮೆಟ್ರೊ ನೀಲಿ ಮಾರ್ಗ ಪೂರ್ಣಪ್ರಮಾಣದಲ್ಲಿ ಆರಂಭಗೊಂಡರೆ ಶೇ 25ರಷ್ಟು ಜನರು ಮೆಟ್ರೊ ಮೂಲಕವೇ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಸಾಧ್ಯತೆ ಇದೆ.

ಕೇಂದ್ರ ರೇಷ್ಮೆ ಸಂಸ್ಥೆಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಕೆ.ಆರ್.ಪುರದವರೆಗೆ (ಹಂತ 2ಎ) ಮತ್ತು



ಕೆ.ಆರ್. ಪುರದಿಂದ ವಿಮಾನ ನಿಲ್ದಾಣದವರೆಗೆ (ಹಂತ 2ಬಿ) ಎಂದು ನೀಲಿ ಮಾರ್ಗವನ್ನು ಎರಡು ಹಂತವಾಗಿ ವಿಂಗಡಿಸಲಾಗಿತ್ತು. 2021ರ ಆಗಸ್ಟ್‌ನಲ್ಲಿ ಹಂತ 2ಎ ಕಾಮಗಾರಿ ಆರಂಭವಾಗಿತ್ತು. 2022ರ ಫೆಬ್ರುವರಿಯಲ್ಲಿ ಹಂತ 2ಬಿ ಕಾಮಗಾರಿ ಶುರುವಾಗಿತ್ತು. ಹಂತ 2ಎ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ. ಆದರೆ, ಹಂತ 2ಬಿಯ ಕಾಮಗಾರಿ ಕೆ.ಆರ್. ಪುರದಿಂದ ಹೆಬ್ಬಾಳವರೆಗೆ ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ.

ಹೆಬ್ಬಾಳದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಮತ್ತೆ ವೇಗವಾಗಿ ನಡೆಯುತ್ತಿದೆ.

**ವೇಗದ ಮೆಟ್ರೊ: ಗಂಟೆಗೆ 50 ಕಿ.ಮೀ. ವೇಗದಲ್ಲಿ ಮೆಟ್ರೊ ಸಂಚಾರ**

**ನೀಲಿ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲುಗಳ ಸರಾಸರಿ ವಾಣಿಜ್ಯ ವೇಗ ಗಂಟೆಗೆ 50 ಕಿ.ಮೀ. ಇರಲಿದೆ. ಪ್ರಸ್ತುತ ನಮ್ಮ ಮೆಟ್ರೊದ ನೇರಳೆ, ಹಸಿರು ಮಾರ್ಗಗಳಲ್ಲಿ ರೈಲುಗಳು ಗಂಟೆಗೆ 34 ಕಿ.ಮೀ. ವೇಗದಲ್ಲಿ ಚಲಿಸುತ್ತಿವೆ. ಆರಂಭವಾಗಿರುವ ಹಳದಿ ಮಾರ್ಗ, ನಿರ್ಮಾಣ ಹಂತದಲ್ಲಿ ಇರುವ ಗುಲಾಬಿ ಮಾರ್ಗದ ಸರಾಸರಿ ವೇಗ ಇಷ್ಟೇ ಇರಲಿದೆ. ವಿಮಾನ ನಿಲ್ದಾಣಕ್ಕೆ ಹೋಗುವವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಮೆಟ್ರೊಗಳ 'ಸರಾಸರಿ ವಾಣಿಜ್ಯ ವೇಗ (ಆವರೇಜ್ ಕಮರ್ಷಿಯಲ್ ಸ್ಪೀಡ್) ಹೆಚ್ಚು ಮಾಡಲಾಗಿದೆ. ಹೆಬ್ಬಾಳದಿಂದ ವಿಮಾನ ನಿಲ್ದಾಣದವರೆಗೆ ಮೆಟ್ರೊ ನಿಲ್ದಾಣಗಳ ಸಂಖ್ಯೆ ಕೂಡ ಅದೇ ಕಾರಣಕ್ಕೆ ಕಡಿಮೆ ಇರುವಂತೆ ಯೋಜನೆ ರೂಪಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.**

---

# 147 ಪ್ರಾಥಮಿಕ ಶಾಲೆಗಳು ಮೇಲ್ದರ್ಜೆಗೆ ಅನುಮೋದನೆ



• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿನ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 147 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಅನುಮೋದನೆ ನೀಡಿದೆ.

ಶಾಲೆಯಲ್ಲಿ ಒಂದರಿಂದ 8ನೇ ತರಗತಿವರೆಗೆ ಓದುತ್ತಿರುವ ಮಕ್ಕಳ ಸಂಖ್ಯೆ, ಮೂಲಸೌಕರ್ಯಗಳ ಲಭ್ಯತೆ ಸೇರಿದಂತೆ ಅಗತ್ಯ ಮಾನದಂಡಗಳನ್ನು ಪೂರೈಸಿದ ಶಾಲೆಗಳನ್ನು ಜಿಲ್ಲಾವಾರು ಪಟ್ಟಿ ಮಾಡಿ ಮೇಲ್ದರ್ಜೆಗೇರಿಸಲಾಗಿದೆ. 2025–26ನೇ ಸಾಲಿನಿಂದಲೇ ಇದು ಜಾರಿಗೆ ಬರಲಿದೆ ಎಂದು ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ. ಬೆಳಗಾವಿ ವಿಭಾಗದಲ್ಲಿ 88, ಬೆಂಗಳೂರು ವಿಭಾಗದಲ್ಲಿ 49, ಕಲಬುರಗಿ ವಿಭಾಗದಲ್ಲಿ 6 ಮೈಸೂರು ವಿಭಾಗದಲ್ಲಿನ 4 ಶಾಲೆಗಳು ಈ ಪಟ್ಟಿಯಲ್ಲಿ ಸೇರಿವೆ.

---



# ರಾಮಾಯಣ

## ಚಿತ್ರಕೂಟದಲ್ಲಿದ್ದ ಋಷಿಗಳು ಮತ್ತೊಂದು ವನಕ್ಕೆ ಹೋದದ್ದು

• ಹಿಂದಿನ ಸಂಚಿಕೆಯಿಂದ

116 ನೆಯ ಅಧ್ಯಾಯ

ಲಕ್ಷ್ಮಣನಿಗೂ ಸೀತಾದೇವಿಗೂ ಫಲಾಹಾರವನ್ನು ಕೊಟ್ಟು ಸಂತವಿಟ್ಟನು. ಅತ್ಯಂತ ತೇಜಸ್ವಿಯೂ ಧರ್ಮಮಾರ್ಗಪ್ರವರ್ತಕನೂ ಮಹಾತ್ಮನೂ ಆದ ಆ ಮುನೀಶ್ವರನು ಪತಿವ್ರತಾಶಿರೋಮಣಿಯಾದ ತನ್ನ ಪತ್ನಿ ಅನಸೂಯಾ ದೇವಿಯನ್ನು ಕರೆದು ಅನಸೂಯೆ. ಸೀತಾದೇವಿಯನ್ನು ಒಳಗೆ ಕರೆದುಕೊಂಡು ಹೋಗಿ ಸತ್ಕಾರವನ್ನು ಮಾಡು ಎಂದು ಹೇಳಿ ಶ್ರೀರಾಮನನ್ನು ಕುರಿತು ಹೀಗೆಂದನು: ಶ್ರೀರಾಮ, ಅನಸೂಯಾದೇವಿಯು ಪೂರ್ವದಲ್ಲಿ ಹತ್ತು ವರುಷಗಳ ಪರ್ಯಂತ ಮಳೆಯಿಲ್ಲದೆ ದುರ್ಭಿಕ್ಷವಾಗಲು ತನ್ನ ಪತಿವ್ರತಾ ಧರ್ಮದಿಂದ ಈ ವನದಲ್ಲಿ ಕಂದಮೂಲಫಲಗಳು ಪರಿಪೂರ್ಣವಾಗಿರುವಂತೆ ಮಾಡಿದಳು. ಜಾಹ್ನವಿಯು ಈ ದೇವಿಯ ಪತಿವ್ರತಾಧರ್ಮದಿಂದ ಪ್ರವಾಹರೂಪವಾಗಿ ಈ ಆಶ್ರಮದಲ್ಲಿ ಹರಿದಳು. ಅನಸೂಯಾದೇವಿಯು ವ್ರತನಿಯಮೋಪವಾಸಗಳಿಂದ ಹತ್ತು ಸಾವಿರ ವರುಷಗಳ ಪರ್ಯಂತ ಉಗ್ರವಾದ ತಪಸ್ಸನ್ನು ಮಾಡಿದಳು ಶ್ರೀರಾಮ, ನಿನಗೆ ಎಂಥ ವಿಘ್ನಗಳು ಬಂದರೂ ಈ ದೇವಿಯ ವ್ರತಾಚರಣೆಯಿಂದಲೇ ಪರಿಹಾರವಾಗುವುವು. ಅನಸೂಯಾದೇವಿಯು ಸಮಸ್ತ ಪ್ರಾಣಿಗಳಿಗೂ ನಮಸ್ಕಾರಯೋಗ್ಯಳು. ಪತಿವ್ರತಾಸ್ತ್ರೀಯರಲ್ಲಿ ಕೀರ್ತಿಯನ್ನು ಪಡೆದವಳು. ಬಹು ವೃದ್ಧೆಯಾದವಳು. ಶಾಂತಗುಣಸಂಪತ್ತಿಯುಳ್ಳವಳು. ಸೀತಾದೇವಿಯು ಆ ದೇವಿಯ ಸಮೀಪಕ್ಕೆ ಹೋಗಿ ಅಭಿವಂದಿಸಿ ಆಕೆಯ ಸಮೀಪದಲ್ಲಿರಲಿ ಎಂದು ಹೇಳಿದನು. ಶ್ರೀರಾಮನು ಮಹಾಪ್ರಸಾದವೆಂದು ಸೀತಾದೇವಿಯನ್ನು ಕರೆದು ಸೀತೆ. ಅತ್ರಿಮುನೀಶ್ವರನು ಹೇಳಿದಂತೆ ನೀನು ತಪಸ್ವಿನಿಯಾದ ಅನಸೂಯಾದೇವಿಯ ಸಮೀಪಕ್ಕೆ ಹೋಗು. ನಿನಗೆ ಶ್ರೇಯಸ್ಸುಂಟಾಗುವುದು. ಆ ದೇವಿಯ ಸಮೀಪಕ್ಕೆ ಹೋಗಿ ಅಭಿವಂದಿಸು ಎಂದು ಹೇಳಿದನು.

ಸೀತಾದೇವಿಯು ಶ್ರೀರಾಮನು ಹೇಳಿದ ಮಾತು ತನಗೆ ಹಿತವೆಂದು ತಿಳಿದು ಅತ್ರಿಮುನೀಶ್ವರನ ಪತ್ನಿಯಾದ ಅನಸೂಯಾದೇವಿಯ ಸಮೀಪಕ್ಕೆ ಹೋದಳು. ಶರೀರವು ಬಗ್ಗಿ ವೃದ್ಧೆಯಾಗಿ ಬಿಳುಪಾದ ಕೂದಲುಳ್ಳ ಬಿರುಗಾಳಿಯಿಂದ ಚಲಿಸುವ ಬಾಳೆಯ ಗಿಡದಂತೆ ನಡುಗುತ್ತಿದ್ದ ಪತಿವ್ರತಾ ಶಿರೋರತ್ನವಾದ ಆ ದೇವಿಗೆ ತನ್ನ ಹೆಸರನ್ನು ಹೇಳಿ ನಮಸ್ಕಾರಮಾಡಿದಳು. ಅನಸೂಯಾದೇವಿಯು ಸೀತಾದೇವಿಯ ಕುಶಲವನ್ನು ಕೇಳಿ ಸಾಕ್ಷಾತ್ ಧರ್ಮಸ್ವರೂಪಳಾದ ಆ ದೇವಿಯನ್ನು ಕುರಿತು – ಸೀತಾದೇವಿ, ಸಮಸ್ತ ಬಂಧುಬಳಗವನ್ನೂ ಐಶ್ವರ್ಯವನ್ನೂ ಬಿಟ್ಟು ಶ್ರೀರಾಮನ ಹಿಂದೆ ನೀನು ಬಂದದ್ದು ಒಳ್ಳೆಯದಾಯಿತು.ಲೋಕದಲ್ಲಿ ಪತಿವ್ರತಾಸ್ತ್ರೀಯಾದವಳು ತನ್ನ ಪುರುಷನು ಮನೆಯಲ್ಲಿದ್ದರೂ ವನದಲ್ಲಿದ್ದರೂ ಪುಣ್ಯಾತ್ಮನಾದರೂ ಪಾಪಾತ್ಮನಾದರೂ ಶುಚಿಯಾದರೂ ಅಶುಚಿಯಾದರೂ ಆತನೇ ತನಗೆ ಪರಲೋಕ ಸಾಧನವೆಂದು ತಿಳಿಯುವುದೇ ಧರ್ಮ, ಪತಿಯು ಸದಾಚಾರಿಯಾದರೂ ದುರಾಚಾರಿಯಾದರೂ ಧನಿಕನಾದರೂ ದರಿದ್ರನಾದರೂ ಆತನೇ ದೈವ, ಸ್ತ್ರೀಯರಿಗೆ ಪತಿಗಿಂತಲೂ ಅಧಿಕವಾದ ದೈವವಿಲ್ಲ.

ಮುಂದುವರಿಯುವುದು...

---

# ಶುಗರ್ ಕಂಟ್ರೋಲ್ ಬರಲು ಸರಿಯಾಗಿ ನೀರು ಕೂಡ ಕುಡಿಯಬೇಕು

ಮಧುಮೇಹ ಇರುವವರು ಸಾಮಾನ್ಯವಾಗಿ ನಿರ್ಜಲೀಕರಣ ಸಮಸ್ಯೆಗೆ ಒಳಗಾಗುವ ಅಪಾಯ ಹೆಚ್ಚಿರುತ್ತದೆಯಂತೆ ಏಕೆಂದರೆ ರಕ್ತದಲ್ಲಿನ ಗ್ಲೂಕೋಸ್ ಮಟ್ಟವು ಹೆಚ್ಚಾಗುವುದರಿಂದ ದೇಹದಲ್ಲಿ ನೀರಿನಂಶ ಕಡಿಮೆಯಾಗುತ್ತದೆ. ಹೀಗಾಗಿ ಈ ಕಾಯಿಲೆಯಿಂದ ಬಳಲುತ್ತಿರುವವರು ದೇಹವನ್ನು ಹೈಡ್ರೇಟ್ ಆಗಿಡುವುದು ಬಹಳ ಮುಖ್ಯ. ಮಧುಮೇಹ ಕಾಯಿಲೆ ಎನ್ನುವುದು ಜಗತ್ತಿನಾದ್ಯಂತ ಐದು ಜನರಲ್ಲಿ ಇಬ್ಬರಿಗೆ ಎನ್ನುವಂತೆ ಹರಡಿದೆ. ಸಕ್ಕರೆ ಕಾಯಿಲೆ ಅಥವಾ ಶುಗರ್ ಎನ್ನುವುದು ಇದಕ್ಕೆ ಇನ್ನೊಂದು ಹೆಸರು.ಈ ಕಾಯಿಲೆಯ ನಿರ್ವಹಣೆಯ ವಿಷಯಕ್ಕೆ ಬಂದಾಗ, ಆಹಾರ, ವ್ಯಾಯಾಮ, ಔಷಧಿ ಮತ್ತು ನಿಯಮಿತ ವೈದ್ಯಕೀಯ ತಪಾಸಣೆಗಳಂತಹ ವಿಷಯಗಳ ಮೇಲೆ ಹೆಚ್ಚಾಗಿ ಗಮನ ಹರಿಸ ಲಾಗುತ್ತದೆ. ಆದಾಗ್ಯೂ, ಮತ್ತೊಂದು ಪ್ರಮುಖ ವಿಷಯವೆಂದರೆ ಹೈಡ್ರೇಷನ್.ದೇಹವನ್ನು ಸರಿಯಾಗಿ ಹೈಡ್ರೇಟ್ ಆಗಿಡುವುದು ಮತ್ತು ಸರಿಯಾಗಿ ನೀರು ಕುಡಿಯುವುದು ಕೂಡ ನಿಮಗೆ ಪ್ರಯೋಜನ ಕಾರಿಯಾಗಲಿದೆ. ಮಧುಮೇಹ ಇರುವವರಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟ ಮತ್ತು ಒಟ್ಟಾರೆ ಆರೋಗ್ಯವನ್ನು ನಿರ್ವಹಿಸುವಲ್ಲಿ ನೀರು ಮತ್ತು ಇತರ ಆರೋಗ್ಯಕರವಾದ ದ್ರವ ಪದಾರ್ಥಗಳು ದೊಡ್ಡ ಪಾತ್ರವನ್ನು ವಹಿಸುತ್ತವೆ.

**ದೇಹವನ್ನು ಹೈಡ್ರೇಟ್ ಆಗಿಡುವುದು:** ಬಹಳ ಮುಖ್ಯ, ಅದರಲ್ಲೂ ಮಧುಮೇಹ ಇರುವವರು, ಈ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಲು ಹೋಗಬಾರದು. ದೇಹದ ಚಯಾಪಚಯ ಕ್ರಿಯೆಯನ್ನು ಸರಿಯಾಗಿ ಡಲು ನೀರು ಸಹಾಯ ಮಾಡುತ್ತದೆ.ಇದರಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟದ ನಿರ್ವಹಣೆಯೂ ಸೇರಿದೆ. ದೇಹವು ಚೆನ್ನಾಗಿ ಹೈಡ್ರೇಟ್ ಆಗಿದ್ದಾಗ ರಕ್ತದ ಪ್ರಮಾಣವು ಸರಿಯಾಗಿರುತ್ತದೆ, ಇದು ಗ್ಲೂಕೋಸ್ ಅನ್ನು ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಚಲಿಸಲು ಮತ್ತು ದುರ್ಬಲವಾಗಿರಲು ಸಹಾಯ ಮಾಡುತ್ತದೆ. ಇದಕ್ಕೆ ವಿರುದ್ಧವಾಗಿ, ಸ್ವಲ್ಪ ನಿರ್ಜಲೀ ಕರಣವು ಸಹ ಸಕ್ಕರೆ ನಿಯಂತ್ರಣವನ್ನು ದುರ್ಬಲಗೊಳಿಸಲು ಸಹಾಯ ಮಾಡುತ್ತದೆ.


**ಬ್ಲಡ್ ಶುಗರ್ ಮಟ್ಟ ಏರಿಳಿತ ಕಾಣಿಸಿಕೊಳ್ಳುವುದು ಒಳ್ಳೆಯದಲ್ಲ:** ಮಧುಮೇಹ ಇರುವವರಿಗೆ ಬ್ಲಡ್ ಶುಗರ್ ಮಟ್ಟ ಏರಿಳಿತ ಕಾಣಿಸಿ ಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಮೂತ್ರಪಿಂಡಗಳು ಅಧಿಕ ರಕ್ತದ ಸಕ್ಕರೆಗೆ ಪ್ರತಿಕ್ರಿಯಿಸಿ ಗ್ಲೂಕೋಸ್ ಅನ್ನು ಹೊರಹಾಕಲು ಹೆಚ್ಚು ಮೂತ್ರವನ್ನು ಉತ್ಪಾದಿಸುತ್ತವೆ. ಈ ಪ್ರಕ್ರಿಯೆಯು ದೇಹದಲ್ಲಿ ನೀರಿನಾಂಶದಿಂದ ಸಮತೋಲನ ಗೊಳ್ಳದಿದ್ದರೆ, ನಿರ್ಜಲೀಕರಣಕ್ಕೆ ಕಾರಣವಾಗಬಹುದು, ಇದು ನಿಮ್ಮ ರಕ್ತದಲ್ಲಿನ ಸಕ್ಕರೆಯನ್ನು ಹೆಚ್ಚಿಸುವ ಅಪಾಯ ಕೂಡ ಹೆಚ್ಚಿರುತ್ತದೆ. ಡಿಕೆಎ ವೈದ್ಯಕೀಯ ತುರ್ತುಸ್ಥಿತಿಯಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ನೀಡಲಾಗುವ ಮೊದಲ ಚಿಕಿತ್ಸೆಗಳಲ್ಲಿ ಒಂದು ಹೈಡ್ರೇಷನ್. ಸರಿಯಾದ ಹೈಡ್ರೇಷನ್ ನಂತರ, ಇನ್ಸುಲಿನ್ ಚಿಕಿತ್ಸೆಯನ್ನು ನೀಡಲಾಗುತ್ತದೆ.



**ಮಧುಮೇಹ ಇರುವವರಿಗೆ ನಿರ್ಜಲೀಕರಣ ಏಕೆ ಅಪಾಯಕಾರಿ:** ಮಧುಮೇಹ ಇರುವವರಲ್ಲಿ ನಿರ್ಜಲೀಕರಣದ ಗಂಭೀರ ಪರಿಣಾಮವೆಂದರೆ ಮಧುಮೇಹ ಕೀಟೋ ಆಸಿಡೋಸಿಸ್ ದೇಹದಲ್ಲಿ ಗ್ಲೂಕೋಸ್ ಅನ್ನು ಶಕ್ತಿಯಾಗಿ ಪರಿವರ್ತಿಸಲು ಸಾಕಷ್ಟು ಇನ್ಸುಲಿನ್ ಇಲ್ಲದಿದ್ದಾಗ ಈ ಸ್ಥಿತಿ ಉಂಟಾಗುತ್ತದೆ. ಪರಿಣಾಮವಾಗಿ, ಯಕೃತ್ತು ಇಂಧನಕ್ಕಾಗಿ ಕೊಬ್ಬನ್ನು ಒಡೆಯುತ್ತದೆ, ಕೀಟೋನ್‌ಗಳು ಎಂಬ ಆಮ್ಲಗಳನ್ನು ಉತ್ಪಾದಿಸುತ್ತದೆ. ಹೆಚ್ಚಿನ ಮಟ್ಟದ ಕೀಟೋನ್‌ಗಳು ದೇಹವನ್ನು ವಿಷಪೂರಿತಗೊಳಿಸ ಬಹುದು ಮತ್ತು ತಕ್ಷಣ ಚಿಕಿತ್ಸೆ ನೀಡದಿದ್ದರೆ ಕೋಮಾ ಅಥವಾ ಸಾವಿಗೆ ಕಾರಣವಾಗಬಹುದು.

**ಮೂತ್ರವರ್ಧಕ ವಿರೋಧಿ ಹಾರ್ಮೋನ್ ಪಾತ್ರ**

ಅರ್ಜಿನೈನ್ ವಾಸೊಪ್ರೆಸ್ಸಿನ್ ಒಂದು ಮೂತ್ರವರ್ಧಕ ವಿರೋಧಿ ಹಾರ್ಮೋನ್ ಆಗಿದ್ದು ಅದು ದೇಹದಲ್ಲಿ ದ್ರವ ಎಲೆಕ್ಟ್ರೋಲೈಟ್ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಕಡಿಮೆ ನೀರು ಕುಡಿಯುವುದರಿಂದ AVPಯ ಕಾರ್ಯವು ದುರ್ಬಲಗೊಳ್ಳುತ್ತದೆ, ಇದು ದೇಹದ ದ್ರವ, ಉಪ್ಪಿನ ಮಟ್ಟದಲ್ಲಿ ಅಸಮತೋಲನಕ್ಕೆ ಕಾರಣವಾಗುತ್ತದೆ. ನಿಮ್ಮ ಮೂತ್ರಪಿಂಡಗಳು ಅಥವಾ ಕಿಡ್ನಿಗಳು ಹೈಡ್ರೇಟ್ ಮತ್ತು ಎಲೆಕ್ಟ್ರೋಲೈಟ್ ಸಮತೋಲನವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವುದರಿಂದ ಇದು ಮಧುಮೇಹ ನಿರ್ವಹಣೆಯನ್ನು ಹೆಚ್ಚು ಕಷ್ಟಕರವಾಗಿಸುತ್ತದೆ!



**ಮುನ್ನೆಚ್ಚರಿಕೆಗಳೇನು? :** ಮಧುಮೇಹ ರೋಗಿಗಳು ತಮ್ಮ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ನಿಯಮಿತವಾಗಿ ಪರಿಶೀಲನೆ ಮಾಡುತ್ತಿರಬೇಕು. ಇತ್ತೀಚಿನ ದಿನಗಳಲ್ಲಿ, ಫ್ರೀಸ್ಟೈಲ್ ಲಿಬ್ರೆ ನಂತಹ ಸ್ಮಾರ್ಟ್ ಸಿಜಿಎಂ ಸಾಧನಗಳು ಲಭ್ಯವಿದೆ, ಅವು ಪ್ರಯಾಣದಲ್ಲಿರುವಾಗಲೂ ಗ್ಲೂಕೋಸ್ ಅನ್ನು ನಿರಂತರವಾಗಿ ಪರಿಶೀಲಿಸುವ ಸಾಮರ್ಥ್ಯವನ್ನು ಹೊಂದಿವೆ. ಅದರಲ್ಲಿ ಯಾವುದೇ ಸೂಜಿಯನ್ನು ಸೇರಿಸುವ ಅಗತ್ಯವಿಲ್ಲ. ವಿಶೇಷವಾಗಿ ನೀವು ಬಿಸಿಲಿನಲ್ಲಿ ಹೋಗುವ ದಿನಗಳಲ್ಲಿ ನಿಮ್ಮ ಗ್ಲೂಕೋಸ್ ಮಟ್ಟವನ್ನು ಪರಿಶೀಲಿಸಿ ಏಕೆಂದರೆ ಅತಿಯಾದ ಶಾಖವು ರಕ್ತದಲ್ಲಿನ ಗ್ಲೂಕೋಸ್ ಮಟ್ಟದಲ್ಲಿ ಏರಿಳಿತಗಳಿಗೆ ಕಾರಣವಾಗಬಹುದು. ಹಗಲಿನಲ್ಲಿ ಸಾಧ್ಯವಾದಷ್ಟು ದ್ರವ ಆಹಾರವನ್ನು ತೆಗೆದುಕೊಳ್ಳಿ.

ಕನಿಷ್ಠ 4 ಲೀಟರ್ ನೀರು ಕುಡಿಯಿರಿ. ಇದರ ಜೊತೆಗೆ, ನೀವು ಮಜ್ಜಿಗೆ, ತೆಂಗಿನಕಾಯಿ ನೀರು ಇತ್ಯಾದಿಗಳನ್ನು ತೆಗೆದುಕೊಳ್ಳಬಹುದು. ಆಲ್ಕೋಹಾಲ್ ಅಥವಾ ಮದ್ಯಪಾನ ಕುಡಿಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿ, ಆಲ್ಕೋಹಾಲ್ ದೇಹದಲ್ಲಿ ನಿರ್ಜಲೀಕ ರಣಕ್ಕೆ ಕಾರಣವಾಗುತ್ತದೆ. ಪ್ರತಿದಿನ ವ್ಯಾಯಾಮ ಮಾಡಿ, ಆದರೆ ಬೆಳಗ್ಗೆ ಬೇಗನೆ ಮಾಡಿ. ಸೂರ್ಯ ಉದಯಿಸಿದ ನಂತರ ಹೊರಗೆ ವ್ಯಾಯಾಮ ಮಾಡುವ ಬದಲು, ಹವಾನಿಯಂತ್ರಿತ ಸ್ಥಳದಲ್ಲಿ ವ್ಯಾಯಾಮ ಮಾಡಿ. ಹಾಗಲಕಾಯಿ ದೇಹದಲ್ಲಿ ಗ್ಲೂಕೋಸ್ ಚಯಾಪಚಯ ಕ್ರಿಯೆಯನ್ನು ಉತ್ತೇಜಿಸುವುದರ ಜೊತೆಗೆ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ನೀವು ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಹಾಗಲಕಾಯಿ ರಸವನ್ನು ಕುಡಿಯಬಹುದು.

**ಈ ವಿಚಾರ ಗೊತ್ತಿರಲಿ :** ಅತಿಯಾದ ಕೆಫೀನ್ ಮತ್ತು ಆಲ್ಕೋಹಾಲ್ ಅನ್ನು ಕುಡಿಯಬೇಕು: ಕೆಫೀನ್ ಮತ್ತು ಆಲ್ಕೋಹಾಲ್ ಎರಡೂ ನಿರ್ಜಲೀಕರಣಕ್ಕೆ ಕಾರಣವಾಗಬಹುದು, ಆದ್ದರಿಂದ ಅವುಗಳ ಸೇವನೆಯನ್ನು ಮಿತಿಗೊಳಿಸಿ.

**ನೀರು ಕುಡಿಯುವ ಅಭ್ಯಾಸವನ್ನು ನಿಲ್ಲಿಸಬೇಡಿ:** ನಿಮಗೆ ಬಾಯಾರಿಕೆ ಅನಿಸದಿದ್ದರೂ ಸಹ, ದಿನವಿಡೀ ನಿಯಮಿತವಾಗಿ ನೀರು ಕುಡಿಯುವ ಅಭ್ಯಾಸವನ್ನು ಮಾಡಿಕೊಳ್ಳಿ. ಸಕ್ಕರೆಯಾಂಶ ಇರುವ ಪಾನೀಯಗಳಿಂದ ದೂರವಿರಿ: ಹಣ್ಣಿನ ರಸಗಳು ಮತ್ತು ಸಿಹಿ ಪಾನೀಯಗಳಿಂದ ದೂರವಿರಿ ಏಕೆಂದರೆ ಅವು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸಬಹುದು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ವಿಧಿಯನ್ನು ಆಧರಿಸದಿರಿ , ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ.

**ವೃಷಭ** ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.

**ಮಿಥುನ** ಬಿಕ್ಕಟ್ಟಿನ ಸಮಯದಲ್ಲಿ ತಾಳ್ಮೆ ಕಳೆದುಕೊಳ್ಳಬೇಡಿ. ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ಕರ್ಕಾಟಕ** ನಿಮ್ಮ ಮನೆಯ ಕರ್ತವ್ಯಗಳನ್ನು ನೀವು ನಿರ್ಲಕ್ಷಿಸಿದ್ದಲ್ಲಿ ನಿಮ್ಮ ಜೊತೆಗಿರುವ ಯಾರಾದರೂ ಸಿಟ್ಟಾಗಬಹುದು. ನೀವು ಇಂದು ಪ್ರೀತಿಯ ಸಮೃದ್ಧ ಚಾಕೊಲೇಟ್‌ನ ರುಚಿ ಸವಿಯುತ್ತೀರಿ.

**ಸಿಂಹ** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು.

**ಕನ್ಯಾ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ವಾಸ್ತವವಾಗಿ ಏನನ್ನು ನೋಡ ಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ತುಲಾ** ಇಂದಿನ ದಿನ ಪ್ರೀತಿಯ ಬಣ್ಣಗಳಲ್ಲಿ ಮುಳುಗಿರುತ್ತದೆ ಆದರೆ ರಾತ್ರಿಯ ಸಮಯದಲ್ಲಿ ಯಾವುದೊ ಹಳೆಯ ವಿಷ್ಯದ ಬಗ್ಗೆ ನೀವು ಜಗಳವಾಡಬಹುದು.

**ವೃಶ್ಚಿಕ** ಆರೋಗ್ಯಕ್ಕೆ ಸಂಬಂಧಿಸಿದಂತೆ ಈ ಅವಧಿ ಮಂದವಾಗಿರುವುದರಿಂದ ನೀವು ತಿನ್ನುವುದರ ಬಗೆಗೆ ಜಾಗರೂಕರಾಗಿರಿ. ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ.

**ಧನಸ್ಸು** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದಹಾಗೆ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ.

**ಮಕರ** ಯಾರಾದರೂ ನಿಮಗೆ ಅಸಮಾಧಾನವುಂಟು ಮಾಡಬಹುದಾದರೂ ಈ ಕಿರಿಕಿರಿಗಳು ನಿಮ್ಮನ್ನು ಆವರಿಸಲು ಬಿಡಬೇಡಿ. ಈ ಅನಾವಶ್ಯಕವಾದ ಚಿಂತೆಗಳು ದೇಹದ ಮೇಲೆ ಖಿನ್ನತೆಯ ಪರಿಣಾಮ ಬೀರಬಹುದು.

**ಕುಂಭ** ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು.

**ಮೀನ** ನಿಮ್ಮ ಮನೆಯಲ್ಲಿ ಸ್ವಲ್ಪ ಸ್ವಚ್ಛತಾ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು. ನೀವು ಹಾಗೂ ನಿಮ್ಮ ಪ್ರೀತಿಪಾತ್ರರು ಒಬ್ಬರೊನ್ನಬ್ಬರು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಮಯ ವ್ಯ ಯಿಸಬೇಕು.

---

### ಉ. ಕರ್ನಾಟಕದ ಜಿಲ್ಲೆಗಳಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ 'ವಂದೇ ಭಾರತ' ರೈಲು, ಹಾವೇರಿಯ ಜನರಿಗೆ ಪ್ರಯಾಣದ ಶಕ್ತಿ

# ವಂದೇ ಭಾರತ್: 21.74 ಲಕ್ಷ ಆದಾಯ, 1,937 ಮಂದಿ ಪ್ರಯಾಣ

• **ಉದಯವಾಹಿನಿ ಹಾವೇರಿ**

ಉತ್ತರ ಕರ್ನಾಟಕದ ಜಿಲ್ಲೆಗಳಿಂದ ರಾಜಧಾನಿ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ 'ವಂದೇ ಭಾರತ' ರೈಲು, ಹಾವೇರಿಯ ಜನರಿಗೆ 'ಪ್ರಯಾಣದ ಶಕ್ತಿ' ತುಂಬಿದೆ. ಸ್ಥಳೀಯರ ಬಹುದಿನಗಳ ಬೇಡಿಕೆ ಯಂತೆ ಹಾವೇರಿಯ ಮೈಲಾರ ಮಹದೇವಪ್ಪ ನಿಲ್ದಾಣದಲ್ಲಿ ' ವಂದೇ ಭಾರತ್' ರೈಲು ನಿಲುಗಡೆಯಾಗುತ್ತಿದೆ. ನಾಲ್ಕು ತಿಂಗಳ ಅವಧಿಯಲ್ಲಿ ಹಾವೇರಿಯಿಂದ 1,937 ಮಂದಿ ಪ್ರಯಾಣ ಮಾಡಿದ್ದಾರೆ. ಹಾವೇರಿಯಿಂದ ರಾಜಧಾನಿ ಬೆಂಗಳೂರಿಗೆ ಹೋಗಲು ಸಾಕಷ್ಟು ರೈಲುಗಳಿದ್ದರೂ ಹೆಚ್ಚಿನ ಸಮಯದ ಅವಶ್ಯಕತೆಯಿತ್ತು. ಇದೇ ಸಂದರ್ಭದಲ್ಲಿಯೇ ಧಾರವಾಡದಿಂದ ಬೆಂಗಳೂರಿಗೆ ವಂದೇ ಭಾರತ್ ರೈಲು ಆರಂಭವಾಯಿತು. ಈ ರೈಲನ್ನು ಏಪ್ರಿಲ್ 11ರಿಂದ ಹಾವೇರಿ ನಿಲ್ದಾಣದಲ್ಲಿ ನಿಲುಗಡೆ ಮಾಡಲಾಗುತ್ತಿದ್ದು, ಸ್ಥಳೀಯ ಜನರ ಸಂಚಾರಕ್ಕೆ ಅನುಕೂಲವಾಗಿದೆ.

ನಿಲುಗಡೆಯ ಮೊದಲ ದಿನವೇ ಜನರಿಂದ ಅದ್ದೂರಿ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆರಂಭದ ದಿನಗಳಲ್ಲಿ, 'ರೈಲು ಹೇಗಿದೆ ನೋಡೋಣ?' ಎಂಬ ಆಸೆಯಿಂದ ಹಲವರು ಪರೀಕ್ಷಾರ್ಥವಾಗಿ ಪ್ರಯಾಣ ಮಾಡಿದರು. ಈಚಿನ ದಿನಗಳಲ್ಲಿ ರಾಜಧಾನಿಯಲ್ಲಿ ತುರ್ತು ಕೆಲಸಗಳಿದ್ದರೆ, ವಂದೇ ಭಾರತ್ ರೈಲಿನಲ್ಲಿ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಧಾರವಾಡ, ಹುಬ್ಬಳ್ಳಿ ಕಡೆಯಿಂದಲೂ ವಂದೇ ಭಾರತ್ ಮೂಲಕ ಹಾವೇರಿಗೆ ಬಂದು ಇಳಿಯುವವರು ಹೆಚ್ಚಾಗಿದ್ದಾರೆ. ಜೊತೆಗೆ, ಹಾವೇರಿಯಿಂದಲೂ ಹುಬ್ಬಳ್ಳಿ-ಧಾರವಾಡಕ್ಕೆ ಹೋಗುವವರು ಸಹ ಇದೇ ರೈಲು ಬಳಸುತ್ತಿದ್ದಾರೆ.

ಹಾವೇರಿಯಲ್ಲಿ ವಂದೇ ಭಾರತ್ ರೈಲು ನಿಲುಗಡೆಯಾದ ನಂತರ, ಎಷ್ಟು ಜನ ಪ್ರಯಾಣಿಸಿದ್ದಾರೆ ಹಾಗೂ ಎಷ್ಟು ಆದಾಯ ಬಂದಿದೆ ? ಎಂಬ ಬಗ್ಗೆ ರೈಲ್ವೆ ಇಲಾಖೆ ಮಾಹಿತಿ ಸಂಗ್ರಹಿಸಿದೆ. ಇದರ ಪ್ರಕಾರ, ಏಪ್ರಿಲ್ 11ರಿಂದ ಜುಲೈ 31ರ ಅವಧಿಯಲ್ಲಿ ಹಾವೇರಿಯ 1,937 ಮಂದಿ ರೈಲಿನಲ್ಲಿ ಪ್ರಯಾಣಿಸಿದ್ದಾರೆ. ಇದರಿಂದ ಇಲಾಖೆಗೆ 21.74 ಲಕ್ಷ ಆದಾಯ ಬಂದಿದೆ. ರೈಲಿನಲ್ಲಿ ಬಂದವರು ಹೆಚ್ಚು. ಬೆಂಗಳೂರಿನಿಂದ ಹಾಗೂ ಧಾರವಾಡದಿಂದ ಹೆಚ್ಚಿನ ಪ್ರಯಾಣಿಕರು ಹಾವೇರಿ ನಿಲ್ದಾಣಕ್ಕೆ ಬಂದಿಳಿದಿದ್ದಾರೆ. ಹೋದವರ ಸಂಖ್ಯೆ ಸ್ವಲ್ಪ ಕಡಿಮೆಯಿದೆ.'ಹಾವೇರಿಯಿಂದ 1,937 ಪ್ರಯಾಣಿಸಿದರೆ, ಬೆಂಗಳೂರು ಹಾಗೂ ಧಾರವಾಡದಿಂದ 2,199 ಮಂದಿ ಹಾವೇರಿ ನಿಲ್ದಾಣಕ್ಕೆ ಬಂದು (ಆಗಮನ) ಇಳಿದಿದ್ದಾರೆ. ಆಗಮನ ಹಾಗೂ ನಿರ್ಗಮನದ ಲೆಕ್ಕವನ್ನು ಪರಿಶೀಲಿಸಿದಾಗ ಆದಾಯದ ಮೊತ್ತ 50 ಲಕ್ಷ ಮೀರಬಹುದು. ಆಗಮನದ ಲೆಕ್ಕ ಆಯಾ ನಿಲ್ದಾಣದಲ್ಲಿ ಲಭ್ಯವಾಗುತ್ತದೆ ಎಂದು ರೈಲ್ವೆ ಇಲಾಖೆ ಮೂಲಗಳು ಹೇಳಿವೆ. ಅವರಲ್ಲಿ ಬಹುಪಾಲು ಜನರು, ವಾಪಸು ಬೇರೆ ರೈಲು ಹಾಗೂ ಬಸ್‌ನಲ್ಲಿ ಹಾವೇರಿಗೆ ಬಂದಿದ್ದಾರೆ' ಎಂದು ತಿಳಿಸಿವೆ. ಧಾರವಾಡ-ಬೆಂಗಳೂರು ರೈಲು ಮಾತ್ರ ಹಾವೇರಿಯಲ್ಲಿ ನಿಲುಗಡೆಯಾಗುತ್ತಿತ್ತು. ಇದೀಗ ಬೆಳಗಾಗಿ-ಬೆಂಗಳೂರು ವಂದೇ ಭಾರತ್ತ ರೈಲು ಸಹ ಹೊಸದಾಗಿ ಆರಂಭವಾಗಿದೆ. ಈ ರೈಲು ಸಹ ಹಾವೇರಿ ನಿಲ್ದಾಣದಲ್ಲಿ ನಿಲ್ಲಲಿದೆ' ಎಂದು ಹೇಳಿವೆ.

> ಹಾವೇರಿಯಲ್ಲಿ ವಂದೇ ಭಾರತ ರೈಲು ನಿಲ್ಲಿಸಬೇಕೆಂಬ ಒತ್ತಡವಿತ್ತು. ಇದಕ್ಕೆ ಸ್ಪಂದಿಸಿದ್ದ ಪ್ರಧಾನಿಯವರು ಏಪ್ರಿಲ್ 11ರಂದು ಒಂದು ರೈಲು ನಿಲ್ಲಿಸಿದ್ದರು. ಈಗ ಮತ್ತೊಂದು ರೈಲಿನ ನಿಲುಗಡೆಗೆ ಅವಕಾಶ ಕಲ್ಪಿಸಿದ್ದಾರೆ
> -ಬಸವರಾಜ ಬೊಮ್ಮಾಯಿ, ಸಂಸದ

**ಸ್ಥಳೀಯರ ಸಂಚಾರಕ್ಕೆ ಅನುಕೂಲ**



#### ದಾವಣಗೆರೆಯಲ್ಲಿ 1.34 ಕೋಟಿ ಆದಾಯ

ಹಾವೇರಿ ಜಿಲ್ಲೆಗೆ ಹೊಂದಿಕೊಂಡಿರುವ ದಾವಣಗೆರೆಯಲ್ಲಿ ವಂದೇ ಭಾರತ್ ರೈಲು ನಿಲುಗಡೆಯಾಗುತ್ತಿದೆ. ಏಪ್ರಿಲ್ 1ರಿಂದ ಜುಲೈ 31ರವರೆಗೆ ದಾವಣಗೆರೆಯ 16874 ಮಂದಿ ರೈಲು (ನಿರ್ಗಮನ) ಬಳಸಿದ್ದಾರೆ. ಇದರಿಂದ ಇಲಾಖೆಗೆ 1.34 ಕೋಟಿ ಆದಾಯ ಬಂದಿದೆ. 'ವಂದೇ ಭಾರತ್ ರೈಲಿನ ಮೂಲಕ ದಾವಣಗೆರೆಗೆ 11414 ಮಂದಿ (ಆಗಮನ) ಬಂದಿಳಿದಿದ್ದಾರೆ. ಇದರ ಲೆಕ್ಕ ಆಯಾ ರೈಲು ನಿಲ್ದಾಣಗಳಲ್ಲಿ ಸಿಗುತ್ತದೆ' ಎಂದು ಇಲಾಖೆ ಮೂಲಗಳು ಹೇಳಿವೆ.

#### ಬೆಳಗಾವಿ-ಬೆಂಗಳೂರು ರೈಲಿಗೆ ಸ್ವಾಗತ

ಬೆಳಗಾವಿ ಜನರ ಬಹುದಿನಗಳ ಬೇಡಿಕೆಯಂತೆ ಬೆಳಗಾವಿ-ಬೆಂಗಳೂರು ನಡುವೆ ವಂದೇ ಭಾರತ್ ರೈಲು ಆರಂಭಿಸಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೈಲಿನ ಸಂಚಾರಕ್ಕೆ ಬೆಂಗಳೂರಿನಲ್ಲಿ ಭಾನುವಾರ ಚಾಲನೆ ನೀಡಿದರು. ಅದೇ ರೈಲಿಗೆ ಹಾವೇರಿಯಲ್ಲೂ ಭವ್ಯ ಸ್ವಾಗತ ಕೋರಲಾಯಿತು. ಬೆಂಗಳೂರಿನಿಂದ ಹಾವೇರಿ ನಿಲ್ದಾಣಕ್ಕೆ ಬಂದ ರೈಲಿಗೆ ಸಂಸದ ಬಸವರಾಜ ಬೊಮ್ಮಾಯಿ ಹಸಿರು ನಿಶಾನೆ ತೋರಿದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಡಿಆರ್‌ಎಂ ಮುದಿತ್ ಮಿತ್ತಲ್ ನಗರಸಭೆ ಅಧ್ಯಕ್ಷೆ ಶಶಿಕಲಾ ಮಾಳಗಿ ಹೆಚ್ಚುವರಿ ಜಿಲ್ಲಾಧಿಕಾರಿ ನಾಗರಾಜ ಎಲ್. ಹೆಚ್ಚುವರಿ ಎಸ್‌ಪಿ ಲಕ್ಷ್ಮಣ ಶಿರಕೋಳ ಇದ್ದರು.

---

### ವಿಶೇಷ ಅನುದಾನಕ್ಕಾಗಿ ಸಚಿವ ಪ್ರಿಯಾಂಕ್ ಖರ್ಗೆಗೆ ಮನವಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ಪುರಸಭೆ ವ್ಯಾಪ್ತಿಯಲ್ಲಿ 23 ವಾರ್ಡ್ ಗಳಿದ್ದು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪುರಸಭೆಗೆ ವಿಶೇಷ ಅನುದಾನ ಬಿಡುಗಡೆಗೊಳಿಸುವಂತೆ ಕಲಬುರಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರಿಗೆ ಹಾಗೂ ಪೌರಾಡಳಿತ ಸಚಿವ ರಹಿಂಖಾನ್ ಅವರಿಗೆ ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಬೆಂಗಳೂರಿನಲ್ಲಿ ಭೇಟಿಯಾಗಿ ಮನವಿಪತ್ರ ಸಲ್ಲಿಸಿದರು. ಪುರಸಭೆಯಲ್ಲಿ 23 ವಾರ್ಡ್ ಗಳಿದ್ದು ಬಹಳ ವಿಶಾಲವಾದ ಪಟ್ಟಣವಿದ್ದು ಅಭಿವೃದ್ಧಿಗಾಗಿ ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯ ಒದಗಿಸಲು ಕನಿಷ 5 ಕೋಟಿ ರೂ.ಅನುದಾನ ನೀಡುವಂತೆ ಮನವಿ ಸಲ್ಲಿಸಲಾಗಿದೆ ಎಂದು ಪುರಸಭೆ ಅಧ್ಯಕ್ಷ ಆನಂದ ಟೈಗರ್ ತಿಳಿಸಿದ್ದಾರೆ.

---

## ಕಾರ್ಯಾಗಾರ ಸದೂಪಯೋಗ ಮಾಡಿಕೊಳ್ಳುವಂತೆ ಸಲಹೆ

• **ಉದಯವಾಹಿನಿ ಗದಗ**

ವಿದ್ಯಾರ್ಥಿಗಳ ಬುದ್ದಿಮಟ್ಟ ಅರಿತು ಸೂಕ್ತ ಮಾರ್ಗದರ್ಶನ ನೀಡಿದಾಗ ಫಲಿತಾಂಶ ಸುದಾರಣೆ ಮಾಡಲು ಸಾಧ್ಯ ಎಂದು ಪಪೂ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿದ್ದಲಿಂಗ ಬಂಡು ಮಸನಾಯಕ್ ಹೇಳಿದರು. ಅವರು ಮಂಗಳವಾರ ನಗರದ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಜರುಗಿದ ಆರ್ಥಿಕ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಉಪನಿರ್ದೇಶಕರ ಕಚೇರಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಅರ್ಥಶಾಸ್ತ್ರ ವಿಷಯದ ಉಪನ್ಯಾಸಕರಿಗೆ ಒಂದು ದಿನದ ಪುನಶ್ಚೇತನ ತರಬೇತಿ ಕಾರ್ಯಾಗಾರ ಹಾಗೂ ಸಾಧಕರಿಗೆ ಮತ್ತು ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಸರ್ವಾಂಗಿಣ ಅಭಿವೃದ್ಧಿಗೆ ಇಂತಹ ಕಾರ್ಯಾಗಾರ ತುಂಬಾ ಅವಶ್ಯವಾಗಿದೆ. ಕಾರ್ಯಾಗಾರದ ಮೂಲಕ ನ್ಯೂನ್ಯತೆಗಳನ್ನು ಪತ್ತೆ ಹಚ್ಚಿ, ಅವುಗಳನ್ನು ನಿವಾರಣೆ ಮಾಡಿದಾಗ ಜೊತೆಗೆ ಗುರಿ ಸಾಧಿಸಲು ಹಿರಿಯ ಉಪನ್ಯಾಸಕರ ಸಲಹೆ, ಸೂಚನೆಗಳನ್ನು ಪಾಲಿಸಬೇಕು ಅಂದಾಗ ಫಲಿತಾಂಶ ಸುಧಾರಣೆ ಮಾಡಲು ಸಹಾಯಕವಾಗುತ್ತದೆ ಎಂದರು.



ಉದಯವಾಹಿನಿ ಚಿತ್ರ

ಕೀರು ಪರೀಕ್ಷೆಗಳ ಅಂಕಗಳನ್ನು ನೀಡಿರುವ ಕುರಿತು ಸೂಕ್ತ ದಾಖಲೆಗಳನ್ನು ಸಂಗ್ರಹಿಸಿಟ್ಟರಬೇಕು. ಪರಿಶೀಲನೆ ಸಂಧರ್ಭದಲ್ಲಿ ದಾಖಲೆಗಳು ಇಲ್ಲದಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಅತಿಥಿ ಉಪನ್ಯಾಸಕರು ಹೆಚ್ಚಚ್ಚು ಕಾರ್ಯ ಪ್ರವೃತ್ತರಾಗಬೇಕು. ಹಿರಿಯ ಉಪನ್ಯಾಸಕರು ಹಾಗೂ ಪಾಲಕರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿಗೆ ವಿದ್ಯಾರ್ಥಿಗಳ ಅಧ್ಯಯನಕ್ಕೆ ಮಾಡಿ ಕೊಡಬೇಕೆಂದು ತಿಳಿಸಿದರು.

ಶ್ರೀಗಳ, ಹಿರಿಯರ, ಮುಖಂಡರ ಜೊತೆಗಿನ ಚರ್ಚೆ, ಮಧುರ ಬಾಂಧವ್ಯವನ್ನು ವೇದಿಕೆಯಲ್ಲಿ ಹಂಚಿಕೊಂಡ ಅವರು ದೂರದೃಷ್ಟಿ, ಆರ್ಥಿಕ ಬೆಳವಣಿಗೆ, ದೇಶದ ಪ್ರಗತಿ, ಫಲಿತಾಂಶ ಸುಧಾರಣೆ ಕುರಿತಂತೆ ಉತ್ತಮ ವಿಚಾರಗಳನ್ನು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾರ್ಯಾಧ್ಯಕ್ಷ ವ್ಹಿ.ಎಸ್. ದಲಾಲಿ ಫಲಿತಾಂಶ ಸುದಾರಣೆಗಾಗಿ ಪ್ರತಿವರ್ಷ ಇಂತಹ ಕಾರ್ಯಗಳನ್ನು ಹಮ್ಮಿಕೊಂಡು ಸತತ ಪ್ರಯತ್ನಮಾಡಿ ಸಂಸ್ಥೆಯು ಅಚ್ಚುಕಟ್ಟಾಗಿ ಮಾಡುತ್ತಿದೆ. ಕಾರ್ಯಾಗಾರ ಸದೂಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು.

ಹಿರಿಯ ಉಪನ್ಯಾಸಕ ಎನ್.ಜಿ ಇಬ್ರಾಹಿಂ ಕಲೀಲುಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಸಮಾರಂಭದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ, ಸಾಧಕರಿಗೆ ಹಾಗೂ ನಿವೃತ್ತರಿಗೆ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಹಚ್.ಎಸ್. ಕಿಂದ್ರಿ, ವಾಯ್.ಸಿ. ಪಾಟೀಲ, ಪ್ರಾ ಎಮ್.ಸಿ. ಕಟ್ಟಿಮನಿ, ಪ್ರಾ. ಎಸ್.ಎಸ್. ಸೋಮಣ್ಣವರ ಬಿ.ಎಸ್. ಮಲ್ಲಾಪೂರ ಸೇರಿದಂತೆ ಪಪೂ ಕಾಲೇಜಗಳ ಪ್ರಾಚಾರ್ಯರ ಸಂಘಧ ಹಾಗೂ ಪಪೂ ಕಾಲೇಜಗಳ ಉಪನ್ಯಾಸಕರ ಸಂಘದ ಪದಾಧಿಕಾರಿಗಳು ಹಾಗೂ ಮುಂತಾದವರು ಉಪಸ್ಥಿತರಿದ್ದರು.

> ಸಂಘದ ಆರಂಭದ ಪೂರ್ವದ ಫಲಿತಾಂಶ ಸಂಘದ ಕಾರ್ಯ ಚಟುವಟಿಕೆಗಳಿಂದಾಗಿ ಫಲಿತಾಂಶ ಸುದಾರಣೆಯಾಗಿದೆ. ಅರ್ಥ ಚೇತನ ಪುಸ್ತಕದಿಂದ ವಿದ್ಯಾರ್ಥಿಗಳ ಅನುಕೂಲವಾಗಿದೆ ಎಂದು ಹೇಳಿದರು. ಸಾರಿಗೆ ವ್ಯವಸ್ಥೆ, ಮೂಲಭೂತ ಸೌಕರ್ಯಗಳನ್ನು ಒದಗಿಸಿದಾಗ ಅರ್ಥ ವ್ಯವಸ್ಥೆ ಮತ್ತು ದೇಶದ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ದೇಶದ ಆರ್ಥಿಕತೆ ಹೆಚ್ಚಿಸಲು ಸಾಕಷ್ಟು ಅಧ್ಯಯನ ಮಾಡಿ, ಆರ್ಥಿಕ ಲೇಖನಗಳನ್ನು ಬರೆಯುವ ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಆರ್ಥಿಕ ವಿಚಾರಗಳನ್ನು ಹಂಚಿಕೊಳ್ಳಬೇಕೆಂದು ಹೇಳಿದರು.
> -ಎಸ್.ಎಸ್. ಪಟ್ಟಣಶೆಟ್ಟಿ, ಆರ್ಥಿಕ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಅಧ್ಯಕ್ಷ

---



ಉದಯವಾಹಿನಿ ಚಿತ್ರ

**ಕೆಂಭಾವಿ:** ಹೋಬಳಿ ವಲಯ ಮಟ್ಟದ ಕ್ರೀಡಾಕೂಟವನ್ನು ಏರ್ಪಡಿಸಲಾಗಿತ್ತು. ಬ್ರಿಲಿಯಂಟ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕಬ್ಬಡಿಯಲ್ಲಿ ದ್ವಿತೀಯ ಸ್ಥಾನ ಪಡೆದರು ಹಾಗೂ ಥ್ರೋ ಬಾಲ್ ಬಾಲಕರು ದ್ವಿತೀಯ ಸ್ಥಾನ, ಬಾಲಕಿಯರು ವಾಲಿಬಾಲ್ ಪಂದ್ಯದಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಶಾಲೆಯ ಕೀರ್ತಿ ತಂದುಕೊಟ್ಟಿದ್ದಾರೆ ಎಂದು ಶಾಲೆಯ ಕಾರ್ಯದರ್ಶಿ ಎಸ್. ಎಸ್ ಮಾಲಿಪಾಟೀಲ್, ಮುಖ್ಯ ಗುರುಗಳು ಎನ್. ಎಸ್. ಮಾಲಿಪಾಟೀಲ್ ಹಾಗೂ ಸಿಬ್ಬಂದಿವರ್ಗದವರುಹರ್ಷ ವ್ಯಕ್ತಪಡಿಸಿದರು.

---

### ಧರ್ಮಸ್ಥಳ ವಿರುದ್ದದ ಅಪಪ್ರಚಾರಗಾರರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಜೈನ್ ಸಮಾಜ ಆಗ್ರಹ

• **ಉದಯವಾಹಿನಿ ಮುದ್ದೇಬಿಹಾಳ**

ಸುಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆ ಅವರ ವಿರುದ್ಧ ನಿರಾಧಾರ ಆರೋಪಗಳು ಹಾಗೂ ಅಪಪ್ರಚಾರ ನಡೆಸುತ್ತಿರುವವರನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಲು ಮುದ್ದೇಬಿಹಾಳ ತಾಲ್ಲೂಕು ಜೈನ್ ಸಮಾಜದ ಮುಖಂಡರು ಮಂಗಳವಾರ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಜೈನ್ ಸಮಾಜದ ಮುಖಂಡರಾದ ಅಶೋಕ ಮಣಿ, ಮಹಾವೀರ ಸಗರಿ, ನ್ಯಾಯವಾದಿ ಶಾಂತಿನಾಥ ಸಗರಿ ಮಾತನಾಡಿ, ಧರ್ಮಸ್ಥಳದ ವಿರುದ್ಧ ಕಾಣದ ಕೈಗಳು ಕೆಲಸ ಮಾಡುತ್ತಿವೆ. ವಿದೇಶದಿಂದ ಹಣ ಹರಿದು ಅಪಪ್ರಚಾರ ನಡೆಯುತ್ತಿದೆ. ಮಹಿಳೆಯರ ಮೇಲೆ ಅತ್ಯಾಚಾರ, ಕೊಲೆಗಳ ಆರೋಪಗಳೆಲ್ಲಾ ಸುಳ್ಳು. ಇಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು, ಎಂದು ಆಗ್ರಹಿಸಿದರು. ಡಾ. ವಿರೇಂದ್ರ ಹೆಗಡೆ ಅವರು ಉಚಿತ ಸಾಮೂಹಿಕ ವಿವಾಹ, ದೇವಾಲಯಗಳ ಜೀರ್ಣೋದ್ಧಾರ, ಶೈಕ್ಷಣಿಕ ನೆರವು, ಮಹಿಳಾ ಸಬಲೀಕರಣ ಸೇರಿದಂತೆ ಅನೇಕ ಜನಪರ ಸೇವೆಗಳನ್ನು ಸ್ಮರಿಸಿದರು.



ಉದಯವಾಹಿನಿ ಚಿತ್ರ

ಇಂತಹವರ ವಿರುದ್ಧ ಷಡ್ಯಂತ್ರ ನಡೆದರೆ ಸಮಾಜ ಮೌನವಾಗಿರುವುದಿಲ್ಲ. ಗಿರೀಶ ಮಟ್ಟನವರ, ಮಹೇಶ್ ತಿಮರೋಡಿ ಅವರ ಮೇಲೂ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ತಪ್ಪದು, ಎಂದು ಎಚ್ಚರಿಕೆ ನೀಡಿದರು. ತಹಶಿಲ್ದಾರ ಕೀರ್ತಿ ಚಾಲಕ ಅವರಿಗೆ ಮನವಿಯನ್ನು ಸಲ್ಲಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಪ್ರಭು ಕಡಿ, ಹಿಂದೂ ಮುಖಂಡ ಬಸಯ್ಯ ನಂದಿಕೇಶ್ವರಮಠ ಜೈನ್ ಸಮಾಜದ ಮುಖಂಡರಾದ ಮಾಣಿಕಚಂದ ದಂಡಾವತಿ, ಬಾಹುಬಲಿ ಗೋಗಿ, ಭೀಮರಾಯ ದೂಡಮನಿ, ಸೇರಿದಂತೆ ಜೈನ್ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

> ಅಲ್ಪಸಂಖ್ಯಾತರೆಂದರೆ ಕೇವಲ ಮುಸ್ಲಿಮರು ಮಾತ್ರವಲ್ಲ, ಜೈನರೂ ಒಳಗಾಗುತ್ತಾರೆ. ಅವರ ರಕ್ಷಣೆ ಸರ್ಕಾರದ ಕರ್ತವ್ಯ. ಧರ್ಮಸ್ಥಳ ಹಿಂದು ಹಾಗೂ ಜೈನ ಧಾರ್ಮಿಕ ಕೇಂದ್ರ. ಇದರ ಗೌರವ ಹಾಳುಮಾಡುವ ಪ್ರಯತ್ನವನ್ನು ಹಿಂದೂ ಸಮಾಜ ಸಹಿಸುವುದಿಲ್ಲ.
> -ಸಿದ್ದರಾಜ ಹೋಳಿ, ಹಿಂದೂ ಮುಖಂಡ

---

### ಪುಸ್ತಕ ಓದಿಗೆ ಗ್ರಂಥಾಲಯ ಸಹಕಾರಿ: ಬಂಡೆ

• **ಉದಯವಾಹಿನಿ ವಿಜಯಪುರ**

ಪ್ರತಿ ಜೀವಿಗೆ ಬದುಕಲು ನೀರು,ಗಾಳಿ, ಬೆಳಕು, ಆಹಾರ ಹೇಗೆ ಮುಖ್ಯವೊ ಹಾಗೆಯೇ ಮನುಷ್ಯ ಮನುಷ್ಯತ್ವದಿಂದ ಬದುಕಲು ಪುಸ್ತಕಗಳು ಬಹುಮುಖ್ಯ. ಪುಸ್ತಕ ಓದಿಗೆ ಗ್ರಂಥಾಲಯ ಸಹಕಾರಿಯಾಗಿದ್ದು, ಅಲ್ಲಿ ಗ್ರಂಥಪಾಲಕರ ಪಾತ್ರ ಅತೀ ಮಹತ್ವದ್ದಾಗಿದೆ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ಮಂಗಳವಾರ ತಾಲ್ಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಡಾ.ಎಸ್ ಆರ್ ರಂಗನಾಥನ್ ಅವರ ಜನ್ಮದಿನದ ನಿಮಿತ್ತ ಹಮ್ಮಿಕೊಂಡ 'ಗ್ರಂಥಪಾಲಕರ ದಿನವನ್ನು ಉದ್ಘಾಟಿಸಿ ಮಾತನಾಡಿದರು.

ಪುಸ್ತಕ ಮನುಷ್ಯನ ಮಿತ್ರ, ಜ್ಞಾನ ನೀಡುವ ಕಾಮಧೇನು, ವ್ಯಕ್ತಿತ್ವ ನಿರ್ಮಾಣದ ಹೆಬ್ಬಾಗಿಲು, ಪುಸ್ತಕ ಖರೀದಿಸಲು ಸಾಧ್ಯವಾಗದ ಜ್ಞಾನದಾಹಿಗೆ ಪುಸ್ತಕಾಲಯಗಳು ಒಂದು ವರ ಇದ್ದಂತೆ, ಇಲ್ಲಿ ಪುಸ್ತಕ ಜತೆಗೆ ಸುದ್ದಿಪತ್ರಿಕೆ ಓದುವ ಸವಲತ್ತು ಇದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಇಂಡಿ ಸರಕಾರಿ ಐಟಿಐ ಕಾಲೇಜಿನ ಪ್ರಾಚಾರ್ಯ ಪಿ ವೈ ರಜನಿಕರ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಂಥಾಲಯಗಳು ಜ್ಞಾನದ ಸಾಗರವಿದ್ದಂತೆ. ವ್ಯಕ್ತಿಯ ಜ್ಞಾನವನ್ನು ವಿಸ್ತರಿಸಲು ಗ್ರಂಥಾಲಯ ಬಹಳ ಉಪಯುಕ್ತವಾಗಿದೆ. ಪುಸ್ತಕಗಳು ಮಾನವರ ಉತ್ತಮ ಸ್ನೇಹಿತರು ಎಂದು ಹೇಳಿದರು. ಮಲ್ಲಿಕಾರ್ಜುನ ನಂದ್ಯಾಳ, ವಿಶ್ವನಾಥ ಹಂಡಿ, ಆನಂದ ಗಂಗನಳ್ಳಿ, ಬಸವರಾಜ ಸಾರವಾಡ, ಜಟ್ಟಿಂಗರಾಯ ಕಕ್ಕರೆಗೋಳ ಸೇರಿದಂತೆ ಅನೇಕ ಮಕ್ಕಳು ಭಾಗವಹಿಸಿದ್ದರು.

---

### ಪುರಸಭೆ ಮುಖ್ಯಾಧಿಕಾರಿಗಳಿಗೆ ಆರ್‌ಪಿಡಿ ಟಾಸ್ಕ್ ಪೋರ್ಸ್ ಒಕ್ಕೂಟದಿಂದ ಮನವಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕೆಂಭಾವಿ**

ಪುರಸಭೆ ಮುಖ್ಯಾಧಿಕಾರಿಗಳಾದ ಮಹಮ್ಮದ್ ಯೂಸುಫ್ ಅವರಿಗೆ ವಿಕಲಚೇತನರಿಗೆ ಮೀಸಲಾಗಿ ಇಟ್ಟಿರುವ 5% ಅನುದಾನದಲ್ಲಿ ಸ್ವಯಂ ಉದ್ಯೋಗ, ಸಾಧನ ಸಲಕರಣೆ, ವಿಶೇಷ ಶೌಚಾಲಯ, ಮತ್ತು ಅಡೆ ತಡೆ ಮುಕ್ತ ವಾತಾವರಣವನ್ನು ನಿರ್ಮಾಣ ಮಾಡುವುದು. ವಿಕಲಚೇತನರ ಕುಂದು ಕೊರತೆ ಸಭೆ ಮಾಡುವುದು ಮತ್ತು ತಮ್ಮ 5% ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡುವಂತೆ ಮನವಿ ಪತ್ರವನ್ನು ನೀಡಿದರು. ಆರ್ ಪಿ ಡಿ ಟಾಸ್ಕ್ ಪೋರ್ಸ್ ಒಕ್ಕೂಟದ ಪದಾಧಿಕಾರಿಗಳಾದ ಶರಣಪ್ಪ ಬಡಿಗೇರ್, ಬಸವರಾಜ್ ಪೂಜೇರಿ, ಭೀಮನಗೌಡ ಪಾಟೀಲ್, ಆದಪ್ಪ, ಲಕ್ಷ್ಮೀ ಮತ್ತು ಎ ಪಿ ಡಿ ಸಂಸ್ಥೆಯ ಗಿರೀಶ್ ಕುಲಕರ್ಣಿ, ಮಾಂತೇಶ್ ಕುಂಬಾರ, ಲಕ್ಷ್ಮೀ ಹಾಲರ್, ಸರೋಜ, ಸುಮಿತ್ರಾ ಮತ್ತು ವಿಕಲಚೇತನರು ಉಪಸ್ಥಿತರಿದ್ದರು.

---

### ಗೌರಿಗಣೇಶ ಈದ್ ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಿ

• **ಉದಯವಾಹಿನಿ ವಡಗೇರಾ**

ಗೌರಿ ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಬ್ಬವನ್ನು ಸೌಹಾರ್ದತೆವಾಗಿ ಆಚರಿಸುವಂತೆ ವಡಗೇರಾ ಪೊಲೀಸ್ ಠಾಣೆ ಪಿಎಸ್ಐ ಮೈಬೂಬ ಅಲಿ ಹೇಳಿದರು. ಸೋಮವಾರದಂದು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗೌರಿ ಗಣೇಶ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ತಾಲ್ಲೂಕಿನ ಸಾರ್ವಜನಿಕರ ಶಾಂತಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಹಬ್ಬಗಳ ಆಚರಣೆಯಲ್ಲಿ ಯಾವುದೇ ರೀತಿಯಾದ ಕೋಮುಗಲಭೆ ಸೃಷ್ಟಿಯಾಗದಂತೆ ಶಾಂತಿಯುತವಾಗಿ ಆಚರಿಸಬೇಕು ಇನ್ನೊಬ್ಬರಿಗೆ ಕಿರುಕುಳ ಆಗುವ ರೀತಿಯಲ್ಲಿ ಧ್ವನಿವರ್ಧಕಗಳನ್ನು ಬಳಸಬಾರದು ಗಣೇಶ ಕುರಿಸುವವರು ಸಂಬಂಧಿಸಿದ ಅಧಿಕಾರಿಗಳ ಪರವಾನಿಗೆ ಪಡೆಯಬೇಕು ಮತ್ತು ಸಮಾಜದಲ್ಲಿ ಅಶಾಂತಿ ಉಂಟುಮಾಡುವ ಕಿಡಿಗೇಡಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.



ಉದಯವಾಹಿನಿ ಚಿತ್ರ

---

### ಗುದ್ದಲಿ ಪೂಜೆ ಕಾರ್ಯಕ್ರಮ

• **ಉದಯವಾಹಿನಿ ಚನ್ನಮ್ಮನ ಕಿತ್ತೂರು**

ನಾವು ಸಂಸ್ಥೆಗೆ ಒಳ್ಳೆಯದು ಬಯಸಿದರೆ ಸಂಸ್ಥೆ ನಮಗೆ ಒಳ್ಳೆಯದು ಬಯಸುತ್ತದೆ. ಸಂಸ್ಥೆಯನ್ನು ಅಭಿವೃದ್ಧಿಯತ್ತ ಕೊಂಡೊಯುವ ನಿಟ್ಟಿನಲ್ಲಿ ಕೆಲಸ ಮಾಡಿದರೆ ನಮಗೂ, ರೈತರಿಗೂ, ಸಂಸ್ಥೆಗೂ ಒಳ್ಳೆಯದು ಎಂದು ಮಾಜಿ ಶಾಸಕ ಹಾಗೂ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಹಾಂತೇಶ ದೊಡ್ಡಗೌಡರ ಹೇಳಿದರು.

ತಾಲೂಕಿನ ದೇವಗಾಂವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆವರಣದಲ್ಲಿ ಶಿಲಾಫಲಕ ಅನಾವರಣಗೊಳಿಸಿ ಗೋದಾಮ ನಿರ್ಮಿಸಲು ಭೂಮಿಗೆ ಗುದ್ದಲಿ ಪೂಜೆ ನೇರವೇರಿಸಿ ಮಾತನಾಡಿ ಇಲ್ಲಿ ಜಾತಿ-ಭೇದ-ಪಕ್ಷ ಮರೆತು ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬ ಸಹಕಾರ ಭಾವನೆಯಿಂದ ನಡೆದಾಗ ಸಂಸ್ಥೆ ಮುಂದೆಬರಲು ಸಾಧ್ಯ. ಸರಕಾರ ರೈತರಿಗೆ ಶೂನ್ಯ ದರದಲ್ಲಿ ಬಡ್ಡಿ ಸಾಲ ವಿತರಿಸುತ್ತಿದೆ. ಕೇಂದ್ರ ಸರ್ಕಾರ 3% ಇನ್ನುಳಿದದ್ದನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಈ ಸಂಸ್ಥೆಗೆ ಡಿಸಿಸಿ ಬ್ಯಾಂಕ್ ಮುಖಾಂತರ ಶೂನ್ಯ ಬಡ್ಡಿದರದಲ್ಲಿ ರೂ.4 ಕೋಟಿ 75 ಲಕ್ಷ ಸಾಲ ಕೊಡಿಸಲಾಗಿದೆ. ಅದಲ್ಲದೇ ರೈತರಿಗೆ ಅಪಘಾತ ವಿಮೆ ಅಂತಾ ರೈತರಿಂದ 33, ಸಂಸ್ಥೆ 33, ಬ್ಯಾಂಕ್ 33 ಭರಿಸಿ ಯಾವುದೇ ಅಹಿತರವಾದ ಘಟನೆ ಸಂಭವಿಸಿದರೆ ಅಂತವರಿಗೆ ರೂ. 2 ಲಕ್ಷದ ವರೆಗೆ ವಿಮೆ ಕೊಡುವ ವ್ಯವಸ್ಥೆ ಸಂಸ್ಥೆ ಮಾಡುತ್ತವೆ ಎಂದರು. ಸಂಸ್ಥೆಯ ಅಧ್ಯಕ್ಷ ರಮೇಶ ಉಗಖೋಡ ಮಾತನಾಡಿದರು.



ಉದಯವಾಹಿನಿ ಚಿತ್ರ

---

### ವಿಮ್ಸ್ ಮೈದಾನದಲ್ಲಿ ಸ್ವಾತಂತ್ರ್ಯೋತ್ಸವದ ತಾಲೀಮು

• **ಉದಯವಾಹಿನಿ ಬಳ್ಳಾರಿ,**

ನಗರದ ವಿಮ್ಸ್ ಮೈದಾನದಲ್ಲಿ ಆ.15 ರಂದು ನಡೆಸಲಿರುವ ಸ್ವಾತಂತ್ರ್ಯೋತ್ಸವ ಸಾರ್ವಜನಿಕ ಸಮಾರಂಭಕ್ಕೆ ಪಥ ಸಂಚಲನೆ ಮಾಡುವ ತುಕಡಿಗಳಿಂದ ತಾಲೀಮು ಆರಂಭಗೊಂಡಿದೆ. ಮೈದಾನದಲ್ಲಿ ಡಿಎಆರ್ ಡಿವೈಎಸ್ಪಿ ನೇತೃತ್ವದಲ್ಲಿ ಪೊಲೀಸ್, ಎನ್ಸಿಸಿ, ಗೃಹರಕ್ಷಕ ದಳ, ಶಾಲಾ ಮಕ್ಕಳಿಂದ ಪಥ ಸಂಚನೆಯ ತಾಲೀಮು ನಡೆಸಲಾಯ್ತು. ಯಾವ ತುಕಡಿಯವರು ಎಲ್ಲಿ ನಿಲ್ಲಬೇಕು, ಹೇಗೆ ಸಾಗಬೇಕು. ಹೇಗೆ ಗಣ್ಯರು ಧ್ವಜಾರೋಹಣ ಮಾಡಿದ ನಂತರ ಧ್ವಜ ವಂದನೆ ಕೈಗೊಳ್ಳಬೇಕು ಎಂಬುದರ ಮಾರ್ಗ ದರ್ಶನ ನೀಡಲಾಯ್ತು.

---

# ಶಾಲಾ ಮಕ್ಕಳ ಆಧಾರ್ ನೋಂದಣಿಗೆ ಅಭಿಯಾನ

## 5ರಿಂದ 7ವರ್ಷ ಹಾಗೂ 15 ರಿಂದ 17 ವರ್ಷದೊಳಗಿನ ಮಕ್ಕಳಿಗೆ ಒಂದು ಬಾರಿಗೆ ಉಚಿತ ನವೀಕರಣಕ್ಕೆ ಅವಕಾಶ

• **ಉದಯವಾಹಿನಿ ಬಾಗಲಕೋಟೆ**

ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿರುವ ಮಕ್ಕಳ ಆಧಾರ್ ನೋಂದಣಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಆಧಾರ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿಯೊಂದು ಮಗು ಆಧಾರ್ ಕಾರ್ಡ ಹೊಂದುವುದು ಅಗತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಪ್ರತಿ ಶಾಲೆಗಳಲ್ಲಿ ಅಭಿಯಾನ ಹಮ್ಮಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ರೂಟ್ ಮ್ಯಾಪ್ ಹಾಕಿಕೊಳ್ಳಬೇಕೆಂದು ಸೂಚನೆ ನೀಡಿದರು.

> ಹೊಸದಾಗಿ ಆಧಾರ್ ನೋಂದಣಿ, ಲಿಂಗ, ಜನ್ಮ ದಿನಾಂಕ, ವಿಳಾಸ, ಮೊಬೈಲ್ ಸಂಖ್ಯೆಗಳ ಸರಿಪಡಿಸುವಿಕೆ, ನವೀಕರಣಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಸರಿಪಡಿಸಲು ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಡೆದುಕೊಳ್ಳತಕ್ಕದ್ದು. ನಿಗದಿತ ಹಣಕ್ಕಿಂತ ಹೆಚ್ಚಿನ ಹಣ ಪಡೆದಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು. -ಡಿಸಿ

5ರಿಂದ 7ವರ್ಷ ಹಾಗೂ 15 ರಿಂದ 17 ವರ್ಷದೊಳಗಿನ ಮಕ್ಕಳಿಗೆ ಒಂದು ಬಾರಿಗೆ ಉಚಿತ ನವೀಕರಣಕ್ಕೆ ಅವಕಾಶವಿದೆ. ಇಲ್ಲದಿದ್ದಲ್ಲಿ 100 ನೀಡಬೇಕಾಗುತ್ತದೆ. ಬಯೋಮೆಟ್ರಿಕ್ ನವೀಕರಣ ಸಮಯದಲ್ಲಿ ಮಾಡಿದರೆ ಉಚಿತವಾಗಿದ್ದು, ಪ್ರತ್ಯೇಕವಾಗಿ 50 ಶುಲ್ಕವಿರುತ್ತದೆ ಎಂದರು.



ಉದಯವಾಹಿನಿ ಚಿತ್ರ

ಮೈಆಧಾರ್ ಪೋರ್ಟಲ್‌ನಲ್ಲಿ ಮುಂದಿನ ವರ್ಷ ಜೂನ್ 14 ರವರೆಗೆ ಉಚಿತವಾಗಿದೆ. ಆಧಾರ್ ಕೇಂದ್ರದಲ್ಲಿ ಮಾತ್ರ 50 ಶುಲ್ಕ ಪಾವತಿಸಿ ನವೀಕರಣ ಮಾಡಿಕೊಳ್ಳಬಹುದಾಗಿದೆ. ನಕಲಿ ಆಧಾರ್ ಕಾರ್ಡ್ ಕಂಡುಬಂದಲ್ಲಿ ತಕ್ಷಣ ಹತ್ತಿರದ ಪೊಲೀಸ್ ಠಾಣೆಗಳಲ್ಲಿ ಮಾಹಿತಿ ನೀಡಬೇಕೆಂದು ಅವರು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಆಧಾರ್ ನವೀಕರಣದ ಬಗ್ಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪೋಸ್ಟರ್, ಕರಪತ್ರ ಹಂಚುವ ಮೂಲಕ ಅರಿವು ಮೂಡಿಸುವ ಕೆಲಸವಾಗಬೇಕು. ಅಂದಾಗ ಮಾತ್ರ ಆಧಾರ್ ನವೀಕರಣಕ್ಕೆ ಜನ ಮುಂದಾಗುತ್ತಾರೆ ಎಂದು ತಿಳಿಸಿದರು. ಯುಐಡಿಎಐನ ಸಹಾಯಕ ವ್ಯವಸ್ಥಾಪಕ ಡೇವಿಡ್ ಮಾತನಾಡಿ, ಜಿಲ್ಲೆಯಲ್ಲಿ 144 ಆಧಾರ್ ನೋಂದಣಿ ಕೇಂದ್ರಗಳಿದ್ದು, 24,08,331 ಆಧಾರ್ ಕಾರ್ಡ ಜನರೇಟ್ ಮಾಡಲಾಗಿದೆ. ಇದರಲ್ಲಿ 0ದಿಂದ 5 ವರ್ಷದ 85,393 ಮಕ್ಕಳು, 5ರಿಂದ 18 6,90,755 8182 16,32,183, 22,89, 517 ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆ ಲಿಂಕ್ ಮಾಡಲಾಗಿದೆ. 1,18,814 ಮೊಬೈಲ್ ಲಿಂಕ್‌ಗೆ ಬಾಕಿ ಉಳಿದಿವೆ.

**ಪ್ರತಿ ಶಾಲೆಗಳಲ್ಲಿ ಅಭಿಯಾನ**

ಜಿಲ್ಲೆಯ 3,76,642 ವಿದ್ಯಾಥಿಗಳ ಪೈಕಿ 3,09,134 ವಿದ್ಯಾರ್ಥಿಗಳ ಆಧಾರ್ ಕಾರ್ಡ್ ಪರಿಶೀಲನೆಗೆ ಕಳುಹಿಸಿದ್ದು, ಆ ಪೈಕಿ 2,35,990 ಆಧಾರ್ ಕಾರ್ಡ್ ಪೂರ್ಣಗೊಂಡಿವೆ ಎಂದು ಸಭೆಗೆ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಶಾಲಾ ಶಿಕ್ಷಣ ಇಲಾಖೆಯ ಉಪ ಸಮನ್ವಯಾಧಿಕಾರಿ ಸಿ.ಆರ್.ಓಣಿ, ಅಂಚೆ ಕಚೇರಿಯ ಅಧೀಕ್ಷಕ ಹಸಬಿ, ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ರಾಜಶೇಖರ ಹೂಗಾರ, ಜಿಲ್ಲಾ ಆಧಾರ ಸಮಾಲೋಚಕ ಸಿದ್ದಪ್ಪ ಇದ್ದರು.

